# ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರದ 2016-17 ರಿಂದ 2019-20 ನೇ ಸಾಲಿನ ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ಕೈಗೊಂಡ ಆಡಿಟ್ ವರದಿಯ ಆಕ್ಷೇಪಣೆಗಳು ಮತ್ತು ವಸೂಲಾತಿ ಕಂಡಿಕೆಗಳ ವರದಿ ಹಾಗು ಅನುಪಾಲನಾ ವರದಿ

**ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ 2016-17 ರಿಂದ 2019-20ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಆಡಿಟ್ ಆಕ್ಷೇಪಣೆಗಳು ಮತ್ತು ವಸೂಲಾತಿಯ ವಿವರಗಳ ತಃಖ್ತೆ**

| ಕ್ರ. ಸಂ | ಕಂಡಿಕೆ | ವಿವರ | ಆಕ್ಷೇಪಣೆ ಮೊತ್ತ (ರೂ.ಗಳಲ್ಲಿ) | ವಸೂಲಾತಿ (ರೂ.ಗಳಲ್ಲಿ) |
|---|---|---|---|---|
| 1 | 5.7* | ಲೆಕ್ಕಶೀರ್ಷಿಕೆಯ ಬದಲಾವಣೆಯಿಂದ, ಆಸ್ತಿ ಮೌಲ್ಯದಲ್ಲಿ ಬದಲಾವಣೆಯಾಗಿರುವುದು. | 1,05,37,109/- | - |
| 2 | 11.2 | ಅಲ್ಪಾವಧಿ ಠೇವಣಿಗಳ ಬಡ್ಡಿಯ ಮೇಲೆ ಆದಾಯ ತೆರಿಗೆಯನ್ನು ಕಟಾಯಿಸಿ ಪಾವತಿಸಿರುವುದು | | 6,92,163/- |
| 3 | 11.3* | ವಿಶ್ವವಿದ್ಯಾಲಯದ ಉಳಿತಾಯ ಖಾತೆಗಳಲ್ಲಿ ಬ್ಯಾಂಕ್‌ನಿಂದ ಕಟಾವಣೆ ಮಾಡಿರುವುದು. | | 77,046/- |
| 4 | 11.4* | 2017-18 ಮತ್ತು 2019-20ನೇ ಸಾಲಿನವರೆಗೆ ಸಂಯೋಜನೆ ಶುಲ್ಕದ ಸ್ವೀಕೃತಿಗಳನ್ನು ಬ್ಯಾಂಕ್ ಖಾತೆಯೊಂದಿಗೆ ಲೆಕ್ಕ ಸಮನ್ವಯಗೊಳಿಸದಿರುವುದು ಹಾಗೂ ಡಿ.ಸಿ.ಬಿ ನಿರ್ವಹಿಸದಿರುವುದು ಮತ್ತು ಜಿ.ಎಸ್.ಟಿ ಸಂಗ್ರಹಣೆ ಮಾಡದಿರುವುದು | | 2,63,48,679/- |
| 5 | 11.6 | ಸಂಯೋಜನಾ ಶುಲ್ಕಕ್ಕೆ ಸಂಬಂಧಿಸಿದಂತೆ, ತಡಪಾವತಿ ಶುಲ್ಕ ವಸೂಲಾತಿ ಮಾಡದಿರುವುದು | | 2,17,000/- |
| 6 | 11.7* | ವಿಶ್ವವಿದ್ಯಾಲಯದ ಕಾಲೇಜುಗಳಿಂದ ಸಂಯೋಜನಾ ಶುಲ್ಕ ವಸೂಲಿಸದಿರುವುದು. | | 20,18,558/- |
| 7 | 11.8* | 2017-18 ರಿಂದ 2019-20ನೇ ಸಾಲಿನವರೆಗೆ ಪರೀಕ್ಷಾ ಶುಲ್ಕದ ಸ್ವೀಕೃತಿಗಳನ್ನು ಬ್ಯಾಂಕ್ ಖಾತೆಯೊಂದಿಗೆ ಲೆಕ್ಕ ಸಮನ್ವಯಗೊಳಿಸದಿರುವುದು. | | 1,74,81,084/- |
| 8 | 11.9 | ಬಿ.ಎಡ್ ಸಂಯೋಜಿತ ಕಾಲೇಜುಗಳ ಪ್ರವೇಶಾತಿ ಅನುಮೋದನೆ ಶುಲ್ಕ ವಿಳಂಬವಾಗಿ ಪಾವತಿಸಿರುವ ಕಾಲೇಜುಗಳಿಂದ ದಂಡ ಶುಲ್ಕ ವಸೂಲಿಸದಿರುವುದು | | 2.62.000/- |
| 9 | 11.10 | ಬಿ.ಎಡ್ ಕಾಲೇಜುಗಳ ಸಂಯೋಜನಾ ಶುಲ್ಕಕ್ಕೆ ಸಂಬಂಧಿಸಿದಂತೆ, ತಡಪಾವತಿ ಶುಲ್ಕ ವಸೂಲಿಸಿರುವುದು | | 29,000/- |
| 10 | 11.11* | ವಿಶ್ವವಿದ್ಯಾಲಯದ ಬಿ.ಎಡ್., ಕಾಲೇಜುಗಳಿಂದ ಪ್ರವೇಶಾತಿ ಶುಲ್ಕ ವಸೂಲಿಸದಿರುವುದು | | 76,133/- |
| 11 | 11.12 | ವಿಶ್ವವಿದ್ಯಾಲಯದ ಬಿ.ಎಡ್., ಕಾಲೇಜುಗಳಿಂದ ಪ್ರವೇಶಾತಿ ಶುಲ್ಕ ವಸೂಲಿಸದಿರುವುದು | | 11,091/- |
| 12 | 11.13* | 2018-19 ಮತ್ತು 2020-21ನೇ ಸಾಲಿನವರೆಗೆ ಪ್ರವೇಶಾತಿ ಶುಲ್ಕದ ಸ್ವೀಕೃತಿಗಳನ್ನು ಬ್ಯಾಂಕ್ ಖಾತೆಯೊಂದಿಗೆ ಲೆಕ್ಕ ಸಮನ್ವಯಗೊಳಿಸದಿರುವುದು ಹಾಗೂ ಡಿ.ಸಿ.ಬಿ ನಿರ್ವಹಿಸದಿರುವುದು. | | 1,03,31,346/- |
| 13 | 11.14 | ಯು.ಜಿ ವಿದೇಶಿ ವಿದ್ಯಾರ್ಥಿಗಳಿಂದ ಅರ್ಹತಾ ಶುಲ್ಕವನ್ನು ವಸೂಲಿಸದಿರುವುದು. | | 2,51,860/- |
| 14 | 11.15 | ಯು.ಜಿ, ಪಿ.ಜಿ, ವಿದ್ಯಾರ್ಥಿಗಳಿಂದ ಕ್ರೀಡಾ ಶುಲ್ಕ ವಸೂಲಾತಿ ಮಾಡದೆ ಇರುವುದು. | | 5,77,312/- |
| 15 | 11.16 | ಪಿ.ಜಿ, ಪ್ರವೇಶಾತಿಗೆ ಸಂಬಂಧಿಸಿದಂತೆ ದಂಡ ವಸೂಲಾಸಿದಿರುವುದು. | | 2,48,000/- |
| 16 | 11.17 | ಪಿ.ಜಿ ಕಾಲೇಜುಗಳಿಂದ ಕ್ರೀಡಾ ಶುಲ್ಕ ವಸೂಲಿಸದಿರುವುದು. | | 4,53,450/- |
| 17 | 11.18 | ಸರ್ಕಾರಿ ಕಾಲೇಜುಗಳಿಂದ ವಿಶ್ವವಿದ್ಯಾಲಯಕ್ಕೆ ಜಮೆಯಾಗಬೇಕಾಗಿರುವ ಮೊತ್ತದ ಬಗ್ಗೆ ವಿವರಗಳಿಲ್ಲದಿರುವುದು. | 1,09,54,510/- | |

| | | | | |
|---|---|---|---|---|
| 41 | 14.1 | ಪರೀಕ್ಷಾ ಮೌಲ್ಯಮಾಪನ ಕೇಂದ್ರಗಳಿಗೆ ಉಪಕರಣ ಅಳವಡಿಸಲು ಕಿಯೋನಿಕ್ಸ್ ಸಂಸ್ಥೆಗೆ ಪಾವತಿಸಿರುವ ಕುರಿತು | | 18,875/- |
| 42 | 20.1 | ಅತಿಥಿ ಉಪನ್ಯಾಸಕರಿಗೆ ನೇಮಕಾತಿಗೆ ಸಂಬಂಧಿಸಿದಂತೆ ನ್ಯೂನತೆಗಳು | 1,52,27,669/- | 15,22,767/- |
| 43 | 20.2* | ನಿವೃತ್ತ ಅಧಿಕಾರಿಗಳು/ನೌಕರರನ್ನು ನೇಮಿಸಿಕೊಂಡು ವೇತನ ಪಾವತಿಸಿರುವುದು | 15,59,801/- | |
| 44 | 21.1* | ಬೋಧಕೇತರ ಸಿಬ್ಬಂದಿಗಳ ನೇಮಕಕ್ಕೆ ಸಂಬಂಧಿಸಿದಂತೆ | 1,19,01,731/- | |
| 45 | 21.2 | ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999ರ ಮತ್ತು ನಿಯಮ 2000 ರನ್ನು ಉಲ್ಲಂಘಿಸಿ ಟೆಂಡರ್ ಪಡೆಯದೇ ಸೆಕ್ಯೂರಿಟೀಸ್/ಸ್ವಚ್ಛತಾ ಕಾರ್ಯ ಸಿಬ್ಬಂದಿಗಳನ್ನು ಪಡೆದಿರುವುದು | 28,02,834/- | 10,561/- |
| 46 | 22.1 | ಬೋರ್ಡ್ ಆಫ್ ಸ್ಟೇಡಿಸ್ (BOS)ಗೆ ಸಂಬಂಧಿಸಿದ ಭತ್ಯೆಯನ್ನು ಪಾವತಿಸಿರುವುದು | 1,78,325/- | |
| 47 | 22.2 | BOE ಗೆ ಸಂಬಂಧಿಸಿದ ಭತ್ಯೆಯನ್ನು ಪಾವತಿಸಿರುವುದು | 13,48,747/- | 31,040/- |
| 48 | 22.3 | LIC ಸಮಿತಿ ಪಾವತಿಗೆ ಸಂಬಂದಿಸಿದಂತೆ | 4,73,792/- | |
| 49 | 22.4* | ಪರೀಕ್ಷಾ ಕಾರ್ಯಕ್ಕೆ ಸಂಬಂಧಿಸಿದಂತೆ "Squad Members" ಗೆ ಪಾವತಿಸಿರುವ ಬಗ್ಗೆ | 1,41,440/- | 24,025/- |
| 50 | 22.5 | ಪರೀಕ್ಷಾ ಮತ್ತು ಸಂಯೋಜನಾ ಕಾರ್ಯಕ್ಕೆ ಸಂಬಂಧಿಸಿದ ಟ್ರಾವೆಲ್ಸ್ ಬಿಲ್ಲುಗಳಲ್ಲಿನ ನ್ಯೂನತೆಗಳು | 15,07,642/- | 30,152/- |
| 51 | 23.1* | ಸ್ವಂತಕ್ಕೆ (Self Cheque) ಮೊತ್ತ ಸೆಳೆದಿರುವುದು | 3,96,324/- | |
| 52 | 23.2 | ಕೈ ನಗದು ಮುಂಗಡಗಳಿಗೆ ಸಮರ್ಪಕವಾದ ವಿವರಣೆ ಇಲ್ಲದಿರುವುದು | 1,72,146/- | |
| 53 | 23.3 | ಡಿ.ಸಿ ಬಿಲ್ಲುಗಳಿಗೆ ಸಂಬಂಧಿಸಿದ ನ್ಯೂನತೆಗಳು | 8,74,835/- | 3,811/- |
| 54 | 23.4 | ಮಂಜೂರಾತಿ ಪಡೆಯದೇ ವೆಚ್ಚ ಭರಿಸಿರುವುದು | 10,22,622/- | |
| 55 | 23.5 | ಡಿ.ಸಿ ಬಿಲ್ಲಿನ ಮತ್ತು Imprest ಬಿಲ್ಲುಗಳಿಗೆ ವಿವರಣೆ ಇಲ್ಲದಿರುವುದು | 21,00,014/- | |
| 56 | 24.1* | ಪರಿನಿಯಮವಿಲ್ಲದೆ ಮೌಲ್ಯಮಾಪನ ಕಾರ್ಯಗಳಿಗೆ ಹಾಗೂ ಪ್ರಯೋಗಾಲಯ ಪರೀಕ್ಷಾ ಕಾರ್ಯಕ್ಕಾಗಿ ಸಂಭಾವನೆ ಪಾವತಿಸಿರುವುದು | 1,10,94,922/- | |
| 57 | 25.2* | ಪರೀಕ್ಷಾ ಸೇವೆಗಳ ಸಂಗ್ರಹಣೆಯಲ್ಲಿ ನಡೆದ ಟೆಂಡರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ | 1,03,14,405/- | |
| 58 | 30.1* | ಎ.ಸಿ ಬಿಲ್ಲಿನ ಮುಂಗಡಕ್ಕೆ ಸಲ್ಲಿಸಿರುವ ಎನ್.ಡಿ.ಸಿ ಬಿಲ್ಲುಗಳ ಪರಿಶೀಲನೆಯಲ್ಲಿ ಕಂಡುಬಂದ ನ್ಯೂನತೆಗಳು. | 9,41,130/- | |
| 59 | 34.1 | Staffliablity ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಶಿಲ್ಕು ಉಳಿಸಿಕೊಂಡಿರುವುದು | 2,84,237/- | |
| | | **ಒಟ್ಟು** | **12,19,41,241/-** | **6,60,52,054/-** |

**ಸೂಚನೆ:** ಕಂಡಿಕೆಯ ಪಕ್ಕದಲ್ಲಿ ತೋರಿಸಿರುವ * ಚಿಹ್ನೆಯು ಅನುಪಾಲನಾ ವರದಿಯನ್ನು ಸಲ್ಲಿಸಲಾಗಿರುತ್ತದೆ.

# ಆಕ್ಷೇಪಣೆಯ ಕಂಡಿಕೆಗಳು

## ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ 2016-17 ರಿಂದ 2019-20ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಆಡಿಟ್ ಆಕ್ಷೇಪಣೆಗಳ ವಿವರ

| ಕ್ರ. ಸಂ | ಕಂಡಿಕೆ | ವಿವರ | ಆಕ್ಷೇಪಣೆ ಮೊತ್ತ (ರೂ.ಗಳಲ್ಲಿ) | ಪುಟದ ಸಂಖ್ಯೆ |
|---|---|---|---|---|
| 1 | 5.7 | ಲೆಕ್ಕಶೀರ್ಷಿಕೆಯ ಬದಲಾವಣೆಯಿಂದ, ಆಸ್ತಿ ಮೌಲ್ಯದಲ್ಲಿ ಬದಲಾವಣೆಯಾಗಿರುವುದು. | 1,05,37,109/- | 1 |
| 2 | 11.18 | ಸರ್ಕಾರಿ ಕಾಲೇಜುಗಳಿಂದ ವಿಶ್ವವಿದ್ಯಾಲಯಕ್ಕೆ ಜಮೆಯಾಗಬೇಕಾಗಿರುವ ಮೊತ್ತದ ಬಗ್ಗೆ ವಿವರಗಳಿಲ್ಲದಿರುವುದು. | 1,09,54,510/- | 1 |
| 3 | 11.20 | ವಿಶ್ವವಿದ್ಯಾಲಯದ ಪಿ.ಜಿ ಸೆಂಟರ್ ಕೋಲಾರದ ಪ್ರವೇಶಾತಿ ಶುಲ್ಕ ವಸೂಲಾತಿ ಮಾಹಿತಿ ಇಲ್ಲದಿರುವುದು | 73,27,134/- | 2 |
| 4 | 11.23 | ಸಂಯೋಜನಾ ಕಾಲೇಜುಗಳು ಪ್ರತಿಯೊಂದು ಸ್ನಾತಕ ವಿದ್ಯಾರ್ಥಿಗಳಿಂದ ಕಟಾಯಿಸಿದ ಶೇ.30ರಷ್ಟು ಕ್ರೀಡಾ ಶುಲ್ಕಕ್ಕೆ ಉಪಯುಕ್ತ ಪ್ರಮಾಣ ಪತ್ರ ಸಲ್ಲಿಸದಿರುವುದು. | 1,04,55,790/- | 3 |
| 5 | 11.24 | ಸ್ವೀಕೃತಿ ಮರುಜಮೆಯಾಗಿರುವುದಕ್ಕೆ ಸಂಬಂಧಿಸಿದಂತೆ ವಿವರ ಇಲ್ಲದಿರುವುದು | 3,75,290/- | 4 |
| 6 | 11.25 | ಶುಲ್ಕ ಮರುಪಾವತಿಗೆ ಸಂಬಂಧಿಸಿದ ನ್ಯೂನತೆಗಳು | 4,89,000/- | 5 |
| 7 | 11.26 | ಸಂಯೋಜಿತ ಕಾಲೇಜಿಗೆ ಶುಲ್ಕ ವಾಪಸಾತಿ ಮಾಡಿರುವ ಬಗ್ಗೆ | 3,09,000/- | 5 |
| 8 | 12.1 | ಕೆಮಿಕಲ್ಸ್ ಖರೀದಿ ಟೆಂಡರ್ ಗೆ ಸಂಬಂಧಿಸಿದ ನ್ಯೂನತೆಗಳು | 3,81,762/- | 6 |
| 9 | 12.2 | ಕೆ.ಟಿ.ಪಿ.ಪಿ. ನಿಯಮ ಪಾಲನೆ ಮಾಡದೇ ವಿಶ್ವವಿದ್ಯಾಲಯಕ್ಕೆ ಕೆಮಿಕಲ್ಸ್ ಖರೀದಿ ಮಾಡಿರುವುದು | 9,84,516/- | 7 |
| 10 | 12.3 | ಕೆ.ಟಿ.ಪಿ.ಪಿ. ನಿಯಮ ಪಾಲನೆ ಮಾಡದೇ ವಿಶ್ವವಿದ್ಯಾಲಯಕ್ಕೆ ಪೀಠೋಪಕರಗಳನ್ನು ಖರೀದಿ ಮಾಡಿರುವುದು | 33,33,319/- | 7 |
| 11 | 12.5 | ವಿಶ್ವವಿದ್ಯಾಲಯಕ್ಕೆ ಕಂಪ್ಯೂಟರ್ ಖರೀದಿಗೆ ಸಂಬಂಧಿಸಿದಂತೆ ದಾಖಲೆ ಇಲ್ಲದಿರುವುದು | 9,72,480/- | 8 |
| 12 | 12.8 | ಪರೀಕ್ಷಾ ಪ್ರಶ್ನೆ ಪತ್ರಿಕೆಗಳ ಮುದ್ರಣಕ್ಕೆ M/S Mehra Computer System ltd ರವರಿಗೆ ಆರ್ಥಿಕ ಇಲಾಖೆಯಿಂದ ಕೆ.ಟಿ/ಪಿ.ಪಿ ಕಾಯ್ದೆ 1999ರ ಕಲಂ 4(ಜಿ) ಪ್ರಕಾರ ಪಾರದರ್ಶಕ ಕಾಯ್ದೆಯಿಂದ ವಿನಾಯಿತಿ ಪಡೆಯದೇ ಮಾಡಲಾದ ವೆಚ್ಚಕ್ಕೆ ಸಂಬಂಧಿಸಿದಂತೆ ನ್ಯೂನತೆ | 72,62,812/- | 9 |
| 13 | 12.9 | ಪರೀಕ್ಷಾ ಮುದ್ರಣಕ್ಕೆ ಸಂಬಂಧಿಸಿದಂತೆ, ಕೆ.ಟಿ.ಪಿ.ಪಿ ನಿಯಮ ಪಾಲನೆಯಾಗದಿರುವುದು | 2,27,632/- | 10 |
| 14 | 12.10 | ಮೆ!! ಇಂಟಿಗ್ರೇಟೆಡ್ ಬ್ಯುಜಿನೆಸ್ ರವರಿಗೆ ಪರೀಕ್ಷಾ ಕೇಂದ್ರ ವೆಚ್ಚವನ್ನು ಭರಿಸಿರುವ ಕುರಿತು | 5,61,140/- | 11 |

| | | | | |
|---|---|---|---|---|
| 35 | 30.1 | ಎ.ಸಿ ಬಿಲ್ಲಿನ ಮುಂಗಡಕ್ಕೆ ಸಲ್ಲಿಸಿರುವ ಎನ್.ಡಿ.ಸಿ ಬಿಲ್ಲುಗಳ ಪರಿಶೀಲನೆಯಲ್ಲಿ ಕಂಡುಬಂದ ನ್ಯೂನತೆಗಳು. | 9,41,130/- | 45 |
| 36 | 34.1 | Staff liablity ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಶಿಲ್ಕು ಉಳಿಸಿಕೊಂಡಿರುವುದು | 2,84,237/- | 46 |
| | | **ಒಟ್ಟು** | **12,19,41,241/-** | |

| ಆಡಿಟ್ ವರದಿಯಲ್ಲಿ ಮಾಡಿರುವ ಆಕ್ಷೇಪಣೆ | ಆಡಿಟ್ ವರದಿಯ ಆಕ್ಷೇಪಣೆಗೆ ಉತ್ತರ |
|---|---|
| **5.7. ಲೆಕ್ಕ ಶೀರ್ಷಿಕೆಯ ಬದಲಾವಣೆಯಿಂದ, ಆಸ್ತಿ ಮೌಲ್ಯದಲ್ಲಿ ಬದಲಾವಣೆಯಾಗಿರುವುದು**<br><br>2016–17 ರಿಂದ 2019–20ನೇ ಸಾಲಿನ ವಿಶ್ವವಿದ್ಯಾಲಯದ ಸ್ವೀಕೃತಿ ಮತ್ತು ಪಾವತಿ ತಃಖ್ತೆಗಳನ್ನು ಪರಿಶೀಲಿಸಿದಾಗ, ಸ್ಥಿರಾಸ್ತಿ ಲೆಕ್ಕ ಶೀರ್ಷಿಕೆಯಡಿಯಲ್ಲಿ ಕಾಣಿಸಬೇಕಾದ ಮೊತ್ತವನ್ನು ವೆಚ್ಚದ ಖಾತೆಗಳಲ್ಲಿ ತೋರಿಸಿರುವುದು ಮತ್ತು ವೆಚ್ಚದ ಖಾತೆಗಳಲ್ಲಿ ನಮೂದಿಸಬೇಕಾದ ಮೊತ್ತವನ್ನು ಸ್ಥಿರಾಸ್ತಿ ಲೆಕ್ಕ ಶೀರ್ಷಿಕೆಯಡಿಯಲ್ಲಿ ತೋರಿಸಿರುವುದು ಕಂಡುಬಂದಿರುತ್ತದೆ.ಇದರಿಂದ ಸ್ಥಿರಾಸ್ತಿಗಳ ಮೌಲ್ಯದಲ್ಲಿ ವ್ಯತ್ಯಾಸವಾಗಿದ್ದು, ವಾರ್ಷಿಕ ಲೆಕ್ಕಪತ್ರದಲ್ಲಿ ಸ್ಥಿರಾಸ್ತಿ ಮೌಲ್ಯವನ್ನು ಸತ್ಯಾಪನೆ ಮಾಡಲು ಸಾಧ್ಯವಾಗಿರುವುದಿಲ್ಲ.ಈ ಸಂಬಂಧ ವಿಚಾರಣಾ ಪತ್ರ ಸಂ. 81/20–21, ದಿನಾಂಕ:19.08.2021 ರಲ್ಲಿ ಕೋರಲಾಗಿದ್ದು, ಈ ಬಗ್ಗೆ ಯಾವುದೇ ಅನುಸರಣೆ ನೀಡಿರುವುದಿಲ್ಲ. ಆದ್ದರಿಂದ ರೂ.1,05,37,109/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.<br><br>ವಿವರವನ್ನು **ಅನುಬಂಧ–02**ರಲ್ಲಿ ಲಗತ್ತಿಸಿದೆ. | 5.7)ಆಡಿಟ್ ವರದಿಯ ಕಂಡಿಕೆ 5.7 ರಲ್ಲಿ 2016-17 ರಿಂದ 2019-20 ನೇ ಸಾಲಿನ ವಿಶ್ವವಿದ್ಯಾನಿಲಯದ ಸ್ವೀಕೃತಿ ಮತ್ತು ಪಾವತಿ ತಃಖ್ತೆಗಳಲ್ಲಿ ಸ್ಥಿರಾಸ್ತಿ ಲೆಕ್ಕ ಶಿರ್ಷಿಕೆಯಲ್ಲಿ ಕಾಣಿಸಬೇಕಾದ ಮೊತ್ತವನ್ನು ವೆಚ್ಚದ ಖಾತೆಗಳಲ್ಲಿ ಹಾಗು ವೆಚ್ಚದ ಖಾತೆಗಳಲ್ಲಿ ನಮೂದಿಸಬೇಕಾದ ಮೊತ್ತವನ್ನು ಸ್ಥಿರಾಸ್ತಿ ಲೆಕ್ಕ ಶಿರ್ಷಿಕೆಯಲ್ಲಿ ತೋರಿಸಲಾಗಿದೆ ಎಂದು ಆಡಿಟ್ ವರದಿಯಲ್ಲಿ ಆಕ್ಷೇಪಣೆ ಮಾಡಲಾಗಿದೆ.<br><br>ಸದರಿ ಕಂಡಿಕೆಯಲ್ಲಿ ಆಕ್ಷೇಪಣೆ ಮಾಡಿರುವ ವ್ಯತ್ಯಾಸದ ಬಗ್ಗೆ ಪರಿಶೀಲಿಸಿ, ಆಯಾ ಖಾತೆಗಳಿಗೆ ಮರು ಹೊಂದಾಣಿಕೆ ಮಾಡಿ ಸರಿಪಡಿಸಲಾಗಿದೆ.<br><br>ಸಂಬಂಧಪಟ್ಟ ಮರು ಹೊಂದಾಣಿಕೆ ಮಾಡಿ ಸರಿಪಡಿಸಿರುವ ಲೆಕ್ಕಗಳನ್ನು Chartered Accountant ರವರು ನೀಡಿರುವ Annual Accounts for the Financial Year ended 31.03.2022 ರಲ್ಲಿ ತೋರಿಸಲಾಗಿದೆ. ಸದರಿ ವರದಿಯ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ ತಮ್ಮ ಮಾಹಿತಿಗಾಗಿ ಹಾಗು ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.<br><br>ಆದುದರಿಂದ, ಆಡಿಟ್ ವರದಿಯಲ್ಲಿ ಮಾಡಿರುವ ಆಕ್ಷೇಪಣೆ ಮಾಡಿರುವ ಕಂಡಿಕೆಯನ್ನು ಆಡಿಟ್ ವರದಿಯಿಂದ ಕೈಬಿಡಲು ತಮ್ಮಲ್ಲಿ ಕೋರಲಾಗಿದೆ. |
| **11.18. ಸರ್ಕಾರಿ ಕಾಲೇಜುಗಳಿಂದ ವಿಶ್ವವಿದ್ಯಾಲಯಕ್ಕೆ ಜಮೆಯಾಗಬೇಕಾಗಿರುವ ಮೊತ್ತದ ಬಗ್ಗೆ ವಿವರಗಳಿಲ್ಲದಿರುವುದು.**<br><br>2018–19 ಮತ್ತು 2019–20ನೇ ಸಾಲಿನ ವಿಶ್ವವಿದ್ಯಾಲಯದ ಪಿ.ಜಿ ವಿದ್ಯಾರ್ಥಿಗಳ ಪ್ರವೇಶಾತಿ ಅನುಮೋದನೆ, ಅಧಿಸೂಚನೆ ಸಂಖ್ಯೆ ಕ್ರಮವಾಗಿ No.BNU/PG/Adm/approval/2018–19, ದಿನಾಂಕ 21.12.2018 ಮತ್ತು No.BNU/PG/adm/approval/2019–20, ದಿನಾಂಕ:21.11.2019ರ ಪ್ರಕಾರವಾಗಿ 2018–19ನೇ ಸಾಲಿನಲ್ಲಿ ಸದರಿ ಕಾಲೇಜಿನ ಪಿ.ಜಿ ವಿದ್ಯಾರ್ಥಿಗಳಿಂದ ವಿವಿಧ ಕೋರ್ಸುಗಳ ಪ್ರವೇಶಾತಿ ಶುಲ್ಕವನ್ನು ವಸೂಲಿಸಿ ವಿಶ್ವವಿದ್ಯಾಲಯದ ಖಾತೆಗೆ ಜಮಾ ಮಾಡಬೇಕಾಗಿರುತ್ತದೆ. ಸದರಿ ಸ್ವೀಕೃತಿ | 11.18) |

| | |
|---|---|
| ಮೊತ್ತವಾಗಿರುವ ವಿವರಗಳನ್ನು ಲೆಕ್ಕ ಪರಿಶೋಧನೆಗೆ ಒದಗಿಸಿರುವುದಿಲ್ಲ. ಈ ಸಂಬಂಧ, ಆಡಿಟ್ ವಿಚಾರಣಾ ಸಂಖ್ಯೆ.77, ದಿನಾಂಕ: 18.08.2021 ರಲ್ಲಿ ವಿವರ ಕೋರಿದ್ದರೂ. ಯಾವುದೇ ಅನುಸರಣಾ ವರದಿಯನ್ನು ನೀಡಿರುವುದಿಲ್ಲ.<br><br>ಆದುದರಿಂದ ಸದರಿ ಮೊತ್ತವು ಜಮಾ ಆಗಿರುವ ಬ್ಯಾಂಕ್ ಖಾತೆಯೊಂದಿಗೆ ಸಮನ್ವಯಗೊಳಿಸಿರುವ ವಿವರವನ್ನು ಲೆಕ್ಕಪರಿಶೋಧನೆಗೆ ಒದಗಿಸುವವರೆಗೂ, ರೂ 1,09,54,510/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.ವಿವರವನ್ನು **ಅನುಬಂಧ-13** ರಲ್ಲಿ ಕಾಣಿಸಲಾಗಿದೆ.<br><br>**11.20. ವಿಶ್ವವಿದ್ಯಾಲಯದ ಪಿ.ಜಿ ಸೆಂಟರ್ ಕೋಲಾರದ ಪ್ರವೇಶಾತಿ ಶುಲ್ಕ ವಸೂಲಾತಿ ಮಾಹಿತಿ ಇಲ್ಲದಿರುವುದು.**<br><br>2018-19 ಮತ್ತು 2019-20ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ಪಿ.ಜಿ ಸೆಂಟರ್‌ನಿಂದ ಪಿ.ಜಿ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ, ಪ್ರವೇಶಾತಿ ಶುಲ್ಕ ವಸೂಲಾತಿ ಮಾಡಿ ವಿಶ್ವವಿದ್ಯಾಲಯದ ಖಾತೆಗೆ ಜಮಾ ಮಾಡಿರುವ ವಿವರವನ್ನು ಲೆಕ್ಕಪರಿಶೋಧನೆಗೆ ನೀಡಿರುವುದಿಲ್ಲ. ಈ ಸಂಬಂಧ ಲೆಕ್ಕ ವಿಚಾರಣಾ ಸಂಖ್ಯೆ.78/2020-21,ದಿನಾಂಕ:18.08.2021 ರಲ್ಲಿ ವಿವರ ಕೋರಿದ್ದರೂ, ಯಾವುದೇ ವಿವರ ನೀಡಿರುವುದಿಲ್ಲ.<br><br>ಪಿ.ಜಿ ಸೆಂಟರ್ ಕೋಲಾರ ಇಲ್ಲಿಗೆ ಸಂಬಂಧಿಸಿದಂತೆ ಲೆಕ್ಕ ಪರಿಶೋಧನೆಗೆ ನೀಡಿರುವ ತಾತ್ಕಾಲಿಕ ಸೀಟ್ ಮ್ಯಾಟ್ರಿಕ್ಸ್ ಅನುಗುಣವಾಗಿ ವಿಶ್ವವಿದ್ಯಾಲಯದ ಪ್ರವೇಶಾತಿ ಅಧಿಸೂಚನೆ ಸಂಖ್ಯೆ.No.BNU/Aca/FEE-P.G/ADM/436/2018-19, ದಿನಾಂಕ:06.07.2018 ಮತ್ತುNo.BNU/Aca/FEE-P.G/ADM/05/2019-20, ದಿನಾಂಕ: 17.07.2019 ರ ಪ್ರಕಾರ ಸರ್ಕಾರಿ ಸೀಟು ಮತ್ತು ಪಾವತಿ ಸೀಟಿಗೆ ನಿಗದಿ ಪಡಿಸಿದ ಶುಲ್ಕದ ಅನುಗುಣವಾಗಿ, ಲೆಕ್ಕ ಪರಿಶೋದನೆಗೆ ಯಾವುದೇ ಮಾಹಿತಿ ನೀಡಿಲ್ಲವಾದ್ದರಿಂದ ಎಲ್ಲಾ ಸೀಟುಗಳು ಸರ್ಕಾರಿ ಸೀಟಿನ ಅಡಿಯಲ್ಲಿ ಭರ್ತಿಯಾಗಿದಲ್ಲಿ 2018-19ರಲ್ಲಿ ರೂ.34,90,940/- ಮತ್ತು 2019-20ರಲ್ಲಿ ರೂ 38,36,194/-ಪ್ರವೇಶಾತಿ ಶುಲ್ಕ ಆಗಿರುತ್ತದೆ. ಮತ್ತು ಎಲ್ಲಾ ಸೀಟುಗಳು ಖಾಸಗಿ ಸೀಟುಗಳು ಆಗಿದ್ದಲ್ಲಿ 2018-19ರಲ್ಲಿ ರೂ.1,07,62,000/-,2019-20 ರಲ್ಲಿ ರೂ. 1,18,38,200/-ಪ್ರವೇಶಾತಿ ಶುಲ್ಕವಾಗಿರುತ್ತದೆ. | 11.20) |

| | |
|---|---|
| ಈ ಸಂಬಂಧ ಕಡತವನ್ನು ಲೆಕ್ಕಪರಿಶೋಧನೆಗೆ ಒದಗಿಸದ ಕಾರಣ, ಕನಿಷ್ಠ ಶುಲ್ಕದ ಆಧಾರದಮೇಲೆ ರೂ.73,27,134/- ಮೊತ್ತವನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರವನ್ನು **ಅನುಬಂಧ-15** ರಲ್ಲಿ ಕಾಣಿಸಲಾಗಿದೆ.<br><br>**11.23. ಸಂಯೋಜನಾ ಕಾಲೇಜುಗಳು ಪ್ರತಿಯೊಂದು ಸ್ನಾತಕ ವಿದ್ಯಾರ್ಥಿಗಳಿಂದ ಕಟಾಯಿಸಿದ ಶೇ.30ರಷ್ಟು ಕ್ರೀಡಾಶುಲ್ಕಕ್ಕೆ ಉಪಯುಕ್ತ ಪ್ರಮಾಣ ಪತ್ರ ಸಲ್ಲಿಸದಿರುವುದು.**<br><br>2018-19 ಮತ್ತು 2019-20ನೇ ಸಾಲಿನ ಸ್ನಾತಕ ಪದವಿಯ ಪ್ರವೇಶಾತಿ ಶುಲ್ಕಗಳನ್ನು ಪರಿಶೀಲಿಸಲಾಗಿ, ಅಧಿಸೂಚನೆ:ಬಿಎನ್‌ಯು/ಎಸಿಎಡಿ/ಯುಜಿ-ಎಡಿ/46/2019-20, ದಿನಾಂಕ:16.05.2019ರಂತೆ ಸಂಯೋಜನಾ ಕಾಲೇಜುಗಳು ಪ್ರವೇಶಾತಿ ಸಮಯದಲ್ಲಿ ಪ್ರತಿ ವಿದ್ಯಾರ್ಥಿಗಳಿಂದ ನಿಯಮಾನುಸಾರ ವಸೂಲಿ ಮಾಡುವ ಕ್ರೀಡಾ ಶುಲ್ಕದಲ್ಲಿ ಶೇ.30ರಷ್ಟು ಪ್ರತಿ ವಿದ್ಯಾರ್ಥಿಯಂತೆ ಕಟಾಯಿಸಿ, ಸದರಿ ಹಣವನ್ನು ಆಯಾ ಶೈಕ್ಷಣಿಕ ವರ್ಷದಲ್ಲೇ ಕಾಲೇಜಿನಲ್ಲಿ ಕ್ರೀಡೆಗೆ ಮತ್ತು ಕ್ರೀಡೆಗೆ ಸಂಬಂಧಪಟ್ಟ ವಿಷಯಗಳಿಗೆ ಸದ್ಬಳಕೆ ಮಾಡಿಕೊಂಡು ಉಪಯುಕ್ತ ಪ್ರಮಾಣ ಪತ್ರವನ್ನು ಆಯಾ ವರ್ಷದ ಮಾರ್ಚ್ 31ರೊಳಗೆ ಸಲ್ಲಿಸಬೇಕಾಗಿರುತ್ತದೆ. ಸಲ್ಲಿಸಿದ ಉಪಯುಕ್ತ ಪ್ರಮಾಣ ಪತ್ರ ಹಾಗೂ ಸಂಬಂಧಪಟ್ಟ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲು ವಿಚಾರಣಾ ಪತ್ರ ಸಂಖ್ಯೆ: 77/20-21 ದಿನಾಂಕ:18.08.2021ರಲ್ಲಿ ಕೋರಲಾಗಿದ್ದು, ಯಾವುದೇ ಅನುಸರಣೆ ಒದಗಿಸಿರುವುದಿಲ್ಲ. ಆದ್ದರಿಂದ, ಕ್ರೀಡಾ ಶುಲ್ಕ ಉಪಯುಕ್ತತಾ ಪ್ರಮಾಣ ಪತ್ರವನ್ನು ಲೆಕ್ಕಪರಿಶೋಧನೆಗೆ ಒದಗಿಸುವವರೆಗೂ ಒಟ್ಟು ರೂ. 1,04,55,790/- ಗಳನ್ನು ಸಂಬಂಧಪಟ್ಟ ಕಾಲೇಜುಗಳಿಂದ ವಸೂಲಿಸಿ ವಿಶ್ವವಿದ್ಯಾಲಯ ನಿಧಿಗೆ ಜಮೆ ಮಾಡಲು ಸೂಚಿಸಿದೆ. ವಿವರಗಳು ಈ ಕೆಳಕಂಡಂತಿವೆ. | 11.23) |

| Sl No | Year | Fees Prescribed For Sports | Number Of Students | Total Amount To Be Uc Produced |
|---|---|---|---|---|
| 1 | 2018 /19 | 195 | **24954** | **4866030** |
| 2 | 2019 /20 | 220 | 25408 | 5589760 |
| **total** | | | | **10455790** |

**11.24. ಸ್ವೀಕೃತಿ ಮರುಜಮೆಯಾಗಿರುವುದಕ್ಕೆ ಸಂಬಂಧಿಸಿದಂತೆ ವಿವರ ಇಲ್ಲದಿರುವುದು**

2017-18 ಮತ್ತು 2018-19 ನೇ ಸಾಲಿನ ವಿಶ್ವವಿದ್ಯಾಲಯ ಖಾತೆ ಸಂಖ್ಯೆ 37268118131 ಮತ್ತು 5076101004383 ನ್ನು ಪರಿಶೀಲಿಸಿದಾಗ ನಿರ್ದಿಷ್ಟ ಮೊತ್ತವು ಖಾತೆಗೆ ಜಮಾ ಆಗಿ ನಂತರ ಆ ದಿನವೇ ಖಾತೆಯಿಂದ ವಾಪಸಾತಿಯಾಗಿರುತ್ತದೆ.

ಆದರೆ, ಸದರಿ ಧನಾದೇಶಗಳಿಂದ ವಿಶ್ವವಿದ್ಯಾಲಯಕ್ಕೆ ಜಮಾ ಆಗಬೇಕದ ಸ್ವೀಕೃತಿಗಳಾಗಿದ್ದು ನಂತರದ ದಿನಗಳಲ್ಲಿ ಈ ಮೊತ್ತವು ವಿಶ್ವವಿದ್ಯಾಲಯಕ್ಕೆ ಜಮೆ ಆಗಿದೆಯೇ ಎಂಬುದರ ಬಗ್ಗೆ ಯಾವುದೇ ವಿವರಗಳಿರುವುದಿಲ್ಲ. ಈ ಸಂಬಂಧ ಆಡಿಟ್ ವಿಚಾರಣಾ ಪತ್ರ ಸಂಖ್ಯೆ.29/20-21 ದಿನಾಂಕ: 31.03.2021ರಲ್ಲಿ ವಿವರ ಕೋರಿದ್ದು, ಸಮರ್ಪಕವಾದ/ಸಮಂಜಸವಾದ ವಿವರಣೆಯನ್ನು ನೀಡಿರುವುದಿಲ್ಲ. ಆದುದರಿಂದ,ರೂ. 3,75,290/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ .ವಿವರ ಈ ಕೆಳಕಂಡಂತಿದೆ.

| ಕ್ರ. ಸಂ | ಧನಾದೇಶ ಸಂಖ್ಯೆ | ದಿನಾಂಕ | ಮೊತ್ತ | ಪಾವತಿ ದಿನಾಂಕ |
|---|---|---|---|---|
| 1. | 097128 | 06.12.2019 | 60,000/- | 06.12.2017 |
| 2. | 014112 | 08.12.2017 | 60,000/- | 06.12.2017 |
| 3. | 0478741 | 29.12.2017 | 61,000/- | 29.11.2017 |
| 4. | 279393 | 11.10.2018 | 57,900/- | 11.10.2018 |
| 5. | 044115 | 11.10.2018 | 8,790/- | 15.10.2018 |
| 6. | 174160 | 26.10.2018 | 100/- | 26.10.2018 |
| 7. | 127645 | 26.10.2018 | 1,000/- | 26.10.2018 |
| 8. | 139876 | 03.11.2018 | 33,000/- | 03.11.2018 |
| 9. | 821989 | 03.11.2018 | 93,500/- | 03.11.2018 |
| **ಒಟ್ಟು ಮೊತ್ತ** | | | **3,75,290/-** | |

11.24)

| | |
|---|---|
| **11.25. ಶುಲ್ಕ ಮರುಪಾವತಿಗೆ ಸಂಬಂಧಿಸಿದ ನ್ಯೂನತೆಗಳು**<br><br>2018-19 ಮತ್ತು 2019-20 ನೇ ಸಾಲಿನಲ್ಲಿ ವಿಶ್ವವಿದ್ಯಾಲಯ ಖಾತೆಯಿಂದ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ಕಾಲೇಜುಗಳಿಗೆ ಶುಲ್ಕ ಮರುಪಾವತಿ ಮಾಡಲಾಗಿದೆ.ಆದರೆ ಸದರಿ ಕಾಲೇಜಿನವರು ಶುಲ್ಕವನ್ನು ವಿಶ್ವವಿದ್ಯಾಲಯದ ಖಾತೆಗೆ ಜಮೆಆಗಿರುವ ಬಗ್ಗೆ ಯಾವುದೇ ದಾಖಲಾತಿಗಳು ಇರುವುದಿಲ್ಲ. ಈ ಸಂಬಂಧ 31/20-21.ದಿನಾಂಕ:31.03.2011 ಮತ್ತು ಆಡಿಟ್ ವಿಚಾರಣಾ ಪತ್ರ ಸಂಖ್ಯೆ 32/20-21, ದಿನಾಂಕ:31.03.2021 ರಂದು ವಿವರ ಕೋರಿದ್ದರೂ ಯಾವುದೇ ವಿವರಗಳನ್ನು ನೀಡಿರುವುದಿಲ್ಲ. ಆದುದರಿಂದ ರೂ.4,89,000/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರ ಈ ಕೆಳಕಂಡಂತಿದೆ.<br><br>ಕ್ರ ಸಂಖ್ಯೆ / ಧನಾದೇಶ ಸಂಖ್ಯೆ / ದಿನಾಂಕ / ಮೊತ್ತ<br>1. / 254514 / 11.06.2019 / 180000<br>2. / 468018 / 11.06.2018 / 309000<br>ಒಟ್ಟು / 489000 | 11.25) |
| **11.26. ಸಂಯೋಜಿತ ಕಾಲೇಜಿಗೆ ಶುಲ್ಕ ವಾಪಸಾತಿ ಮಾಡಿರುವ ಬಗ್ಗೆ:-**<br><br>2018-19ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ಸಂಯೋಜನಾ ವ್ಯಾಪ್ತಿಗೆ ಬರುವ K.G.F College ಗೆ ಧನಾದೇಶ ಸಂಖ್ಯೆ. 968018 ದಿನಾಂಕ:11.06.2018 ರಲ್ಲಿ,ರೂ. 3,09,000/-ಗಳನ್ನು ವಾಪಸಾತಿ ಮಾಡಲಾಗಿದೆ. ಆದರೆ, ಸದರಿ ಕಾಲೇಜಿನವರು ಸಂಯೋಜನಾ ಶುಲ್ಕವನ್ನು ವಿಶ್ವವಿದ್ಯಾಲಯಕ್ಕೆ ಪಾವತಿ ಮಾಡಿರುವ ವಿವರವಾಗಲೀ ಅಥವಾ ಸಂಯೋಜನಾ ಶುಲ್ಕವು ಹೆಚ್ಚುವರಿಯಾಗಿರುವ ಬಗ್ಗೆ ಸಮಂಜಸವಾದ ವಿವರಗಳಿರುವುದಿಲ್ಲ. ಈ ಸಂಬಂಧ ಆಡಿಟ್ ವಿಚಾರಣಾ ಪತ್ರ ಸಂಖ್ಯೆ,31/20-21 ದಿನಾಂಕ: 31.03.2021 ರಲ್ಲಿ ವಿವರ ಕೋರಿದ್ದರೂಸಮರ್ಪಕವಾದ ವಿವರಣೆ ನೀಡಿರುವುದಿಲ್ಲ. ಆದುದರಿಂದ, ರೂ.3,09,000/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. | 11.26) |

| | |
|---|---|
| **12.1. ಕೆಮಿಕಲ್ಸ್ ಖರೀದಿ ಟೆಂಡರ್‌ಗೆ ಸಂಬಂಧಿಸಿದ ನ್ಯೂನತೆಗಳು**<br><br>2019-20ನೇ ಸಾಲಿನಲ್ಲಿ ವಿಶ್ವವಿದ್ಯಾಲಯಕ್ಕೆ ಅಗತ್ಯವಿರುವ ಕೆಮಿಕಲ್ಸ್/ಲ್ಯಾಬ್ ಉಪಕರಣಗಳನ್ನು ಖರೀದಿಸಿದ್ದು, ಸದರಿ ಟೆಂಡರ್‌ಗೆ ಸಂಬಂಧಿಸಿದಂತೆ ಈ ಕೆಳಕಂಡ ನ್ಯೂನತೆಗಳನ್ನು ನಮೂದಿಸಲಾಗಿದೆ.<br><br>➢ ಸದರಿ ಟೆಂಡರ್ ಎರಡನೇ ಕರೆಯಾಗಿದ್ದು, ಎರಡನೇ ಕರೆಗೆ ಸಂಬಂಧಿಸಿದ ಸೂಕ್ತ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ.<br>➢ ಸದರಿ ಟೆಂಡರ್ ಕಡತದಲ್ಲಿ, ತಾಂತ್ರಿಕ ಸಮಿತಿಯ ಮೌಲ್ಯಮಾಪನ ವರದಿ, ತುಲನಾತ್ಮಕ ಪಟ್ಟಿಗೆ ಸಂಬಂಧಿಸಿದ ಅಧಿಕಾರಿಗಳು ದೃಢೀಕರಿಸಿರುವುದಿಲ್ಲ.<br>➢ ಸರಬರಾಜು ಆದೇಶವು ದಿನಾಂಕ: 08.03.2019ಕ್ಕೆ ನೀಡಿದ್ದು, ಬಿಲ್‌ನ ದಿನಾಂಕ:06.06.2019 ಕಂಡುಬಂದಿರುತ್ತದೆ ಮತ್ತು ಕೆಮಿಕಲ್ಸ್ ಗಳನ್ನು ದಿನಾಂಕ:16.10.2019 ಕ್ಕೆ ತಡವಾಗಿ ದಾಸ್ತಾನು ತೆಗೆದು ಕೊಂಡಿರುತ್ತಾರೆ.<br>➢ ಸರಬರಾಜು ಆದೇಶದ ಪ್ರಕಾರ 15 ದಿನಗಳಲ್ಲಿಕೆಮಿಕಲ್ಸ್ ಸರಬರಾಜು ಮಾಡಬೇಕೆಂದು ತಿಳಿಸಿದ್ದರೂ ತಡವಾಗಿ ಸರಬರಾಜು ಮಾಡಲಾಗಿದೆ. ಈ ಸಂಬಂಧದಂಡ ಶುಲ್ಕವನ್ನು ವಸೂಲಾತಿ ಮಾಡಿರುವುದಿಲ್ಲ.<br>➢ ಸದರಿ ಪಾವತಿಗೆ ಶೇ 2% ಜಿ ಎಸ್ ಟಿ ಕಟಾವಣೆ ಮಾಡಿರುವುದಿಲ್ಲ.<br>➢ ಈ ಸಂಬಂಧ, ಲೆಕ್ಕತಪಾಸಣಾ ಸಂಖ್ಯೆ:50/20-21 ದಿನಾಂಕ:01.07.2021ರಲ್ಲಿ ವಿವರಣೆ ಕೋರಿದ್ದರೂ, ಸಮರ್ಪಕವಾದ ವಿವರಣೆ ನೀಡಿರುವುದಿಲ್ಲ. ಆದುದರಿಂದ ರೂ.3,81,762/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ ಮತ್ತು ಮೂಲ ಬೆಲೆಯ ಮೇಲೆ ,ಜಿ.ಎಸ್.ಟಿ. ಮೊತ್ತ ರೂ.6,582/-ಗಳನ್ನು ವಸೂಲಾತಿಯಲ್ಲಿಡಲಾಗಿದೆ. | 12.1) |

| | |
|---|---|
| **12.2. ಕೆ.ಟಿ.ಪಿ.ಪಿ. ನಿಯಮ ಪಾಲನೆಯಾಗದೇ ವಿಶ್ವವಿದ್ಯಾಲಯಕ್ಕೆ ಕೆಮಿಕಲ್ಸ್ ಖರೀದಿ ಮಾಡಿರುವುದು**<br><br>2018-19 ಮತ್ತು 2019-20ನೇ ಸಾಲಿನಲ್ಲಿ ವಿಶ್ವವಿದ್ಯಾಲಯಕ್ಕೆ ಬೇಕಾದ (ಅಗತ್ಯವಿರುವ) ಕೆಮಿಕಲ್ಸ್ ಖರೀದಿ ಮಾಡಲಾಗಿದೆ.ಆದರೆ ಕೆ.ಟಿ.ಪಿ.ಪಿ ನಿಯಮ 1999ರ ನಿಯಮ 2000ದ ನಿಯಮ ದ 4(E) (II) ಪ್ರಕಾರ 1 ಲಕ್ಷ ಮೀರಿದ ಸರಕು/ಸೇವೆಗಳಿಗೆ ಟೆಂಡರ್ ಕರೆದು ಖರೀದಿ ಮಾಡಬೇಕಾಗಿರುತ್ತದೆ.ಆದರೆ, ವಿಶ್ವವಿದ್ಯಾಲಯದ ಕೆಮಿಕಲ್ಸ್ ಖರೀದಿಯಲ್ಲಿ ಈ ನಿಯಮದ ಪಾಲನೆಯಾಗಿರುವುದಿಲ್ಲ. ಈ ಸಂಬಂಧ ಈ ಸಂಬಂಧ ಲೆಕ್ಕಪತ್ರ ವಿಚಾರಣಾ ಸಂಖ್ಯೆ ಸಂಖ್ಯೆ:50/20-21, ದಿನಾಂಕ:01.07.2021 ರಲ್ಲಿ ವಿವರ ಕೋರಿದ್ದರೂ, ಸಮಂಜಸವಾದ ಮಾಹಿತಿ ನೀಡಿರುವುದಿಲ್ಲ. ಆದ್ದರಿಂದ ರೂ.9,84,516/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳನ್ನು **ಅನುಬಂಧ-18** ರಲ್ಲಿ ನೀಡಲಾಗಿದೆ. | 12.2) |
| **12.3. ಕೆ.ಟಿ.ಪಿ.ಪಿ. ನಿಯಮ ಪಾಲನೆಯಾಗದೇ ವಿಶ್ವವಿದ್ಯಾಲಯಕ್ಕೆ ಪೀಠೋಪಕರಣಗಳನ್ನು ಖರೀದಿ ಮಾಡಿರುವುದು:-**<br><br>2017-18 ರಿಂದ 2018-19 ಮತ್ತು 2019-20ನೇ ಸಾಲಿನಲ್ಲಿ ವಿಶ್ವವಿದ್ಯಾಲಯಕ್ಕೆ ಬೇಕಾದ (ಅಗತ್ಯವಿರುವ) ಪೀಠೋಪಕರಣಗಳನ್ನು ಖರೀದಿ ಮಾಡಲಾಗಿದೆ.ಆದರೆ ಕೆ.ಟಿ.ಪಿ.ಪಿ ನಿಯಮ 1999ರ ನಿಯಮ 2000ದ ನಿಯಮ ದ 4(ಇ) (II) ಪ್ರಕಾರ 1 ಲಕ್ಷ ಮೀರಿದ ಸರಕು/ಸೇವೆಗಳಿಗೆ ಟೆಂಡರ್ ಕರೆದು ಖರೀದಿ ಮಾಡಬೇಕಾಗಿರುತ್ತದೆ. ಆದರೆ, ವಿಶ್ವವಿದ್ಯಾಲಯದ ಪೀಠೋಪಕರಣದ ಖರೀದಿಯಲ್ಲಿ ಈ ನಿಯಮದ ಪಾಲನೆಯಾಗಿರುವುದಿಲ್ಲ. ಈ ಸಂಬಂಧ ಈ ಸಂಬಂಧ ಲೆಕ್ಕಪತ್ರ ವಿಚಾರಣಾ ಸಂಖ್ಯೆ ಸಂಖ್ಯೆ:21A/20-21, ದಿನಾಂಕ:26.03.2021 ದಲ್ಲಿ ವಿವರ ಕೋರಿದ್ದರೂ, ಸಮಂಜಸವಾದ ಮಾಹಿತಿ ನೀಡಿರುವುದಿಲ್ಲ. ಆದರಿಂದ ರೂ.33,33,319/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳನ್ನು **ಅನುಬಂಧ-19**ರಲ್ಲಿ ನೀಡಲಾಗಿದೆ. | 12.3) |

| | |
|---|---|
| **12.5. ವಿಶ್ವವಿದ್ಯಾಲಯಕ್ಕೆ ಕಂಪ್ಯೂಟರ್ ಖರೀದಿಗೆ ಸಂಬಂಧಿಸಿದಂತೆ ದಾಖಲಾತಿ ಇಲ್ಲದಿರುವುದು**<br><br>2018–19ನೇ ಸಾಲಿನಲ್ಲಿ ವಿಶ್ವವಿದ್ಯಾಲಯಕ್ಕೆ ಹತ್ತು ಕಂಪ್ಯೂಟರ್‌ಗಳನ್ನು ಖರೀದಿಸಲಾಗಿದ್ದು, ಸದರಿ ಖರೀದಿಗೆ ಸಂಬಂಧಿಸಿದ ಕಡತಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ನ್ಯೂನತೆಗಳು ಕಂಡುಬಂದಿದೆ:–<br><br>➢ ಕಂಪ್ಯೂಟರ್ ಖರೀದಿಗೆ ಸಂಬಂಧಿಸಿದಂತೆ, ಅಲ್ಪಾವಧಿ ಟೆಂಡರ್ ಆಹ್ವಾನಿಸಿದ್ದು, ಕೇವಲ 12 ದಿನಗಳ ಕಾಲಾವಕಾಶವನ್ನು ನೀಡಲಾಗಿದೆ.<br>➢ ಸದರಿ ಕಡತದಲ್ಲಿ ಯಾವುದೇNeed assessment reportಇರುವುದಿಲ್ಲ.<br>➢ ಸದರಿ ಕಡತದಲ್ಲಿ F.S.D ಭದ್ರತಾ ಠೇವಣಿ ಸ್ವೀಕೃತಿ ಮಾಹಿತಿಯಾಗಲೀ, ತಾಂತ್ರಿಕ ಸಮಿತಿಯ ವರದಿಯಾಗಲಿ, ತುಲನಾತ್ಮಕ ಪಟ್ಟಿಗೆ ಸಂಬಂಧಪಟ್ಟ ಅಧಿಕಾರಿಗಳ ಸಹಿಯಾಗಲೀ ಇರುವುದಿಲ್ಲ.<br>➢ ಸದರಿ ಪಾವತಿಗೆ ಯಾವುದೇ Financial Sanction ಸರಬರಾಜು ಆದೇಶವಾಗಲೀ ಇರುವುದಿಲ್ಲ.<br>➢ ಕಂಪ್ಯೂಟರ್‌ಗಳನ್ನು ದಾಸ್ತಾನು ತೆಗೆದುಕೊಂಡ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.<br>➢ ಬಿಲ್ಲಿನ ಮೂಲ ಪ್ರತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.<br>➢ ಸದರಿ ಪಾವತಿಗೆ ಜಿ.ಎಸ್.ಟಿ. ಕಟಾವಣೆ ಮಾಡಿರುವುದಿಲ್ಲ.<br>➢ ಸದರಿ ಖರೀದಿಗೆ (ಟೆಂಡರ್ ಡಾಕ್ಯೂಮೆಂಟ್‌ನಲ್ಲಿ) ಅಂದಾಜು ಮೊತ್ತವನ್ನು ನಮೂದಿಸಿರುವುದಿಲ್ಲ.<br><br>ಪಾವತಿ ವಿವರ ಈ ಕೆಳಕಂಡಂತ್ತಿದೆ. | 12.5) |

| ಕ್ರ.ಸಂ. | ಧನಾದೇಶ ಸಂಖ್ಯೆ/ದಿನಾಂಕ | ಸಂಸ್ಥೆ ವಿವರ | ಮೊತ್ತ |
|---|---|---|---|
| 1. | 641247/11.09.2018 | kshtija infotech ltd | 9,72,480/- |

ಈ ಮೇಲ್ಕಂಡ ನ್ಯೂನತೆಗಳಿಗೆ ಸಂಬಂಧಿಸಿದಂತೆ, ಆಡಿಟ್ ವಿವರಣಾ ಪತ್ರ ಸಂಖ್ಯೆ.48/20-21 ದಿನಾಂಕ:29.06.2021ರಲ್ಲಿ ವಿವರ ಕೋರಿದ್ದರೂ, ಸಮರ್ಪಕವಾದ ವಿವರಣೆಗಳನ್ನು ನೀಡಿರುವುದಿಲ್ಲ. ಆದ್ದರಿಂದ ರೂ.9,72,480/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**12.8. ಪರೀಕ್ಷಾ ಪ್ರಶ್ನೆ ಪತ್ರಿಕೆಗಳ ಮುದ್ರಣಕ್ಕೆ M/S Mehra Computer System ltd. ರವರಿಗೆ ಆರ್ಥಿಕ ಇಲಾಖೆಯಿಂದ ಕೆ.ಟಿ.ಪಿ.ಪಿ. ಕಾಯ್ದೆ 1999ರ ಕಲಂ 4(ಜಿ) ಪ್ರಕಾರ ಪಾರದರ್ಶಕ ಕಾಯ್ದೆಯಿಂದ ವಿನಾಯಿತಿ ಪಡೆಯದೇ ಮಾಡಲಾದ ವೆಚ್ಚಕ್ಕೆ ಸಂಬಂಧಿಸಿದಂತೆ**

2018-19 ಮತ್ತು 2019-20ನೇ ಸಾಲಿನಲ್ಲಿ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಪರೀಕ್ಷ ಪ್ರಶ್ನೆ ಪತ್ರಿಕೆಗಳ (ಯು.ಜಿ ಮತ್ತು ಪಿ.ಜಿ) ಮುದ್ರಣಕ್ಕೆ ಸಂಬಂಧಿಸಿದ ಕಡತಗಳನ್ನು ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಲಾಗಿ M/S Mehra computer system ನವರಿಗೆ ರೂ.72,61,912/-ಗಳನ್ನು ಪಾವತಿಸಲಾಗಿದ್ದು, ಈ ಕೆಳಕಂಡ ನ್ಯೂನತೆಗಳನ್ನು ಗಮನಿಸಲಾಗಿದೆ. 12.8)

| ಕ್ರಸಂ. | ಧನಾದೇಶ ಸಂಖ್ಯೆ/ದಿನಾಂಕ | ಮೊತ್ತ |
|---|---|---|
| 1. | 253875/25.01.2019 | 16,35,128/- |
| 2. | 254385/05.04.2019 | 2,65,019/- |
| 3. | 945892/25.06.2019 | 16,64,365/- |
| 4. | 109561/05.08.2019 | 2,70,391/- |
| 5. | 046140/22.01.2020 | 34,27,009/- |
| | **ಒಟ್ಟು ಮೊತ್ತ ರೂ.** | **72,61,912/-** |

1) ಬೆಂಗಳೂರು ಉತ್ತರ ವಿಶ್ವವಿದ್ಯಾಲಯವು 2018-19 ಮತ್ತು 2019-20ನೇ ಸಾಲಿನಲ್ಲಿ ನಡೆಸಬೇಕಾಗಿರುವ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳ ಪರೀಕ್ಷೆಗಳಿಗೆ ಪ್ರಶ್ನೆಪತ್ರಿಕೆಗಳ ಮುದ್ರಣಕ್ಕೆ ಅನುಭವ ಮತ್ತು ಗೌಪ್ಯತೆ ಕಾಪಾಡುವ ಮುದ್ರಕರಿಂದ ಪ್ರಶ್ನೆ

| | |
|---|---|
| ಪತ್ರಿಕೆ ಮುದ್ರಣ ಮಾಡಿಸಲು ಅನುಕೂಲವಾಗುವಂತೆ ಸರ್ಕಾರದಿಂದ ಪಾರದರ್ಶಕ ಕಾಯ್ದೆ 1999 ಕಲಂ 4(ಜಿ)ರ ಪ್ರಕಾರ ವಿನಾಯಿತಿ ಕೋರಿ ದಿನಾಂಕ:13.08.2018 ರಲ್ಲಿ ಸರ್ಕಾರದ ಕಾರ್ಯದರ್ಶಿ ಉನ್ನತ ಶಿಕ್ಷಣ ಇಲಾಖೆಗೆ ನಂ.ಬಂ.ಉ.ವಿ/4ಜಿ ವಿನಾಯಿತಿ/49/2018-19, ದಿನಾಂಕ:13.08.2018 ರಲ್ಲಿ ಪತ್ರ ಬರೆದಿರುತ್ತಾರೆ. ಮುಂದುವರೆದು, ಸರ್ಕಾರದಿಂದ 4(ಜಿ) ವಿನಾಯಿತಿ ಆದೇಶ ನಿರೀಕ್ಷಿಸಿ, ರಹಸ್ಯ ಮುದ್ರಣ ಕಾರ್ಯದಲ್ಲಿ ಅನುಭವವಿರುವ ರಹಸ್ಯ ಮುದ್ರಕರಿಂದ MOU ಮೂಲಕ ಮಾಡಿಸಲು ಗುತ್ತಿಗೆಯನ್ನು ಕುಲಪತಿಗಳ ಒಪ್ಪಿಗೆ ಮೇರೆಗೆ ದಿನಾಂಕ:09.10.2018 ರಂದು M/S Mehra computer system ltd., ರವರೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ. ಆದರೆ, ಸದರಿ ಸಂಸ್ಥೆಗೆ ಪಾವತಿಸಿರುವ ದರಗಳು ಯಾವ ಮಾನದಂಡದ ಆಧಾರದ ಮೇಲೆ ನಿರ್ಧರಿಸಲಾಗಿದೆ ಎಂಬ ಬಗ್ಗೆ ಸಮರ್ಥಿಸುವ ಮಾಹಿತಿ ನೀಡಿರುವುದಿಲ್ಲ.<br>2) ಸದರಿ ಸಂಸ್ಥೆಯೊಂದಿಗೆ, ದರ ಸಮಾಲೋಚನೆ ಮಾಡಿಕೊಂಡಿರುವ ವಿವರಗಳು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ.<br>3) ಸದರಿ ಸಂಸ್ಥೆಗೆ ಮಾಡಲಾದ ಪಾವತಿಗಳಿಗೆ ಸರ್ಕಾರದಿಂದ 4(ಜಿ) ವಿನಾಯಿತಿ ಪಡೆದಿರುವುದಿಲ್ಲ.ಈ ಸಂಬಂಧ ಲೆಕ್ಕಪತ್ರ ವಿಚಾರಣಾ ಪತ್ರ ಸಂಖ್ಯೆ:60/20-21, ದಿನಾಂಕ:19.07.2021ರಲ್ಲಿ ವಿವರ ಕೋರಿದ್ದರೂ, ಸ್ಪಷ್ಟೀಕರಣವಿರುವುದಿಲ್ಲ. ಆದ್ದರಿಂದ, 4ಜಿ ವಿನಾಯಿತಿ ಸಿಗುವವರೆಗೂರೂ. 72,62,812/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.<br><br>**12.9. ಪರೀಕ್ಷೆ ಮುದ್ರಣಕ್ಕೆ ಸಂಬಂಧಿಸಿದಂತೆ, ಕೆ.ಟಿ.ಪಿ.ಪಿ. ನಿಯಮ ಪಾಲನೆಯಾಗದಿರುವುದು**<br><br>2019-20ನೇ ಸಾಲಿನಲ್ಲಿ ವಿಶ್ವವಿದ್ಯಾಲಯಕ್ಕೆ ಪರೀಕ್ಷೆ ಕರ್ತವ್ಯಕ್ಕೆ ಸಂಬಂಧಿಸಿದಂತೆ, ಉತ್ತರ ಪತ್ರಿಕೆ, ಪರೀಕ್ಷೆ ವೇಳಾಪಟ್ಟಿ, ಮತ್ತಿತರ ಪರೀಕ್ಷೆ ಕೈಪಿಡಿಗಳ ಮುದ್ರಣವನ್ನು ಮಾಡಿಸಲಾಗಿದೆ. ಆದರೆ, ಸದರಿ ಮೊತ್ತವು 1 ಲಕ್ಷ ಮೀರಿದ್ದರೂ, ಕೆ.ಟಿ.ಪಿ.ಪಿ ನಿಯಮ 1999ರ ನಿಯಮ 2000ದ (4) ಇ ನಿಯಮದ ಪ್ರಕಾರ ಟೆಂಡರ್ ಪ್ರಕ್ರಿಯೆ ಕೈಗೊಂಡಿರುವುದಿಲ್ಲ. ಈ ಸಂಬಂಧ ಲೆಕ್ಕ ವಿಚಾರಣಾ ಸಂಖ್ಯೆ-55/20-21, ದಿನಾಂಕ 14.07.2021ರಲ್ಲಿ ವಿವರ ಕೋರಿದ್ದರೂ, ಸ್ಪಷ್ಟವಾದ ಉತ್ತರ ನೀಡಿರುವುದಿಲ್ಲ. ಆದುದರಿಂದ, ರೂ.2,27,632/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.ಪಾವತಿ ವಿವರ ಈ ಕೆಳಕಂಡತಿದೆ. | 12.9) |

| ಕ್ರ. ಸಂ. | ಧನಾದೇಶ ಸಂಖ್ಯೆ | ದಿನಾಂಕ | ಮೊತ್ತ | ಸಂಸ್ಥೆಯ ಹೆಸರು |
|---|---|---|---|---|
| 01 | 255705 | 10.10.2019 | 54950/- | ರವಿ ಆರ್ಟ್ ಪ್ರಿಂಟ್ |
| 02 | 215945 | 13.11.2019 | 66542/- | ರವಿ ಆರ್ಟ್‌ಪ್ರಿಂಟ್ |
| 03 | 212954 | 16.11.2019 | 85260/- | ಸಮಂತು ಬ್ಯುಸಿನೆಸ್ ಫಾರ್ಮ್ಸ್‌ಪ್ರೈವೆಟ್ ಲಿಮಿಟೆಡ್ |
| 04 | 046388 | 21.01.2020 | 20880/- | ಸಮಂತು ಬ್ಯುಸಿನೆಸ್ ಫಾರ್ಮ್ಸ್ ಪ್ರೈವೆಟ್ ಲಿಮಿಟೆಡ್ |
| | | ಒಟ್ಟು ಮೊತ್ತ ರೂ. | 227632/- | |

**12.10. ಮೆ॥ ಇಂಟಿಗ್ರೇಟೆಡ್ ಬ್ಯುಜಿನೆಸ್ ರವರಿಗೆ ಪರೀಕ್ಷಾ ಕೇಂದ್ರ ವೆಚ್ಚವನ್ನು ಭರಿಸಿರುವ ಕುರಿತು**

2019-20ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ಪರೀಕ್ಷೆ ಕಾರ್ಯಕ್ಕೆ ಸಿ.ಸಿ.ಪಿ.ವಿಪ್ರಿಂಟರ್ ಯು.ಪಿ.ಎಸ್ ಕಂಪ್ಯೂಟರ್ ಉಪಕರಣಗಳನ್ನು ಮೆ॥ ಇಂಟಿಗ್ರೇಟೆಡ್ ಬ್ಯುಜಿನೆಸ್ ರವರಿಂದ ಬಾಡಿಗೆಗೆ ಪಡೆಯಲಾಗಿದೆ. ಆದರೆ, ಸದರಿ ಸಂಸ್ಥೆಯವರಿಗೆ ಮಾಡಿದ ಪಾವತಿಗೆ ಸಂಬಂಧಿಸಿದಂತೆ, ರೂ.1,00,000/- ಮೀರಿದ ಪಾವತಿಗಳಿಗೆ ಕೆ.ಟಿ.ಪಿ.ಪಿ ನಿಯಮ 1999ರ ನಿಯಮ 2000ದ (4) ಇ ಪ್ರಕಾರ ಟೆಂಡರ್ ಪ್ರಕ್ರಿಯೆ ಕೈಗೊಳ್ಳಬೇಕಾಗಿರುತ್ತದೆ.ಪರೀಕ್ಷೆ ಕಾರ್ಯವು ಪೂರ್ವ ನಿಯೋಜಿತವಾಗಿದ್ದು. ವಿಶ್ವವಿದ್ಯಾಲಯವು ಟೆಂಡರ್ ಪ್ರಕ್ರಿಯೆಯನ್ನು ಕೈಗೊಂಡಿರುವುದಿಲ್ಲ.ಈ ಸಂಬಂಧ ಆಡಿಟ್ ವಿಚಾರಣಾ ಪತ್ರ ಸಂಖ್ಯೆ.55/20-21, ದಿನಾಂಕ 14.07.2021 ರಲ್ಲಿ ವಿವರ ಕೋರಿದ್ದರೂ, ಸಮರ್ಪಕವಾದ ಮಾಹಿತಿ ನೀಡಿರುವುದಿಲ್ಲ ಆದುದರಿಂದ ರೂ.5,61,140/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

12.10)

ಪಾವತಿ ವಿವರ ಈ ಕೆಳಕಂಡತಿದೆ.

| ಕ್ರ.ಸಂ. | ಧನಾದೇಶ ಸಂಖ್ಯೆ | ದಿನಾಂಕ | ಮೊತ್ತ |
|---|---|---|---|
| 01 | 125705 | 26.11.2019 | 60,610/- |
| 02 | 125726 | 12.05.2019 | 90,480/- |
| 03 | 125728 | 12.05.2019 | 90,480/- |
| 04 | 125729 | 12.05.2019 | 90,480/- |
| 05 | 125730 | 12.05.2019 | 92,800/- |
| 06 | 046331 | 12.05.2019 | 45,810/- |
| 07 | 125757 | 12.05.2019 | 90,480/- |
| ಒಟ್ಟು ಮೊತ್ತ | | | **5,61,140/-** |

**12.11. ಪರೀಕ್ಷೆ ಕಾರ್ಯಕ್ಕೆ ಓ.ಎಂ.ಆರ್ ಶೀಟ್ ಮುದ್ರಣಕ್ಕೆ ಸಂಬಂಧಿಸಿದಂತೆ**

2019-20ನೇ ಸಾಲಿನಲ್ಲಿ ವಿಶ್ವವಿದ್ಯಾಲಯವು ಓ.ಎಂ.ಆರ್ ಶೀಟ್‌ಗಳನ್ನು ಮುದ್ರಿಸಿದ್ದು, ಸದರಿ ಕಾರ್ಯದ ಒಟ್ಟು ಮೊತ್ತ 1 ಲಕ್ಷ ಮೀರಿದ್ದರೂ,ಕೆ.ಟಿ.ಪಿ.ಪಿ ನಿಯಮ 1999ರ ನಿಯಮ 2000ದ ನಿಯಮ (4)ಇ ಪ್ರಕಾರ ಟೆಂಡರ್ ಪ್ರಕ್ರಿಯೆ ಕೈಗೊಂಡಿರುವುದಿಲ್ಲ. ಈ ಸಂಬಂಧ ಲೆಕ್ಕ ಪತ್ರ ವಿಚಾರಣಾ ಸಂಖ್ಯೆ 55/20-21 ದಿನಾಂಕ 14.07.2021 ರಲ್ಲಿ ವಿವರ ಕೋರಿದ್ದರೂ, ಸ್ಪಷ್ಟವಾದ ಉತ್ತರ ನೀಡಿರುವುದಿಲ್ಲ. ಆದುದ್ದರಿಂದ ರೂ.1,88,995/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

ಪಾವತಿ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ. | ಧನಾದೇಶ ಸಂಖ್ಯೆ | ದಿನಾಂಕ | ಮೊತ್ತ | ಸಂಸ್ಥೆಯ ಹೆಸರು |
|---|---|---|---|---|
| 01 | 254471 | 24.05.2019 | 22845/- | raising soft Soltution |
| 02 | 254473 | 24.05.2019 | 91046/- | raising soft soltution |
| 03 | 125729 | 04.03.2020 | 75104/- | scandoc technolgy soltution |
| ಒಟ್ಟು ಮೊತ್ತ | | | **1,88,995/-** | |

ಕಂಡಿಕೆ 12.11 ರಲ್ಲಿ ಆಕ್ಷೇಪಣೆ ವ್ಯಕ್ತಪಡಿಸಿರುವಂತೆ 2019-20 ನೇ ಸಾಲಿನಲ್ಲಿ ಮುದ್ರಣವಾಗಿರುವ OMR ಶೀಟ್‌ಗಳ ಸ್ಕ್ಯಾನ್ ಮಾಡಲು ವಿಶ್ವವಿದ್ಯಾಲಯವು ಕೆಲವು ಸಂಸ್ಥೆಗಳಿಂದ 3 Quatations ಗಳನ್ನು ಪಡೆದು, ಕಡಿಮೆ ದರಗಳನ್ನು ನಮೂದಿಸಿದ ಸಂಸ್ಥೆಗೆ ಈ ಕಾರ್ಯವನ್ನು ನಿರ್ವಹಿಸುವಂತೆ ಆದೇಶಿಸಿದ್ದು, ಅದರಂತೆ ಸದರಿ ಸಂಸ್ಥೆಯವರ ಬಿಲ್ಲುಗಳನ್ನು ಕಾನೂನು ರೀತ್ಯ ಪಾವತಿಸಲಾಗಿದೆ.

ಮೇಲ್ಕಂಡ ಕಾರ್ಯವು ತುಂಬಾ ಅತ್ಯಾವಶ್ಯಕವಾಗಿದ್ದರಿಂದ, ಟೆಂಡರ್ ಕರೆಯಲು ಕಾಲಾವಕಾಶವಿಲ್ಲದ ಕಾರಣ, ಇದನ್ನು Quatations ಗಳ ಮುಖಾಂತರ ನಿರ್ವಹಿಸಲು ಕ್ರಮವಹಿಸಲಾಗಿದೆ. ಸದರಿ ವಿಷಯವನ್ನು ತಮ್ಮ ಅವಗಾಹನೆಗೆ ಸಲ್ಲಿಸಲಾಗಿದೆ.

ಆಕ್ಷೇಪಣೆಯಲ್ಲಿರುವ 3 ಸಂಸ್ಥೆಯವರು ಕಡಿಮೆ ದರವನ್ನು ನಮೂದಿಸಿದ್ದು, ಸದರಿಯವರಿಗೆ Scan ಮಾಡಲು ಆದೇಶಿಸಿದೆ ಹಾಗೂ ಅದಕ್ಕೆ ಸಂಬಂಧಿಸಿದ ತುಲನಾತ್ಮಕಪಟ್ಟಿ, ಕಾರ್ಯದೇಶದ ಪ್ರತಿ, Tax Invoice ಪ್ರತಿ, Sanction Order ಪ್ರತಿ, ಚೆಕ್ ನೀಡಿದ ಪ್ರತಿ, ಎಲ್ಲಾ ದಾಖಲಾತಿಗಳ ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ತಮ್ಮ ಮಾಹಿತಿಗಾಗಿ ಸಲ್ಲಿಸಿದೆ.

| | |
|---|---|
| | ಎರಡನೇಯದಾಗಿ KTPP (Amendment) Act 2020 ದಿನಾಂಕ:24.07.2020 ರಲ್ಲಿ Section 4(i) ರಲ್ಲಿ ವಸ್ತು ಮತ್ತು ಸೇವೆಗಳಿಗೆ ರೂ.1.00 ಲಕ್ಷದ ಬದಲಾಗಿ ರೂ.5.00 ಲಕ್ಷದ ದವರೆಗೆ ಟೆಂಡರ್ ಕರೆಯದೆ ಖರೀದಿ ಮಾಡಬಹುದೆಂದು ತಿದ್ದುಪಡಿ ಮಾಡಲಾಗಿದೆ ಹಾಗೂ Sub-Clause (ii) ವನ್ನು ತೆಗೆದು ಹಾಕಿದೆ.<br><br>ಹಿಂದಿನ ಆದೇಶದ ಪ್ರತಿ ಹಾಗೂ ಪ್ರಸ್ತುತ ಆದೇಶದ ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ತಮ್ಮ ಮಾಹಿತಿಗಾಗಿ ಸಲ್ಲಿಸಿದೆ.<br><br>ಸದರಿ ವೆಚ್ಚವು ರೂ.5.00 ಲಕ್ಷದ ಮಿತಿಯೊಳಗೆ ಇರುತ್ತದೆ.<br><br>ಮೇಲ್ಕಂಡ ಎಲ್ಲಾ ಅಂಶಗಳನ್ನು ತಮ್ಮ ಅವಗಾಹನೆಗೆ ಸಲ್ಲಿಸಿದೆ.<br><br>ಆದುದರಿಂದ ತಾವು ದಯವಿಟ್ಟು ಸದರಿ ಕಂಡಿಕೆಯನ್ನು ಆಡಿಟ್ ವರದಿಯಿಂದ ಕೈಬಿಡಲು ತಮ್ಮಲ್ಲಿ ಕೋರಿದೆ. |
| **12.12. Duties and taxes ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಶಿಲ್ಕು ಉಳಿಸಿಕೊಂಡಿರುವುದು**<br><br>2018-19ನೇ ಸಾಲಿನ ಸ್ವೀಕೃತಿ ಮತ್ತು ಪಾವತಿ ತಃಖ್ತೆಗಳನ್ನು ಪರಿಶೀಲಿಸಿದಾಗ ಶಾಸನಾತ್ಮಕ ಕಟಾವಣೆಗಳಾದ ಆದಾಯ ತೆರಿಗೆ, ವೃತ್ತಿ ತೆರಿಗೆಗಳನ್ನು ಸಂಬಂಧಪಟ್ಟ ಇಲಾಖೆಗಳಿಗೆ ಸಕಾಲದಲ್ಲಿ ಜಮೆ ಮಾಡದೇ ಹಾಗೆಯೇ ಉಳಿಸಿಕೊಂಡಿರುವುದು ಕಂಡುಬಂದಿರುತ್ತದೆ.ಈ ಸಂಬಂಧ ಲೆಕ್ಕತಪಾಸಣಾ ಪತ್ರ ಸಂಖ್ಯೆ. 27/20-21 ದಿನಾಂಕ: 31.03.2021 ರಲ್ಲಿ ವಿವರ ಕೋರಿದ್ದರೂ, ಸಮರ್ಪಕವಾದ ವಿವರಣೆ ದೊರೆತಿರುವುದಿಲ್ಲ. ಆದುದರಿಂದ ಶಾಸನಾತ್ಮಕ ಕಟಾವಣೆಗಳನ್ನು ಸಂಬಂಧಪಟ್ಟ ಇಲಾಖೆಗಳಿಗೆ ಜಮೆ ಮಾಡುವವರೆಗೂ ರೂ. 3,26,234/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. | 12.12) |

**12.14. ಎನ್.ಎಸ್.ಎಸ್ ಉಪಯುಕ್ತತಾ ಪ್ರಮಾಣ ಪತ್ರವನ್ನು ಒದಗಿಸದಿರುವುದು.**

2018-19 ಮತ್ತು 2019-20ನೇ ಸಾಲಿನಲ್ಲಿ ವಿಶ್ವವಿದ್ಯಾಲಯಕ್ಕೆ ಸರ್ಕಾರದಿಂದ ಒಟ್ಟು ರೂ 35,91,000/- ಎನ್.ಎಸ್.ಎಸ್ ಅನುದಾನ ಜಮೆ ಆಗಿರುತ್ತದೆ. ಸದರಿ ಅನುದಾನಕ್ಕೆ ಸಂಬಂಧಿಸಿದಂತೆ, ಆದೇಶ ಸಂಖ್ಯೆ: ಯುಸಕ್ರೀಇ.ರಾಸೇ.ಯೋ:18: 2019-20/16 ಬೆಂಗಳೂರು ದಿನಾಂಕ: 03.07.2020 ಉಪಯುಕ್ತತಾ ಪ್ರಮಾಣ ಪತ್ರವನ್ನು G.F.R.12ಸಿ ನಮೂನೆಯಲ್ಲಿ ಸರ್ಕಾರದ ಸಂಬಂಧಪಟ್ಟ ಇಲಾಖೆಗೆ ಕಳುಹಿಸಬೇಕಾಗಿರುತ್ತದೆ. ಈ ಸಂಬಂಧ ಆಡಿಟ್ ವಿಚಾರಣಾ ಸಂಖ್ಯೆ.26/20-21, ದಿನಾಂಕ 31.03.2021 ರಲ್ಲಿ ವಿವರ ಕೋರಿದ್ದರೂ, ಯಾವುದೇ ಅನುಪಾಲನಾ ವರದಿಯನ್ನು ನೀಡಿರುವುದಿಲ್ಲ.ಆದುದರಿಂದ, ರೂ. 9,60,000/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**ಪಾವತಿ ವಿವರ ಈ ಕೆಳಕಂಡಂತಿದೆ:-**

| ಧನಾದೇಶ ಸಂಖ್ಯೆ | ದಿನಾಂಕ | ಮೊತ್ತ |
|---|---|---|
| 254470 | 22.05.2019 | 512000/- |
| 945861 | 07.01.2019 | 3,20,000/- |
| 125731 | 12.09.2019 | 1,28,000/- |
| **ಒಟ್ಟು ಮೊತ್ತ** | | **9,60,000/-** |

ಕಂಡಿಕೆ 12.14 ರಲ್ಲಿ ಆಕ್ಷೇಪಣೆ ವ್ಯಕ್ತಪಡಿಸಿರುವಂತೆ ಸರ್ಕಾರಿ ಆದೇಶದನ್ವಯ ಎನ್.ಎಸ್.ಎಸ್ ಕಾರ್ಯಕ್ರಮಕ್ಕಾಗಿ ಮಾಡಿದ ವೆಚ್ಚಕ್ಕೆ ಉಪಯುಕ್ತತಾ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ಸಲ್ಲಿಸುವಂತೆ ತಿಳಿಸಲಾಗಿದೆ.

ಸದರಿ ಆದೇಶದಂತೆ ಎನ್.ಎಸ್.ಎಸ್ ಕಾರ್ಯಕ್ರಮಕ್ಕಾಗಿ ಮಾಡಿದ ವೆಚ್ಚಕ್ಕೆ ಉಪಯುಕ್ತತಾ ಪ್ರಮಾಣ ಪತ್ರ ( Utilization Certificates )ವನ್ನು ಈ ಕಛೇರಿಯ ಪತ್ರದ ಸಂಖ್ಯೆ:ಬೆಂ.ಉ.ವಿ/ರಾ.ಸೇ.ಯೋ.ಉ.ಪ್ರ/964/2021-22 ದಿನಾಂಕ:07.09.2022 ರಲ್ಲಿ ರೂ.9,60,000/-ಗಳಿಗೆ ರಾಜ್ಯ ಎನ್.ಎಸ್.ಎಸ್ ಅಧಿಕಾರಿ, ರಾಷ್ಟ್ರೀಯ ಸೇವಾ ಯೋಜನಾ ಕೋಶ ಬೆಂಗಳೂರು ಇವರಿಗೆ GFR12-C ನಮೂನೆಯಲ್ಲಿ ದೃಢೀಕರಿಸಿ ಸಲ್ಲಿಸಲಾಗಿದೆ.

ಸದರಿ GFR12-C ನಮೂನೆ ಹಾಗೂ ಇದಕ್ಕೆ ಭರಿಸಿದ ವೆಚ್ಚದ ವಿವರಗಳ ಜೆರಾಕ್ಸ್ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ, ತಮ್ಮ ಸೂಕ್ತ ಮಾಹಿತಿಗಾಗಿ ಸಲ್ಲಿಸಿದೆ.

ಆದುದರಿಂದ ತಾವು ದಯವಿಟ್ಟು ಸದರಿ ಆಡಿಟ್ ವರದಿಯ ಕಂಡಿಕೆಯನ್ನು ಕೈ ಬಿಡುವಂತೆ ತಮ್ಮಲ್ಲಿ ಕೋರಿದೆ.

**12. 15. .ವೋಚರ್‌ಗಳನ್ನು ಲೆಕ್ಕಪರಿಶೋಧನೆಗೆ ಒದಗಿಸದಿರುವುದು**

ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕಛೇರಿಯ 2018-19ನೇ ಸಾಲಿನ ವಾರ್ಷಿಕ ಲೆಕ್ಕಪತ್ರದಂತೆ ಒದಗಿಸಲು ಈ ಕೆಳಕಂಡ ವಿಷಯಗಳ ವೆಚ್ಚಗಳಿಗೆದುರಾಗಿ ವೋಚರ್‌ಗಳನ್ನು ಲೆಕ್ಕಪರಿಶೋಧನೆಗೆ ಒದಗಿಸುವುದು ಹಾಗೂ ಸದರಿ ವೆಚ್ಚಗಳ ಧೃಡೀಕೃತ ಪ್ರತಿಯನ್ನು ಲೆಕ್ಕಪರಿಶೋಧನೆಗೆ ಒದಗಿಸಲು ವಿಚಾರಣಾ ಪತ್ರ ಸಂ.12a/20-21,55/20-21 ದಿನಾಂಕ:22.03.2021/14.07.2021ರಲ್ಲಿ ಕೋರಲಾಗಿದ್ದು, ಯಾವುದೇ ಮಾಹಿತಿ ಹಾಗೂ ಕಡತಗಳನ್ನು ಒದಗಿಸಿರುವುದಿಲ್ಲ. ಆದ್ದರಿಂದ 2018-19 ಮತ್ತು 2019-20ನೇ ಸಾಲಿನ

12.15) ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ 2018-19 ಮತ್ತು 2019-20 ನೇ ಸಾಲಿಗೆ ವೆಚ್ಚಮಾಡಿದ್ದಕ್ಕೆ ಸಂಬಂಧಿಸಿದ ವೋಚರ್‌ಗಳನ್ನು ಒದಗಿಸಿಲ್ಲವೆಂದು ಆಡಿಟ್‌ನಲ್ಲಿ ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ. ಇದರ ಒಟ್ಟು ಮೊತ್ತ ರೂ.39,51,902/- ಆಗಿರುತ್ತದೆ. ವಿವರಗಳು ಅನುಬಂಧ-21 ರಲ್ಲಿ ನೀಡಿದೆ. ಒಟ್ಟು ವೋಚರ್‌ಗಳು72 ಆಗಿರುತ್ತದೆ.

| | |
|---|---|
| ವೋಚರ್‌ಗಳನ್ನು ಲೆಕ್ಕಪರಿಶೋಧನೆಗೆ ಒದಗಿಸುವವರೆಗೆ ಮೊತ್ತ ರೂ.39,51,902/-ಗಳನ್ನು ಆಕ್ಷೇಪಣೆಯಲ್ಲಿರಿಸಿದೆ.ವಿವರಗಳನ್ನು **ಅನುಬಂಧ-21** ರಲ್ಲಿ ಲಗತ್ತಿಸಿದೆ. | ಈ ಪೈಕಿ ಸುಮಾರು 34 ವೋಚರ್‌ಗಳು ಸಿಕ್ಕಿರುತ್ತದೆ ಇದರ ಒಟ್ಟು ಮೊತ್ತ ರೂ.25,66,640/-ಗಳಾಗಿರುತ್ತದೆ (ಪ್ರತಿ ಲಗತ್ತಿಸಿದೆ). ಸದರಿ ವೋಚರ್‌ಗಳನ್ನು ಆಡಿಟ್ ಸಿಬ್ಬಂದಿಗೆ ಆಡಿಟ್ ಸಮಯದಲ್ಲಿ ಪರಿಶೀಲಿಸಲು ನೀಡಿದೆ.<br><br>ಇನ್ನುಳಿದ 38 ವೋಚರ್‌ಗಳನ್ನು ಹುಡುಕಲಾಗುತ್ತಿದೆ ಇದರ ಮೊತ್ತ ರೂ.13,84,762/- ಆಗಿದೆ. ಸದರಿ ವೋಚರ್‌ಗಳನ್ನು ಮುಂದಿನ ಆಡಿಟ್ ಸಮಯದಲ್ಲಿ ನೀಡಲಾಗುವುದು. ಈಗ ಸಲ್ಲಿಸುತ್ತಿರುವ 34 ವೋಚರ್ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.<br><br>ಈಗ ಸಲ್ಲಿಸಿರುವ ವೋಚರ್‌ಗಳ ಮೊತ್ತವನ್ನು ಆಡಿಟ್ ವರದಿಯಿಂದ ಕೈಬಿಡುವಂತೆ ಕೋರಲಾಗಿದೆ. |
| **20. ಅಧಿಕಾರಿ ಮತ್ತು ಬೋಧಕ ವರ್ಗದವರ ವೇತನ ಮತ್ತು ಭತ್ಯೆಗಳು**<br>**20.1. ಅತಿಥಿ ಉಪನ್ಯಾಸಕರಿಗೆ ನೇಮಕಾತಿಗೆ ಸಂಬಂಧಿಸಿದಂತೆ ನ್ಯೂನತೆಗಳು**<br><br>ವಿಶ್ವವಿದ್ಯಾಲಯವು 2018-19 ಮತ್ತು 2019-20ನೇ ಸಾಲಿನಲ್ಲಿ ವಿವಿಧ ವಿಭಾಗಗಳಿಗೆ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಂಡಿದ್ದು, ಈ ಕೆಳಕಂಡ ನ್ಯೂನತೆಗಳನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.<br><br>1) ಯು.ಜಿ.ಸಿ. ನಿಯಮ No.F.10-1/2009(PS) ಫೆಬ್ರವರಿ-2010 ಮತ್ತು No.F.25-1/2018(PS/ MISC) ದಿನಾಂಕ:28.01.2019 ರ ಪ್ರಕಾರ ಅತಿಥಿ ಉಪನ್ಯಾಸಕರನ್ನು ಕೇವಲ ಮಂಜೂರಾದ ಹುದ್ದೆಗಳಿಗೆ ಎದುರಾಗಿ ನೇಮಕ ಮಾಡಿಕೊಳ್ಳಬೇಕಾಗುತ್ತದೆ. ಆದರೆ ವಿಶ್ವವಿದ್ಯಾಲಯಕ್ಕೆ ಯಾವುದೇ ಉಪನ್ಯಾಸಕರ ಹುದ್ದೆ ಮಂಜೂರಾದ ಬಗ್ಗೆ ವಿವರಗಳಿರುವುದಿಲ್ಲ. ಅತಿಥಿ ಉಪನ್ಯಾಸಕರನ್ನು ಖಾಯಂ ಹುದ್ದೆಗಳಿಗೆದುರಾಗಿ ನೇಮಕ ಮಾಡಿಕೊಂಡಿರುವುದಿಲ್ಲ. ನೇಮಕ ಮಾಡಿಕೊಂಡ ಹುದ್ದೆಗಳಿಗೆ ಸರ್ಕಾರದ ಆರ್ಥಿಕ ಇಲಾಖೆಯಿಂದ ಮಂಜೂರಾತಿ ಪಡೆದಿರುವುದಿಲ್ಲ.<br>2) ಅತಿಥಿ ಉಪನ್ಯಾಸಕರ ನೇಮಕಾತಿಗೆ ಸಂಬಂಧಿಸಿದಂತೆ, ಯಾವುದೇ ರೋಸ್ಟರ್ ನಿಯಮವನ್ನು ಪಾಲಿಸಿರುವುದಿಲ್ಲ. (ಯು.ಜಿ.ಸಿ ನಿಯಮಾವಳಿ F.No.59/6/2012(CU/ದಿನಾಂಕ:03.06.2016 ರ ಪ್ರಕಾರ) | 20.1) |

| | |
|---|---|
| 3) ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳುವ ಸಮಿತಿಯಲ್ಲಿ UGC guidelines No.F.25/1/2018 (PS/MISC) ರ ಪ್ರಕಾರ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಅಲ್ಪ ಸಂಖ್ಯಾತರ/ ವಿಕಲಚೇತನರನ್ನು ಪ್ರತಿನಿಧಿಸುವ ಒಬ್ಬ ಶಿಕ್ಷಣ ತಜ್ಞರನ್ನು ವಿಶ್ವವಿದ್ಯಾಲಯದ ಕುಲಪತಿಗಳು ನೇಮಕ ಮಾಡಬೇಕಾಗಿರುತ್ತದೆ. ಆದರೆ ವಿಶ್ವವಿದ್ಯಾಲಯವು ಈ ನಿಯಮದ ಪಾಲನೆ ಮಾಡಿರುವುದಿಲ್ಲ.<br>4) ಅತಿಥಿ ಉಪನ್ಯಾಸಕರ ಸಂದರ್ಶನಕ್ಕೆ ಸಂಬಂಧಿಸಿದಂತೆ, ವಿದ್ಯಾರ್ಹತೆಗೆ PHD/NET/ಸೇವಾ ಅನುಭವ/Publication ಗೆ ಸಂಬಂಧಿಸಿದಂತೆ ಯು.ಜಿ.ಸಿ.ಯು ನಿಗದಿಪಡಿಸಿರುವ ಅಂಕಗಳ ಮಾನದಂಡವನ್ನು ವಿಶ್ವವಿದ್ಯಾಲಯವು ಪಾಲಿಸಿರುವುದಿಲ್ಲ. ಮುಂದುವರೆದು ವಿದ್ಯಾರ್ಹತೆಗೆ ಸೇವಾನುಭವ/PHD/NET/ಸೇವಾನುಭವಕ್ಕೆ ಸಂಬಂಧಿಸಿದಂತೆ ನೀಡಿರುವ ಅಂಕಗಳ ಸಂಬಂಧ ಅನುಸರಿಸಲಾದ ಮಾನದಂಡದ ಲೆಕ್ಕಪರಿಶೋಧನೆಗೆ ಲಭ್ಯವಿರುವುದಿಲ್ಲ.<br><br>**ಅ). 2018-19ನೇ ಸಾಲಿನ ಅತಿಥಿ ಉಪನ್ಯಾಸಕರ ನೇಮಕಾತಿಗೆ ಸಂಬಂಧಿಸಿದ ನ್ಯೂನತೆಗಳ ವಿವರಗಳು ಈ ಕೆಳಕಂಡಂತಿದೆ.**<br><br>1. 2018-19ನೇ ಸಾಲಿನ ನೇಮಕಾತಿಗೆ ಸಂಬಂಧ ನೇಮಕಾತಿ ಅಧಿಸೂಚನೆ ಲೆಕ್ಕಪರಿಶೋಧನೆಗೆ ಲಭ್ಯವಿರುವುದಿಲ್ಲ.<br>2. Roaster policy/Reservation Policy ಪಾಲನೆ ಸಂಬಂಧಪಟ್ಟಂತೆ ವಿವರಗಳಿರುವುದಿಲ್ಲ.<br>3. Work load (ಕಾರ್ಯಭಾರ) ಅತಿಥಿ ಉಪನ್ಯಾಸಕರ ಕಾರ್ಯಭಾರದ ಬಗ್ಗೆ ವಿವರಗಳಿರುವುದಿಲ್ಲ.<br>4. ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಲ್ಲಿ ಸಂದರ್ಶನಕ್ಕೆ ಹಾಜರಾದ ಅಭ್ಯರ್ಥಿಗಳು, ಸಂದರ್ಶನದ ಸಮಿತಿಯ ವಿವರ, ಸಂದರ್ಶನದಲ್ಲಿ ನೀಡಲಾದ ಅಂಕಗಳ ವಿವರ, ಅಭ್ಯರ್ಥಿಗಳ ವಿದ್ಯಾರ್ಹತೆ, M.Phil, PHD, NET, SLET Research experience, Publications, ಸೇವಾನುಭವಕ್ಕೆ ಸಂಬಂಧಿಸಿದ ವಿವರವನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ. ಈ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ನೀಡಿದ ದಿನಾಂಕದಂದೆ ಅಭ್ಯರ್ಥಿಗಳು ಬೆಳಗ್ಗೆ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ಆದರೆ ನೇಮಕಾತಿ ಆದೇಶ ನೀಡಿದ ದಿನವೇ ಅಭ್ಯರ್ಥಿಗಳು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವುದು ಹೇಗೆ ಸಾಧ್ಯ ಎಂಬುದರ ವಿವರ ಲೆಕ್ಕಪರಿಶೋಧನೆಗೆ ಲಭ್ಯವಿರುವುದಿಲ್ಲ. | |

| | |
|---|---|
| **ಆ). 2019-20ನೇ ಸಾಲಿನ ಅತಿಥಿ ಉಪನ್ಯಾಸಕರ ನೇಮಕಾತಿಗೆ ಸಂಬಂಧಿಸಿದಂತೆ:-**<br><br>2019-20ನೇ ಸಾಲಿನಲ್ಲಿ ವಿಶ್ವವಿದ್ಯಾಲಯವು ಅತಿಥಿ ಉಪನ್ಯಾಸಕರ ನೇಮಕಾತಿಗೆ ಸಂಬಂಧಿಸಿದಂತೆ, No. BNU/G-Faculty/per courses/432/2019-20 ರ ಮುಖಾಂತರ ದಿನಾಂಕ:23.05.2019 ರಂದು ಅಧಿಸೂಚನೆ ಹೊರಡಿಸಿರುತ್ತದೆ. ಮುಂದುವರೆದು, ಅರ್ಜಿ ಸಲ್ಲಿಸಲು ದಿನಾಂಕ:25.06.2019 ಕಡೇ ದಿನವಾಗಿದ್ದು, ವಿವಿಧ ದಿನಾಂಕಗಳಂದು ಸಂದರ್ಶನವನ್ನು ಏರ್ಪಡಿಸಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿರುತ್ತದೆ. ಈ ಸಂಬಂಧ ಲೆಕ್ಕಪರಿಶೋಧನೆಯಲ್ಲಿ ಕೆಳಕಂಡ ನ್ಯೂನತೆಗಳನ್ನು ಗಮನಿಸಲಾಗಿದೆ:-<br><br>➢ Work load (ಕಾರ್ಯಭಾರ) ಕ್ಕೆ ಸಂಬಂಧಿಸಿದಂತೆ, ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರಿಂದ ದೃಢೀಕೃತಗೊಂಡ ತಃಖ್ತೆ ಇರುವುದಿಲ್ಲ.<br>➢ ಸಂದರ್ಶನ ಸಮಿತಿಯ ಎಲ್ಲಾ ಸದಸ್ಯರೂ ಸಂದರ್ಶನಕ್ಕೆ ನೀಡಲಾದ ಅಂಕಗಳ ತಃಖ್ತೆಗೆ ಸಹಿ ಮಾಡಿ ದೃಢೀಕರಿಸಿರುವುದಿಲ್ಲ.<br>➢ ಸಮಾಜ ಕಾರ್ಯ ವಿಷಯಕ್ಕೆ ಸಂಬಂಧಿಸಿದಂತೆ, ಅಭ್ಯರ್ಥಿಗಳಿಗೆ ನೀಡಲಾದ ಅಂಕಪಟ್ಟಿಯ ತಃಖ್ತೆಯನ್ನು ದ್ವಿಪ್ರತಿಯಲ್ಲಿ ನಿರ್ವಹಿಸಿದ್ದು, ಬೇರೆ ಬೇರೆ ಅಂಕಗಳನ್ನು ನೀಡಲಾಗಿದ್ದು, ಲೆಕ್ಕಪರಿಶೋಧನೆಯಲ್ಲಿ ದೃಢೀಕರಿಸಲಾಗಿರುವುದಿಲ್ಲ.<br>➢ ಮೆರಿಟ್ ಲಿಸ್ಟ್‌ನಲ್ಲಿದ್ದ ಅಭ್ಯರ್ಥಿಗಳು ಲಿಖಿತ ರೂಪದಲ್ಲಿ ಕರ್ತವ್ಯಕ್ಕೆ ಹಾಜರಾಗದಿರುವ ಬಗ್ಗೆ ಪತ್ರ ನೀಡಿದಾಗಲಷ್ಟೇ Waiting listನಲ್ಲಿದ್ದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ನೀಡಬೇಕಾಗಿರುತ್ತದೆ. ಆದರೆ, ಈ ಸಂಬಂಧ ಯಾವುದೇ ದಾಖಲಾತಿ ನಿರ್ವಹಿಸಿರುವುದಿಲ್ಲ.<br>➢ ಚಿಕ್ಕಬಳ್ಳಾಪುರ ಬಿ.ಎಡ್ ಕಾಲೇಜಿಗೆ ನೇಮಕಗೊಂಡ ಅತಿಥಿ ಉಪನ್ಯಾಸಕರು ಸಂದರ್ಶನ ಕೈಗೊಂಡ ಯಾವುದೇ ವಿವರ ಲಭ್ಯವಿರುವುದಿಲ್ಲ. ಮುಂದುವರೆದು, ಸದರಿ ಉಪನ್ಯಾಸಕರಿಗೆ ದಿನಾಂಕ:23.12.2019ಕ್ಕೆ ಬಿ.ಎಡ್ ಕಾಲೇಜು, ಚಿಕ್ಕಬಳ್ಳಾಪುರ ಇವರ ಕೋರಿಕೆಯ ಆಧಾರದ ಮೇಲೆ ಅಂದೇ ಸದರಿ ಉಪನ್ಯಾಸಕರಿಗೆ ನೇಮಕಾತಿ ಆದೇಶವನ್ನು ನೀಡಲಾಗಿದೆ.<br>➢ ಇಂಗ್ಲೀಷ್ ವಿಭಾಗದಲ್ಲಿ IIIA ಮೀಸಲಾತಿ ಅಡಿಯಲ್ಲಿ 38 ಅಂಕಗಳನ್ನು ಪಡೆದ ಅಭ್ಯರ್ಥಿಯನ್ನು ಕೈಬಿಟ್ಟು ಅದೇ ಮೀಸಲಾತಿಯಡಿಯಲ್ಲಿ 30 ಅಂಕಗಳನ್ನು ಪಡೆದಿರುವ ಅಭ್ಯರ್ಥಿಗೆ ನೇಮಕಾತಿ ಆದೇಶ ನೀಡಿರುವ ಬಗ್ಗೆ ಸ್ಪಷ್ಟನೆ ಇರುವುದಿಲ್ಲ.<br>➢ ಕನ್ನಡ ವಿಭಾಗದಲ್ಲಿ ಅಭ್ಯರ್ಥಿಗಳಿಗೆ ನೀಡಿರುವ ಅಂಶಗಳಲ್ಲಿ ಸೇವಾನುಭವ, ವಿದ್ಯಾರ್ಹತೆ, | |

| | |
|---|---|
| M.Phil ಈ ಸಂಬಂಧ ಕೆಲವೊಂದು ಅಭ್ಯರ್ಥಿಗಳಿಗೆ ನೀಡಿರುವ ಅಂಕಗಳ ಬಗ್ಗೆ ಸ್ಪಷ್ಟನೆ ಇರುವುದಿಲ್ಲ.<br>➢ ಕೆಲವೊಂದು ವಿಭಾಗಗಳ ಅತಿಥಿ ಉಪನ್ಯಾಸಕರು ಆದೇಶ ನೀಡಿದ ದಿನಾಂಕದಂದೇ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವುದು ಕಂಡುಬಂದಿರುತ್ತದೆ.<br>➢ ಗಣಿತ ವಿಭಾಗದಲ್ಲಿ ದಿನಾಂಕ:07.10.2019 ರಂದು ವಿಶ್ವವಿದ್ಯಾಲಯವು ಇಬ್ಬರು ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಿದ್ದು, ಸದರಿ ಉಪನ್ಯಾಸಕರನ್ನು ಆಯ್ಕೆ ಮಾಡಿದ ಮಾನದಂಡ ಲೆಕ್ಕಪರಿಶೋಧನೆಗೆ ಲಭ್ಯವಿರುವುದಿಲ್ಲ.<br>➢ ಕಂಪ್ಯೂಟರ್ ವಿಜ್ಞಾನ ವಿಭಾಗದಲ್ಲಿ, ಗ್ರಂಥಾಲಯ, ಗಣಿತ ವಿಭಾಗದಲ್ಲಿ ಅಭ್ಯರ್ಥಿಗಳು ನೇಮಕಾತಿ ಆದೇಶ ನೀಡುವ ಮೊದಲೇ ಅಂದರೆ ನೇಮಕಾತಿ ಆದೇಶ ದಿನಾಂಕ:20.09.2019ಕ್ಕೆ ಮತ್ತು ದಿನಾಂಕ:07.10.2019 ಕ್ಕೆ ನೀಡಿದ್ದು, ಅಭ್ಯರ್ಥಿಗಳು ದಿನಾಂಕ:23.08.2019 ಮತ್ತು ದಿನಾಂಕ:03.10.2019 ಮತ್ತು ದಿನಾಂಕ:04.10.2019ಕ್ಕೆ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ.<br>➢ ಅತಿಥಿ ಉಪನ್ಯಾಸಕರ ನೇಮಕಾತಿಯಲ್ಲಿ ಮೀಸಲಾತಿ ನಿಯಮದ ಪಾಲನೆಯಾಗಿರುವುದಿಲ್ಲ.<br>➢ ಇಂಗ್ಲೀಷ್, ಕಾಮರ್ಸ್ ವಿಭಾಗದ ಅತಿಥಿ ಉಪನ್ಯಾಸಕರು ಯು.ಜಿ.ಸಿ ನಿಯಮದ ಅನ್ವಯ ನೆಟ್, ಸ್ಲೇಟ್, ಪಿ.ಹೆಚ್.ಡಿ ಮುಗಿಸದಿದ್ದರೂ ನೇಮಕಗೊಂಡಿರುತ್ತಾರೆ.<br><br>ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಅಧಿನಿಯಮ 2000ರ ಪ್ರಕರಣ 56(1)ರನ್ವಯ ಒಂದು ವರ್ಷದ ಅವಧಿಗೆ ಮೀರದಂತೆ ಮಂಜೂರಾದ ಹುದ್ದೆಗಳೆದುರಾಗಿ ತಾತ್ಕಾಲಿಕ ಹಾಗೂ ಪರಿನಿಯಮಗಳಿಗೆ ಅನುಸಾರವಾಗಿ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳುವ ಷರತ್ತನ್ನು ಪ್ರಕರಣ 56(2)ರಲ್ಲಿ ವಿಧಿಸಿದ್ದರೂ, ತಾತ್ಕಾಲಿಕ ಅತಿಥಿ ಉಪನ್ಯಾಸಕರ ನೇಮಕಾತಿ ಮಾಡಿರುವ ಸಂಬಂಧ ಬೆಂಗಳೂರು ಉತ್ತರ ವಿಶ್ವವಿದ್ಯಾಲಯವು ಯಾವುದೇ ಪರಿನಿಯಮಗಳನ್ನು ರಚಿಸಿಕೊಂಡಿರುವುದಿಲ್ಲ ಹಾಗೂ ಖಾಯಂ ಹುದ್ದೆಗಳಿಗೆದುರಾಗಿ ನೇಮಕಾತಿ ಮಾಡಿಕೊಂಡಿರುವುದಿಲ್ಲ ಹಾಗೂ ಮಂಜೂರಾದ ಹುದ್ದೆಗಳಿಗೆ ಸರ್ಕಾರದ ಆರ್ಥಿಕ ಇಲಾಖೆಯಿಂದ ಮಂಜೂರಾತಿ ಪಡೆದಿರುವುದಿಲ್ಲ. ಇದು ನಿಯಮ ಬಾಹಿರವಾಗಿದ್ದು, ಸದರಿ ಸಾಲಿನಲ್ಲಿ ಸಂಭಾವನೆಗೆ ಪಾವತಿಸಿರುವ ಮೊತ್ತ ರೂ. 1,52,27,669.00 ಗಳಾಗಿರುತ್ತದೆ. ಆದ್ದರಿಂದ ಸಂಭಾವನೆಗೆ ಪಾವತಿಸಿರುವ ಮೊತ್ತ ರೂ.1,52,27,669.00 ಗಳನ್ನು ಆಕ್ಷೇಪಣೆಯಲ್ಲಿರಿಸಿದೆ. ಮುಂದುವರೆದು, ಆದಾಯ ತೆರಿಗೆ ಕಾಯ್ದೆ 1961 ನಿಯಮ 194(ಜೆ)ರ ಪ್ರಕಾರ ಆದಾಯ ತೆರಿಗೆ ಕಟಾವಣೆ ಮಾಡಿ ಸಂಬಂಧಿಸಿದ ಇಲಾಖೆಗೆ ಜಮಾ ಮಾಡಿರುವ | |

| | |
|---|---|
| ವಿವರಗಳನ್ನು ಒದಗಿಸಿರುವುದಿಲ್ಲ. ಆದ್ದರಿಂದ, ರೂ. 15,22,767.00 ಗಳನ್ನು ವಸೂಲಿಸಿ ಸಂಬಂಧಪಟ್ಟ ಇಲಾಖೆಗೆ ಜಮಾ ಮಾಡಲು ಸೂಚಿಸಿದೆ.ವಿವರಗಳನ್ನು **ಅನುಬಂಧ- 23** ರಲ್ಲಿ ಲಗತ್ತಿಸಿದೆ.<br><br>**20.2. ನಿವೃತ್ತ ಅಧಿಕಾರಿಗಳು/ನೌಕರರನ್ನು ನೇಮಿಸಿಕೊಂಡು ವೇತನ ಪಾವತಿಸಿರುವುದು.**<br><br>ವಿಶ್ವವಿದ್ಯಾಲಯದ ದಾಖಲೆಗಳನ್ವಯ 2016-17, 2017-18, 2018-19, 2019-20ರಲ್ಲಿ ನಿವೃತ್ತ ಅಧಿಕಾರಿ/ನೌಕರರು ನೌಕರರನ್ನು ನೇಮಕ ಮಾಡಿಕೊಂಡು, ವೇತನದ ಮೊತ್ತವಾಗಿ ಒಟ್ಟು ರೂ.15,59,801.00ಗಳನ್ನು ಪಾವತಿಸಲಾಗಿದೆ.<br><br>ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 588 ಸೇನೆನಿ 2015, ದಿನಾಂಕ:02.03.2016ರ ಅನ್ವಯ ನಿವೃತ್ತಿ ಹೊಂದಿದ ನೌಕರರನ್ನು ಪುನರ್‌ನೇಮಕ ಮಾಡುವ ಹಾಗಿಲ್ಲ ಮತ್ತು ಮಂಜೂರಾದ ಹುದ್ದೆಗಳಿಗೆದುರಾಗಿ ಈ ನಿವೃತ್ತ ಅಧಿಕಾರಿ ಮತ್ತು ನೌಕರರ ಹುದ್ದೆಗಳನ್ನು ನೇಮಕ ಮಾಡಿರುವುದಿಲ್ಲ. ನಿವೃತ್ತ ಅಧಿಕಾರಿ/ನೌಕರರ ನೇಮಕಾತಿ ಆದೇಶ ಪ್ರತಿ ಹಾಗೂ ವೇತನ ನಿಗಧಿಯನ್ನು ಯಾವ ಆಧಾರದ ಮೇಲೆ ಮಾಡಲಾಗಿದೆ ಎಂಬುದರ ಕುರಿತು ವಿಚಾರಣಾ ಪತ್ರ ಸಂಖ್ಯೆ:40/20-21, ದಿನಾಂಕ:28.06.2021ರಲ್ಲಿ ವಿವರಣೆ ಕೋರಲಾಗಿದ್ದು, ಉತ್ತರ ಲಭ್ಯವಾಗಿರುವುದಿಲ್ಲ. ಮೇಲ್ಕಂಡ ನಿಯಮಗಳ ಉಲ್ಲಂಘನೆಯಾಗಿರುವುದರಿಂದ ಸದರಿ ನಿವೃತ್ತ ಅಧಿಕಾರಿ/ನೌಕರರನ್ನು ನೇಮಕ ಮಾಡಿಕೊಂಡು, ವೇತನವಾಗಿ ಪಾವತಿಸಿರುವ ಮೊತ್ತ ರೂ.15,59,801/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳನ್ನು **ಅನುಬಂಧ-24**ರಲ್ಲಿ ಲಗತ್ತಿಸಿದೆ. | 20.2) ಬೆಂಗಳೂರು ಉತ್ತರ ವಿಶ್ವವಿದ್ಯಾಲಯವು 2016-17 ರಿಂದ ಹೊಸದಾಗಿ ಪ್ರಾರಂಭವಾಗಿದ್ದು, ಈ ಸಂಸ್ಥೆಯಲ್ಲಿ ಖಾಯಂ ನೌಕರರು ಮತ್ತು ಅನುಭವಿ ಸಿಬ್ಬಂದಿ ಇಲ್ಲದ್ದರಿಂದ ಲೆಕ್ಕಪತ್ರಗಳನ್ನು ನಿರ್ವಹಿಸಲು ತುಂಬಾ ತೊಂದರೆಯಾಗಿದ್ದರಿಂದ ಹಾಗು ಮಹಾಲೇಖಪಾಲರ ಮತ್ತು ಕರ್ನಾಟಕ ರಾಜ್ಯ ಲೆಕ್ಕಪತ್ರ ಇಲಾಖೆಯ ಆಡಿಟ್ ವರದಿಗಳಿಗೆ ಅನುಪಾಲನಾ ವರದಿಯನ್ನು ಸಲ್ಲಿಸಬೇಕಾಗಿದ್ದರಿಂದ ನುರಿತ ಅನುಭವಿ ನಿವೃತ್ತಿ ಅಧಿಕಾರಿಗಳನ್ನು ನೇಮಿಸಿಕೊಂಡು ದಿನನಿತ್ಯದ ಕಛೇರಿಯ ಕೆಲಸಗಳನ್ನು ನಿಯಾಮಾನುಸಾರ ನಿರ್ವಹಿಸಲು ಅನುಕೂಲವಾಗುವುದಾಗಿ, ಇವರ ಸೇವೆಯು ಅತ್ಯಾವಶ್ಯಕವಾಗಿದ್ದರಿಂದ ಹಾಗೂ ವಿಶ್ವವಿದ್ಯಾಲಯದ ಹಿತದೃಷ್ಠಿಯಿಂದ ಸದರಿಯವರು ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯಲ್ಲಿ ಅನುಮೋದಿಸಿ, ನೇಮಿಸಿಕೊಳ್ಳಲಾಗಿದೆ.<br><br>ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ 588 ಸೇನೆವಿ 2015 ದಿನಾಂಕ:02.03.2016 ರ ಪ್ಯಾರಾ (2) ರಲ್ಲಿ ಸಚಿವ ಸಂಪುಟದ ಅನುಮೋದನೆ ಪಡೆದು ಪುನರ್ ನೇಮಕಗೊಂಡ ನೌಕರ/ ಅಧಿಕಾರಿಗಳ ಪ್ರಕರಣಗಳಿಗೆ ಸರ್ಕಾರದ ಸುತ್ತೋಲೆಯ ಪ್ಯಾರಾ (1) ಅನ್ವಯಿಸುವುದಿಲ್ಲವೆಂದು ಸ್ಪಷ್ಟಪಡಿಸಿದೆ.<br><br>ಅದರಂತೆ ಸದರಿ ನಿವೃತ್ತಿ ಅಧಿಕಾರಿಗಳು/ನೌಕರರನ್ನು ಸಿಂಡಿಕೇಟ್ ಸಮಿತಿಯಲ್ಲಿ ಮಂಡಿಸಿ, ಅನುಮೋದನೆ ಪಡೆದು ನೇಮಿಸಿಕೊಳ್ಳಲಾಗಿದೆ.<br><br>ಆದುದರಿಂದ ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯ, ಕೋಲಾರದಲ್ಲಿ ಕೆಲಸ ನಿರ್ವಹಿಸುತ್ತಿರುವ ನಿವೃತ್ತಿ ಅಧಿಕಾರಿಗಳಿಗೆ ಸದರಿ ಆದೇಶ ಅನ್ವಯಿಸುವುದಿಲ್ಲ.<br><br>ಎರಡನೇಯದಾಗಿ ನಿವೃತ್ತಿಹೊಂದಿ ಅದೇ ಹುದ್ದೆಯಲ್ಲಿ ಮುಂದುವರೆದು (Continuation) ಮರು ನೇಮಕಾತಿ (Re-Apointed) ಆಗಿ ಅದೇ ಹುದ್ದೆಗೆ ಎದುರಾಗಿ ಅದೇ ಹುದ್ದೆಯಲ್ಲಿ, ಅದೇ ವೇತನ ಶ್ರೇಣಿಯಲ್ಲಿ (Pay Scale) ಮುಂದುವರೆಸಿದ್ದಲ್ಲಿ ಮಾತ್ರ ಅನ್ವಯವಾಗುತ್ತದೆ. |

## 21. ಬೋಧಕೇತರ ಸಿಬ್ಬಂದಿಗಳ ವೇತನ ಮತ್ತು ಭತ್ಯೆಗಳು

### 21.1. ಬೋಧಕೇತರ ಸಿಬ್ಬಂದಿಗಳ ನೇಮಕಕ್ಕೆ ಸಂಬಂಧಿಸಿದಂತೆ

ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯವು ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಪ್ರತ್ಯೇಕಗೊಂಡು ಸ್ವತಂತ್ರ ಕಾರ್ಯಾರಂಭ ಮಾಡಿದ ನಂತರದಲ್ಲಿ, ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯಕ್ಕೆ 100 ಹುದ್ದೆಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ಸದರಿ ವರ್ಗಾವಣೆಗೊಂಡ ಹುದ್ದೆಗಳಲ್ಲಿ 08 ಹುದ್ದೆಗಳನ್ನು ಬೆಂಗಳೂರು ವಿಶ್ವವಿದ್ಯಾನಿಲಯದ ಬೋಧಕೇತರ ಸಿಬ್ಬಂದಿಗಳು ಅವರು ವ್ಯಕ್ತ ಪಡಿಸಿದ ಅಭಿಮತಕ್ಕೆ ಅನುಗುಣವಾಗಿ ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸಲಾಗಿದೆ.

ವಿಶ್ವವಿದ್ಯಾನಿಲಯವು 2016-17 ರಿಂದ 2019-20ನೇ ಸಾಲಿನಲ್ಲಿ ಬೋಧಕೇತರ ಸಿಬ್ಬಂದಿಗಳನ್ನು ನೇಮಕ ಮಾಡಿಕೊಂಡಿದ್ದು, ಈ ಕೆಳಕಂಡ ನ್ಯೂನತೆಗಳನ್ನು ಗಮನಿಸಿದೆ.

1. ವಿಶ್ವವಿದ್ಯಾನಿಲಯಕ್ಕೆ 2016-17 ರಿಂದ 2019-20ನೇ ಸಾಲಿನವರೆಗೆ ಸರ್ಕಾರದಿಂದ ಯಾವುದೇ ಹುದ್ದೆಗಳು ಮಂಜೂರಾಗಿರುವುದಿಲ್ಲ.
2. ನೇಮಕಾತಿ ಪ್ರಕ್ರಿಯೆ ಹಾಗೂ ಸಂಭಾವನೆ ದರ ನಿಗಧಿಗೆ ಅನುಸರಿಸಿರುವ ನಿಯಮಗಳ ಆದೇಶಗಳನ್ನು ಒದಗಿಸಿರುವುದಿಲ್ಲ.
3. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999, ನಿಯಮ 2000 ನಿಯಮ 4(ಇ)(II) ರೀತ್ಯಾ ರೂ.1.00 ಲಕ್ಷ ಮೀರಿದ ಸರಕು/ಸೇವೆಗಳನ್ನು

ಸಮಾಲೋಚಕರಿಗೆ (Consultant) ನಿಗಧಿತ ಅವಧಿಗೆ ನಿಗಧಿತ ಕೆಲಸಕ್ಕಾಗಿ ಮಾತ್ರ ನೇಮಿಸಲಾಗಿದೆ ಹೊರೆತು ಯಾವ ಹುದ್ದೆಗೆ ಎದುರಾಗಿ ಮರು ನೇಮಕಾತಿ ಮಾಡಿರುವುದಿಲ್ಲ. ಈ ಅವಧಿಗೆ ಸಂಭಾವನೆ ಶುಲ್ಕ Fixed ಮಾತ್ರ ನೀಡಲಾಗುತ್ತಿದೆ ವಿನಃ ಪೂರ್ಣ ಪ್ರಮಾಣದಲ್ಲಿ ಆ ಹುದ್ದೆಗೆ ಎದುರಾಗಿ ವೇತನವನ್ನು ನೀಡಲಾಗುತ್ತಿಲ್ಲ.

ಮೇಲ್ಕಂಡ ಎಲ್ಲಾ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಸದರಿ ಕಂಡಿಕೆಯನ್ನು ಆಡಿಟ್ ವರದಿಯಿಂದ ಕೈ ಬಿಡಲು ಕೋರಲಾಗಿದೆ.

21.1) 23.03.2019 ರ ಸರ್ಕಾರಿ ಆದೇಶದ ಪ್ರಕಾರ, ಸಿಬ್ಬಂದಿಯನ್ನು ನೇಮಿಸಿಕೊಳ್ಳಲು ಹಣಕಾಸು ಇಲಾಖೆಯ ಪೂರ್ವಾನುಮತಿ ಪಡೆಯಬೇಕು ಎಂದು ಆಡಿಟ್ ಪ್ಯಾರಾದಲ್ಲಿ ಸೂಚಿಸಿದಂತೆ, ಹಣಕಾಸು ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ದಿನಾಂಕ 20.12.2021 ಮತ್ತು 05.04.2022 ರಲ್ಲಿ ಸಿಬ್ಬಂದಿಯನ್ನು ನೇಮಿಸಿಕೊಳ್ಳಲು ಹಣಕಾಸು ಇಲಾಖೆಯಿಂದ ಅನುಮೋದನೆ ಮತ್ತು ಮಂಜೂರಾತಿ ಆದೇಶಗಳನ್ನು ನೀಡುವಂತೆ ವಿನಂತಿಸಲಾಯಿತು (ಪ್ರತಿ (1) & (2) ಲಗತ್ತಿಸಿದೆ).

ಆದರೆ ಇದುವರೆಗೂ ಸರ್ಕಾರದಿಂದ ಯಾವುದೇ ಕ್ರಮಕೈಗೊಂಡಿಲ್ಲ.

ಸರ್ಕಾರದ ಆದೇಶದ ಸಂಖ್ಯೆ:ಇಡಿ 63 ಯುಬಿವಿ ದಿನಾಂಕ: 05.10.2020. ರಲ್ಲಿ 100 ಬೋಧಕೇತರ / ಬೋಧಕ ಸಿಬ್ಬಂದಿಗಳ ಪೈಕಿ 13 ಹುದ್ದೆಗಳನ್ನು ರದ್ದುಗೊಳಿಸಿ, 87 ಹುದ್ದೆಗಳನ್ನು ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರಕ್ಕೆ ಮಂಜೂರು ಮಾಡಲಾಗಿದೆ ಎಂದು ಆದೇಶಿಸಲಾಗಿದೆ. (ಪ್ರತಿ (3) ಲಗತ್ತಿಸಿದೆ).

ಮಂಜೂರಾದ 87 ಹುದ್ದೆಗಳಲ್ಲಿ ಪ್ರಸ್ತುತ 53 ಬೋಧಕೇತರ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ಹೆಚ್ಚುವರಿ ಸಿಬ್ಬಂದಿಯನ್ನು ತೆಗೆದುಹಾಕುವ ಪ್ರಶ್ನೆ ಉದ್ಭವಿಸುವುದಿಲ್ಲ.

<table>
<tr>
<td>
ಖರೀದಿಸಲು/ಪಡೆಯಲು ಟೆಂಡರ್ ಮಾಡಬೇಕೆಂದು ಸ್ಪಷ್ಟ ನಿರ್ದೇಶನವಿದ್ದರೂ, ಟೆಂಡರ್ ಪ್ರಕ್ರಿಯೆ ಕೈಗೊಂಡಿರುವುದಿಲ್ಲ.<br>
4. ಸಿಬ್ಬಂದಿಗಳಿಗೆ ನೇಮಕಾತಿ ಆದೇಶ ನೀಡಿರುವುದಿಲ್ಲ.<br>
5. ಸಿಬ್ಬಂದಿಗಳ ವಿದ್ಯಾರ್ಹತೆ, ಬಯೋಡೇಟಾ ಮಾಹಿತಿ ಲೆಕ್ಕ ಪರಿಶೋಧನೆಗೆ ಲಭ್ಯವಿರುವುದಿಲ್ಲ.<br>
6. ಸಿಬ್ಬಂದಿಗಳ ನೇಮಕಾತಿಯಲ್ಲಿ ಯಾವುದೇ ರೋಸ್ಟರ್ ಮೀಸಲಾತಿ ನಿಯಮ ಪಾಲನೆಯಾಗಿರುವ ಬಗ್ಗೆ ಕಡತದಲ್ಲಿ ಮಾಹಿತಿ ಇರುವುದಿಲ್ಲ.<br>
7. ತಾತ್ಕಾಲಿಕ ಗುತ್ತಿಗೆ ನೇಮಕಾತಿ ಸಂಬಂಧ ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯ ಯಾವುದೇ ಪರಿನಿಯಮಗಳನ್ನು ರಚಿಸಿಕೊಂಡಿರುವುದಿಲ್ಲ.<br>
8. 2016-17,2017-18,2018-19 ಮತ್ತು 2019-20ನೇ ಸಾಲಿನಲ್ಲಿ, ವಿಶ್ವವಿದ್ಯಾಲಯವು ಬೋಧಕೇತರ ಸಿಬ್ಬಂದಿಗಳನ್ನು ನೇಮಕ ಮಾಡಿದ್ದು, ಸದರಿ ನೌಕರರು ಕರ್ತವ್ಯಕ್ಕೆ ವರದಿ ಮಾಡಿಕೊಂಡಾಗ ನಿರ್ದಿಷ್ಟ ಮೊತ್ತದ ವೇತನ ನೀಡುತ್ತಿದ್ದು. ನಂತರದಲ್ಲಿ ಏರಿಕೆ ಮಾಡಿರುವುದು ಕಂಡು ಬಂದಿರುತ್ತದೆ. ವೇತನ ನಿರ್ಧರಣೆಯ ಮಾನದಂಡಗಳಾಗಲೀ, ವೇತನ ಏರಿಕೆಯನ್ನು ಮಾಡಿರುವ ಮಾನದಂಡವಾಗಲೀ, ಲೆಕ್ಕ ಪರಿಶೋಧನೆಗೆ ಲಭ್ಯವಿರುವುದಿಲ್ಲ. ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಬೋಧಕೇತರ ಸಿಬ್ಬಂದಿಗಳ ವಿವರ ಮತ್ತು ಅವರು ಸೇರ್ಪಡೆಗೊಂಡಾಗ ಪಡೆಯುತ್ತಿದ್ದ ವೇತನ ಮತ್ತು ಮಾರ್ಚ್ -2020ರಲ್ಲಿ ಪಡೆಯುತ್ತಿದ್ದ ವೇತನದ ವಿವರವನ್ನು ಅನುಬಂಧ-25 ರಲ್ಲಿ ಕಾಣಿಸಲಾಗಿದೆ.<br><br>
ಈ ಸಂಬಂಧ ಲೆಕ್ಕಪರಿಶೋಧನಾ ವಿಚಾರಣಾ ಸಂಖ್ಯೆ: 70/20-21, ದಿನಾಂಕ: 02.08.2021 ರಲ್ಲಿ ವಿವರ ಕೋರಿದ್ದರೂ, ಸಮಂಜಸವಾದ ವಿವರಣೆಗಳಿರುವುದಿಲ್ಲ. 2016-17 ನೇ ಸಾಲಿನಿಂದ 2019-20ನೇ ಸಾಲಿನವರೆಗೆ ಬೋಧಕೇತರ ಸಿಬ್ಬಂದಿಗೆ ಒಟ್ಟು ರೂ.1,19,01,731.00/- ಗಳನ್ನು ಪಾವತಿಸಲಾಗಿದೆ. ವಿವರಗಳನ್ನು ಅನುಬಂಧ- 25 ಅ ರಲ್ಲಿ ನೀಡಲಾಗಿದೆ.
</td>
<td>
ವಿಶ್ವವಿದ್ಯಾನಿಲಯದ ವಿವಿಧ ಕೆಲಸಗಳಾದ ಬೋಧನೆ, ಪರೀಕ್ಷೆ, ಪ್ರವೇಶಾತಿ, ಸಂಬಂಧ, ಕಚೇರಿ ಕೆಲಸಗಳು, ಗ್ರಂಥಾಲಯ, ಹಾಸ್ಟೆಲ್‌ಗಳು, ಕ್ರೀಡೆಗಳು, ಎನ್‌ಎಸ್‌ಎಸ್ ಇತ್ಯಾದಿಗಳನ್ನು ವಿಶ್ವವಿದ್ಯಾಲಯದಲ್ಲಿ ನಿರ್ವಹಿಸಲು ಅನುಭವಿ ಮತ್ತು ಪೂರ್ಣ ಸಮಯದ ಸಿಬ್ಬಂದಿ ಇರಲಿಲ್ಲ.<br><br>
ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು, ರವರ ಪತ್ರದ ಸಂಖ್ಯೆ: ಇಡಿ 428 ಯುಬಿವಿ 2017 ದಿನಾಂಕ:04.12.2017 ರಲ್ಲಿ ಮೊದಲ ಉಪಕುಲಪತಿಗೆ ಯಾವುದೇ ಕೆಲಸಗಳನ್ನು ತೆಗೆದುಕೊಳ್ಳಲು ಅಧಿಕಾರವಿದೆ, ಎಂದು ತಿಳಿಸಿರುತ್ತಾರೆ (ಪ್ರತಿ (4) ಲಗತ್ತಿಸಿದೆ).<br><br>
ದಿನಾಂಕ:04.01.2018 ರಂದು ನಡೆದ ಸಲಹಾ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿದ್ದು, ನೇರ ಸಂದರ್ಶನ ಅಥವಾ ಉನ್ನತ ಪ್ರಾಧಿಕಾರದ ನಿರ್ಧಾರದಂತೆ ಸಿಬ್ಬಂದಿಯ ಸೇವೆಗಳನ್ನು ಪಡೆಯಲು ಶಿಫಾರಸು ಮಾಡಲಾಗಿದೆ (ಪ್ರತಿ (5) ಲಗತ್ತಿಸಿದೆ).<br><br>
ಕೆಲಸ ಮಾಡುವ ಸಿಬ್ಬಂದಿಗೆ ಅವರ ಹುದ್ದೆಗೆ ಯಾವುದೇ ಪದನಾಮವನ್ನು ನೀಡಲಾಗಿಲ್ಲ, ಆದರೆ ಅವರ ಕೆಲಸಕ್ಕೆ ಕನಿಷ್ಠ ಮಾಸಿಕ ಸಂಭಾವನೆಯನ್ನು ಮಾತ್ರ ಪಾವತಿಸಲಾಗಿದೆ. ಇದು ವಿತ್ತೀಯವಾಗಿ ವಿಶ್ವವಿದ್ಯಾಲಯಕ್ಕೆ ಯಾವುದೇ ಹೊರೆಯಾಗುವುದಿಲ್ಲ.<br><br>
2017-18 ರಿಂದ 2020-21 ರ ಅವಧಿಯಲ್ಲಿ ತಾತ್ಕಾಲಿಕ ಸಿಬ್ಬಂದಿಯ ವೇತನಕ್ಕೆ ರೂ.1,19,01,731/-ಗಳನ್ನು ಮಾತ್ರ ಪಾವತಿಸಲಾಗಿದೆ, ಇದು ಅವರ ಕೆಲಸಕ್ಕೆ ಪಾವತಿಸುವುದು ಕಡ್ಡಾಯವಾಗಿದೆ. ಅವರಿಗೆ ಸಂಬಳ ನೀಡದಿದ್ದರೆ ಅವರು ಕೆಲಸ ತ್ಯಜಿಸುತ್ತಾರೆ ಮತ್ತು ವಿಶ್ವವಿದ್ಯಾಲಯದ ಸಂಪೂರ್ಣ ಕಾರ್ಯಗಳು ಸ್ಥಗಿತವಾಗುತ್ತದೆ.<br><br>
ಈ ಕಾರಣದಿಂದಾಗಿ ಹಣಕಾಸು ಇಲಾಖೆಯ ಅನುಮೋದನೆಯ ನಿರೀಕ್ಷಣೆಯಲ್ಲಿ ವೇತನವನ್ನು ವಿಶ್ವವಿದ್ಯಾಲಯದ ನಿಧಿಯಿಂದ ಪಾವತಿಸಲಾಗಿದೆ. ಸಿಬ್ಬಂದಿ ಪುನಶ್ಚೇತನಕ್ಕೆ ಸರ್ಕಾರ ಆದೇಶ ಹೊರಡಿಸಿದ ನಂತರ ಸರ್ಕಾರದ ಅನುದಾನವನ್ನು ಪಡೆಯಲಾಗುವುದು.<br><br>
ಇದೆ ಕಂಡಿಕೆಗೆ ಮಹಾಲೇಖಪಾಲರು ಸಹ ಆಕ್ಷೇಪಣೆಯನ್ನು ವ್ಯಕ್ತಪಡಿಸಲಾಗಿತ್ತು, (ಪ್ರತಿ (6) ಲಗತ್ತಿಸಿದೆ).<br><br>
ಸದರಿ ಕಂಡಿಕೆಗೆ ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಕಛೇರಿಯಿಂದ ಅನುಪಾಲನಾ ವರದಿಯನ್ನು ಸಲ್ಲಿಸಲಾಯಿತು (ಪ್ರತಿ (7) ಲಗತ್ತಿಸಿದೆ).
</td>
</tr>
</table>

| | |
|---|---|
| | ಸದರಿ ಕಂಡಿಕೆಯ ಅನುಪಾಳನಾ ವರದಿಯನ್ನು ಮಹಾಲೇಖಪಾಲರು ಪರಿಶೀಲಿಸಿ, ಕಂಡಿಕೆಯನ್ನು ಆಡಿಟ್ ವರದಿಯಿಂದ ಕೈಬಿಟ್ಟಿರುತ್ತಾರೆ (ಪ್ರತಿ (8) ಲಗತ್ತಿಸಿದೆ).<br><br>ಮೇಲ್ಕಂಡ ಎಲ್ಲಾ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಸದರಿ ಕಂಡಿಕೆಯನ್ನು ಆಡಿಟ್ ವರದಿಯಿಂದ ಕೈಬಿಡಲು ಕೋರಲಾಗಿದೆ. |
| **21.2. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999ರ ಮತ್ತು ನಿಯಮ 2000 ರನ್ನು ಉಲ್ಲಂಘಿಸಿ ಟೆಂಡರ್ ಪಡೆಯದೇ ಸೆಕ್ಯೂರಿಟೀಸ್/ಸ್ವಚ್ಛತಾ ಕಾರ್ಯ ಸಿಬ್ಬಂದಿಗಳನ್ನು ಪಡೆದಿರುವುದು**<br><br>2018-19 ಮತ್ತು 2019-20ನೇ ಸಾಲಿನಲ್ಲಿ ವಿಶ್ವವಿದ್ಯಾಲಯದಲ್ಲಿ (ಸೆಕ್ಯೂರಿಟೀಸ್) ಭದ್ರತಾ ಮತ್ತು ಸ್ವಚ್ಛತಾ ಕಾರ್ಯಕ್ಕಾಗಿ ವಿವಿಧ ಏಜೆನ್ಸಿಗಳಿಂದ ಸಿಬ್ಬಂದಿಗಳನ್ನು ನೇಮಕ ಮಾಡಿದ್ದು, ಈ ಕೆಳಕಂಡ ನ್ಯೂನತೆಗಳು ಕಂಡುಬಂದಿದೆ.<br><br>1) ಸದರಿ ಪಾವತಿಯು 1 ಲಕ್ಷ ಮೀರಿದ್ದರೂ ಟೆಂಡರ್ ಮೂಲಕ ಸೇವೆ ಪಡೆದಿರುವುದಿಲ್ಲ.<br>2) ಕನಿಷ್ಠ ವೇತನ ಕಾಯ್ದೆ ಪ್ರಕಾರ ಪ್ರತಿ ಸಿಬ್ಬಂದಿಗಳ ವೇತನದಿಂದ ಇ.ಎಸ್.ಐ ಮತ್ತು ಪಿ.ಎಫ್ ಕಟಾವಣೆ ಮಾಡಿ, ಸಂಬಂಧಪಟ್ಟ ಇಲಾಖೆಗೆ ಜಮೆ ಮಾಡಿರುವ ವಿವರಗಳಿರುವುದಿಲ್ಲ.<br>3) ಆದಾಯ ತೆರಿಗೆ ಕಾಯ್ದೆ 1961 ನಿಯಮ 144(ಸಿ) ರ ಪ್ರಕಾರ ಶೇ.2 ರಷ್ಟು ಆದಾಯ ತೆರಿಗೆ ಕಟಾವಣೆ ಮಾಡಿರುವುದಿಲ್ಲ. ಈ ಸಂಬಂಧ ಲೆಕ್ಕಪರಿಶೋಧನಾ ವಿಚಾರಣಾ ಸಂಖ್ಯೆ:_53/20-21,ದಿನಾಂಕ:06.07.2021ರಲ್ಲಿ ವಿವರ ಕೋರಿದ್ದರೂ, ಸಮಂಜಸವಾದ ವಿವರಣೆಗಳಿರುವುದಿಲ್ಲ. ಆದುದರಿಂದ ರೂ.28,02,734/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಆದಾಯ ತೆರಿಗೆ ಕಟಾವಣೆ ಮೊತ್ತ ರೂ.10,561/-ಗಳನ್ನು ವಸೂಲಾತಿಯಲ್ಲಿಡಲಾಗಿದೆ.ವಿವರಗಳನ್ನು **ಅನುಬಂಧ-26**ರಲ್ಲಿ ನೀಡಲಾಗಿದೆ. | 21.2) |

| | |
|---|---|
| **22. ಪ್ರಯಾಣ ಭತ್ಯೆಗಳು**<br>**22.1 .ಬೋರ್ಡ್ ಆಫ್ ಸ್ಟಡೀಸ್(B.O.S) ಗೆ ಸಂಬಂಧಿಸಿದ ಭತ್ಯೆಯನ್ನು ಪಾವತಿಸಿರುವುದು:-**<br><br>ವಿಶ್ವವಿದ್ಯಾಲಯದಲ್ಲಿ 2018-19 ಮತ್ತು 2019-20ನೇ ಸಾಲಿನಲ್ಲಿ B.O.Sರ (ಬೋರ್ಡ್ ಆಫ್ ಸ್ಟಡೀಸ್) ಗೆ ಸಂಬಂಧಿಸಿದಂತೆ ಪಾವತಿಗಳನ್ನು ಪರಿಶೀಲಿಸಿದಾಗ, ಸದರಿ ಪಾವತಿಗಳಿಗೆ ಸಂಬಂಧಿಸಿದಂತೆ ಯಾವುದೇ ಪರಿನಿಯಮಗಳನ್ನು ರಚಿಸಿಕೊಂಡಿರುವುದಿಲ್ಲ ಮತ್ತು ನಿರ್ದಿಷ್ಟ ಮೊತ್ತದ ಟಿಎ/ಡಿಎ ಪಾವತಿಸಲು ಯಾವುದೇ ಆದೇಶಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಈ ಸಂಬಂಧ ಲೆಕ್ಕತಪಾಸಣಾ ವಿಚಾರಣಾ ಪತ್ರ ಸಂಖ್ಯೆ:64/2020-21, ದಿನಾಂಕ:22.07.2021ರಂದು ವಿವರ ಕೋರಿದ್ದರೂ, ಯಾವುದೇ ಸಮರ್ಪಕವಾದ ಉತ್ತರವನ್ನು ನೀಡಿರುವುದಿಲ್ಲ. ಆದುದರಿಂದ 2018-19 ಮತ್ತು 2019-20ನೇ ಸಾಲಿನಲ್ಲಿ ಪಾವತಿಸಿರುವ ಒಟ್ಟು ರೂ.1,78,305/- ಗಳ ಬಿ.ಒ.ಎಸ್ ಮೊತ್ತವನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳು ಕೆಳಕಂಡಂತಿವೆ. | 22.1) |

| Cheque No | Date | Amount |
|---|---|---|
| 945857 | 27/06/2019 | 10064 |
| 254417 | 22/04/19 | 22534 |
| 91318 | 16-05-18 | 17250 |
| 641244 | 07-09-18 | 23698 |
| 641272 | 11-02-19 | 68561 |
| 754638 | 02-11-19 | 36218 |
| | **Total** | **178325** |

<table>
<tr>
<td>

22.2 B.O.E ಗೆ ಸಂಬಂಧಿಸಿದ ಭತ್ಯೆಯನ್ನು ಪಾವತಿಸಿರುವುದು

ವಿಶ್ವವಿದ್ಯಾಲಯದಲ್ಲಿ 2018-19 ಮತ್ತು 2019-20ನೇ ಸಾಲಿನಲ್ಲಿ ಬಿ.ಒ.ಇ ಸಂಬಂಧಿಸಿದಂತೆ, ಟಿಎ/ಡಿಎ ಭತ್ಯೆಯನ್ನು ಪಾವತಿಸಲಾಗಿದ್ದು, ಈ ಕೆಳಕಂಡ ನ್ಯೂನತೆಗಳನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.

1. ಸದರಿ ಪಾವತಿಗೆ ಯಾವುದೇ ಪರಿನಿಯಮ ರಚಿಸಿಕೊಳ್ಳದಿರುವುದು.
2. ಪಾವತಿ ಬಿಲ್ಲುಗಳಲ್ಲಿ ಹಾಜರಾತಿ ತಃಖ್ತೆಗೆ ಮುಖ್ಯಸ್ಥರ ದೃಢೀಕರಣವಿಲ್ಲದಿರುವುದು.
3. ಸದರಿ ಪಾವತಿಯನ್ನು ಬೆಂಗಳೂರು ವಿಶ್ವವಿದ್ಯಾಲಯ ಪಾವತಿ ಮಾಡುತ್ತಿರುವ ದರಗಳಲ್ಲಿ ಪಾವತಿ ಮಾಡುತ್ತಿದ್ದು, ಬೆಂಗಳೂರು ವಿಶ್ವವಿದ್ಯಾಲಯದ ಆದೇಶದಲ್ಲಿ ಬೆಂಗಳೂರು ನಗರದ ಸದಸ್ಯರಿಗೆ ರೂ. 300/- ಮತ್ತು ಬೆಂಗಳೂರು ಹೊರವಲಯದವರಿಗೆ ರೂ. 400/- ಎಂದು ಆದೇಶಿಸಲಾಗಿದೆ. ಆದರೆ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಪಾವತಿಯನ್ನು ಪರಿಶೀಲಿಸಿದಾಗ ಬೆಂಗಳೂರು ನಗರದ ಸದಸ್ಯರಿಗೆ ರೂ. 500/- ಮತ್ತು ಬೆಂಗಳೂರು ಹೊರವಲಯದವರಿಗೆ ರೂ. 600/- ಪಾವತಿಸಲಾಗಿದೆ.
4. ಕೋಲಾರ ಕೇಂದ್ರದಲ್ಲಿ ನಡೆಯುವ ಬಿ.ಒ.ಇ ಸಭೆಗಳಿಗೆ ರೂ. 400/- ಪಾವತಿ ಮಾಡಿದ್ದು, ಯಾವುದೇ ಕಛೇರಿ ಆದೇಶವಿರವುದಿಲ್ಲ.
5. ಟಿ.ಎ ಬಿಲ್ಲು ಪಾವತಿಗೆ ಸಂಬಂಧಿಸಿದಂತೆ, ಕೆ.ಸಿ.ಎಸ್.ಆರ್ ನಿಯಮವಳಿ ಪಾಲಿಸುವುದು.
6. ಸದರಿ ಪಾವತಿ ಬಿಲ್ಲುಗಳಲ್ಲಿ ಬಿ.ಒ.ಇ ಸಭೆ ನಡೆಯುವ ದಿನಾಂಕ ಮತ್ತು ಸದಸ್ಯರಿಗೆ ಸಂಬಂಧಿಸಿದಂತೆ ಕುಲಸಚಿವರ ಆದೇಶ ಪ್ರತಿ ಇರುವುದಿಲ್ಲ.

ಈ ಸಂಬಂಧ ಲೆಕ್ಕಪರಿಶೋಧನೆ ಸಂಖ್ಯೆ. 62/2020-21, ದಿನಾಂಕ: 20.07.2021 ರಂದು ವಿವರಣೆ ಕೋರಲಾಗಿ ಸಮರ್ಪಕ ವಿವರಣೆ ನೀಡಿರುವುದಿಲ್ಲ. ಆದುದರಿಂದ, ರೂ. 13,46,747/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ರೂ. 31,040/- ಗಳನ್ನು ಸಂಬಂಧಪಟ್ಟವರಿಂದ ವಸೂಲಾತಿಯಲ್ಲಿಡಲಾಗಿದೆ.ವಿವರಗಳನ್ನು **ಅನುಬಂಧ- 27**ರಲ್ಲಿ ಲಗತ್ತಿಸಿದೆ.

</td>
<td>22.2)</td>
</tr>
</table>

| | |
|---|---|
| **22.3 LIC ಸಮಿತಿ ಪಾವತಿಗೆ ಸಂಬಂಧಿಸಿದಂತೆ,** | |
| 2018–19 ಮತ್ತು 2019–20ನೇ ಸಾಲಿನ (Local Inquiry committee) ಪಾವತಿಗೆ ಸಂಬಂಧಿಸಿದಂತೆ, ಈ ಕೆಳಕಂಡ ನ್ಯೂನತೆಗಳನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. | 22.3) |

1) 2018–19ನೇ ಸಾಲಿನ ಪಾವತಿ ಬಿಲ್ಲುಗಳಲ್ಲಿ LIC ಸಮಿತಿ ರಚನೆ ಮಾಡಿ ಕಾಲೇಜುಗಳನ್ನು ಹಂಚಿಕೆ ಮಾಡಿರುವುದಕ್ಕೆ ಕುಲಸಚಿವರ ಆದೇಶ ಪ್ರತಿಗಳಿರುವುದಿಲ್ಲ.
2) ಸಂಬಂಧಿಸಿದ ಸಮಿತಿಯ ಸದಸ್ಯರು ಸಮಿತಿಯಲ್ಲಿ ಹಾಜರಾಗಿದ್ದಕ್ಕೆ ಯಾವುದೇ ಹಾಜರಾತಿ ಪ್ರತಿ ಲಭ್ಯವಿರುವುದಿಲ್ಲ.
3) ಈ ಪಾವತಿಗೆ ಯಾವುದೇ ಪರಿನಿಯಮಗಳನ್ನು ರಚಿಸಿಕೊಂಡಿರುವುದಿಲ್ಲ.
4) 2019–20ನೇ ಸಾಲಿನಲ್ಲಿ 2018–19ನೇ ಸಾಲಿನ LIC ಸಮಿತಿಗೆ ಸಂಬಂಧಿಸಿದ ಪಾವತಿಯನ್ನು ಮಾಡಲಾಗಿದ್ದು, ಯಾವುದೇ ಸಮಂಜಸವಾದ ವಿವರಣೆಗಳಿರುವುದಿಲ್ಲ. (LIC ಸಮಿತಿ ರಚಿಸಿ ಕಾಲೇಜು ಹಂಚಿಕೆ ಮಾಡಿರುವುದು)
5) ಧನಾದೇಶ ಸಂಖ್ಯೆ:968055/23.07.2018ರಲ್ಲಿ ರೂ.29,100/–ಗಳನ್ನು 9 ಕಾಲೇಜುಗಳ ಹಂಚಿಕೆ ಮಾಡಲು ಪಾವತಿಸಲಾಗಿದೆ. ಆದರೆ ಆದೇಶ ಪ್ರತಿಯಲ್ಲಿ ಕೇವಲ 8 ಕಾಲೇಜುಗಳ ಹಂಚಿಕೆ ವಿವರ ನೀಡಲಾಗಿದೆ.

**ಪಾವತಿ ವಿವರಗಳು ಈ ಕೆಳಕಂಡಂತಿದೆ:–**

| ಕ್ರಸಂ. | ಧನಾದೇಶ ಸಂಖ್ಯೆ/ದಿನಾಂಕ | ಪಾವತಿ ಮೊತ್ತ |
|---|---|---|
| 1. | 041317/16.05.2018 | 20,000/– |
| 2. | 968026/18.06.2018 | 3,52,700/– |
| 3. | 968044/10.07.2018 | 50,842/– |
| 4. | 968055/23.07.2018 | 29,100/– |
| 5. | 091327/22.05.2018 | 2,500/– |
| 6. | 754634/07.02.2019 | 18,500/– |
| | ಒಟ್ಟು | 4,73,642/– |

| | |
|---|---|
| ಈ ಸಂಬಂಧ ಲೆಕ್ಕಪರಿಶೋಧನಾ ಸಂಖ್ಯೆ:63/2021, ದಿನಾಂಕ:20.07.2021ರಲ್ಲಿ ವಿವರ ಕೋರಿದ್ದರೂ, ಸಮಂಜಸವಾದ ವಿವರಣೆ ನೀಡಿರುವುದಿಲ್ಲ. ಆದುದರಿಂದ ರೂ.4,73,642/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. | |
| **22.4 ಪರೀಕ್ಷಾ ಕಾರ್ಯಕ್ಕೆ ಸಂಬಂಧಿಸಿದಂತೆ "Squad Members" ಗೆ ಪಾವತಿಸಿರುವ ಬಗ್ಗೆ**<br><br>2018-19 ಮತ್ತು 2019-20ನೇ ಸಾಲಿನಲ್ಲಿ ಪರೀಕ್ಷಾ ಕಾರ್ಯಕ್ಕೆ ಸಂಬಂಧಿಸಿದಂತೆ, Squad Memberಗಳಿಗೆ ಭತ್ಯೆಯನ್ನು ಪಾವತಿ ಮಾಡಲಾಗಿದ್ದು, ಈ ಕೆಳಕಂಡ ನ್ಯೂನ್ಯತೆಗಳು ಕಂಡುಬಂದಿದೆ.<br><br>1) 2018-19ನೇ ಸಾಲಿನಲ್ಲಿ ಧನಾದೇಶ ಸಂಖ್ಯೆ: 254360/14.03.2019 ರಲ್ಲಿ ರೂ.1,26,440/-ಗಳನ್ನು ಪಾವತಿಸಿದ್ದು, ಈ ಸಂಬಂಧ ಯಾವುದೇ ಆದೇಶ ಪ್ರತಿಗಳನ್ನು, ಸಂಬಂಧಿಸಿದ ವೋಚರ್‌ಗಳನ್ನುಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ.<br>2) ಧನಾದೇಶ ಸಂಖ್ಯೆ: 106342/ 19.07.2019 ರಲ್ಲಿ ರೂ.15,000/-ಗಳನ್ನು ಪಾವತಿಸಿದ್ದು, ಸೂಕ್ತವಾದ ಆದೇಶ ಪ್ರತಿಗಳನ್ನು, ಸಂಬಂಧಿಸಿದ ವೋಚರ್‌ಗಳನ್ನುಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ.<br>3) Squad Membersಗಳಿಗೆ ಕೇವಲ ಡಿ.ಎ ಪಾವತಿಗೆ ಮಾತ್ರ ಅವಕಾಶವಿದ್ದು, ಪ್ರಯಾಣ ಭತ್ಯೆ ಪಾವತಿಗೆ ಅವಕಾಶವಿರುವುದಿಲ್ಲ. ಪ್ರಯಾಣ ಭತ್ಯೆ ಪಾವತಿಗೆ ಸಂಬಂದಿಸಿದ ವಿವರಗಳು ಈ ಕೆಳಕಂಡಂತಿದೆ.<br><br>ಕ್ರ.ಸಂ. / ಧನಾದೇಶ ಸಂಖ್ಯೆ/ದಿನಾಂಕ / ಪಾವತಿ ಮೊತ್ತ:<br>1 / 254509/06.06.2019 / 10635/-<br>2 / 1257451/13.12.2019 / 3050/-<br>3 / 945883/28.08.2019 / 5190/-<br>4 / 254478/27.05.2019 / 5150/-<br>ಒಟ್ಟು / 24,025/- | 22.4)<br><br>1. ಧನಾದೇಶದ ಸಂಖ್ಯೆ:254360/14.03.2019 ರಲ್ಲಿ ರೂ.1,26,440/-ಗಳನ್ನು ಪಾವತಿಸಲಾಗಿದೆ. ಸದರಿ ಧನಾದೇಶದ ಜೆರಾಕ್ಸ್ ಪ್ರತಿ ಲಗತ್ತಿಸಿದೆ.<br><br>ಕುಲಸಚಿವರು (ಮೌಲ್ಯಮಾಪನ) ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರದಿಂದ ಪ್ರತಿಯೊಬ್ಬ Professor ಗಳಿಗೆ Fly-in-Squad ಗಳಾಗಿ ನೇಮಿಸಲಾಗಿದೆ. ಸದರಿ ಆದೇಶದ ಪ್ರತಿಗಳನ್ನು ಹಾಗು ಸದರಿ ಕಾರ್ಯ ನಿರ್ವಹಿಸಿದಕ್ಕೆ ಹಾಜರಾತಿಯ ಪ್ರತಿಯನ್ನು ಸಹ ಲಗತ್ತಿಸಿದೆ.<br><br>34 Professor ಗಳು ಈ ಕಾರ್ಯನಿರ್ವಹಿಸಿದ್ದಕ್ಕಾಗಿ ಪ್ರತ್ಯೇಕವಾಗಿ 34 ವೋಚರ್‌ಗಳಲ್ಲಿ ಪಾವತಿಸಲಾಗಿದೆ. ಕ್ರಮ ಸಂಖ್ಯೆ 1 ರಿಂದ 34 ರವರೆಗಿನ ವೋಚರ್‌ಗಳನ್ನು ಹಾಗು ಇದಕ್ಕೆ ಸಂಬಂಧಿಸಿದ ತಃಖ್ತೆಯನ್ನು ಇದರೊಂದಿಗೆ ಲಗತ್ತಿಸಿ, ತಮ್ಮ ಮಾಹಿತಿಗಾಗಿ ಸಲ್ಲಿಸಿದೆ.<br><br>2. ಧನಾದೇಶ ಸಂಖ್ಯೆ:106342/19.07.2019 ರಲ್ಲಿ ರೂ.15,000/-ಗಳನ್ನು ಪಾವತಿಸಿದ್ದು, ಇದಕ್ಕೆ ಸಂಬಂಧಪಟ್ಟ ಆದೇಶ ಪತ್ರದ ಸಂಖ್ಯೆ UO.No.BNU:PAY:VEH:BED.SQUAD/139 Kolar dated:24.04.2019 ಇದರೊಂದಿಗೆ ಲಗತ್ತಿಸಿದೆ.<br><br>3. Fly-in-Squad Members ಗಳಿಗೆ ವಾಹನದ ಸೌಕರ್ಯ ಒದಗಿಸಿದ್ದು, ಇವರುಗಳಿಗೆ ಕೇವಲ ಡಿ.ಎ.ಗೆ ಮಾತ್ರ ಅವಕಾಶವಿರುತ್ತದೆ. ಆದರೆ Sitting Squad ಗೆ ವಾಹನದ ಸೌಕರ್ಯ ಒದಗಿಸಿಲ್ಲ ಆದ್ದರಿಂದ ಅವರುಗಳು ತಮ್ಮ ವಾಸಸ್ಥಳದಿಂದ ಪರೀಕ್ಷೆ ನಡೆಯುವ ಸ್ಥಳಕ್ಕೆ ಹೋಗಿ ಬರಲು ಪ್ರಯಾಣ ಮಾಡಿದ್ದಕ್ಕೆ ಕೆ.ಸಿ.ಎಸ್ ನಿಯಮ 490 (C) ರ ಪ್ರಕಾರ ಅವಕಾಶವಿರುತ್ತದೆ. ಅದರಂತೆ ಒಟ್ಟು ರೂ.24,025/-ಗಳನ್ನು 4 ಧನಾದೇಶಗಳಲ್ಲಿ ಪಾವತಿಸಲಾಗಿದೆ.<br><br>ಆದುದರಿಂದ ಈಗಾಗಲೇ ಟಿ.ಎ.ಗಾಗಿ ಪಾವತಿಸಿರುವ ಮೊತ್ತ ವಸೂಲಿ ಮಾಡುವ ಪ್ರಮೇಯ ಉದ್ಭವಿಸುದಿಲ್ಲಾ. |

| | |
|---|---|
| ಈ ಸಂಬಂಧ ಲೆಕ್ಕಪರಿಶೋಧನಾ ವಿಚಾರಣಾ ಸಂಖ್ಯೆ: 66/2020-21, ದಿನಾಂಕ:22.07.2021 ರಲ್ಲಿ ವಿವರ ಕೋರಿದ್ದರೂ, ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ. ಆದ್ದರಿಂದ ಸೂಕ್ತ ಆದೇಶ ಪ್ರತಿ ಒದಗಿಸದ ಮೊತ್ತ ರೂ.1,41,440/-ಗಳನ್ನು (126440+15000)ಆಕ್ಷೇಪಣೆಯಲ್ಲಿಡಲಾಗಿದೆ ಮತ್ತು ಟಿ.ಎ. ಮೊತ್ತ ರೂ.24,025/-ಗಳನ್ನು ವಸೂಲಾತಿಯಲ್ಲಿಡಲಾಗಿದೆ. | ಮೇಲ್ಕಂಡ ಎಲ್ಲಾ ಅಂಶಗಳನ್ನು, ಹಾಗು ಸಂಬಂಧಪಟ್ಟ ದಾಖಲಾತಿಗಳೊಂದಿಗೆ ತಮ್ಮ ಅವಗಾಹನೆಗೆ ಸಲ್ಲಿಸಿದೆ.<br><br>ದಯವಿಟ್ಟು ಆಕ್ಷೇಪಣೆಯಲ್ಲಿಟ್ಟಿರುವ ಒಟ್ಟು ಮೊತ್ತ ರೂ.1,41,440/- (1,26,440+15,000) ಗಳನ್ನು ಹಾಗು ವಸೂಲಾತಿಗೆ ಸೂಚಿಸಿರುವ ಮೊತ್ತ ರೂ.24,025/-ಗಳನ್ನು ಆಡಿಟ್ ವರದಿಯಿಂದ ಕೈ ಬಿಡುವಂತೆ ತಮ್ಮಲ್ಲಿ ಕೋರಿದೆ. |
| **22.5 ಪರೀಕ್ಷಾ ಮತ್ತು ಸಂಯೋಜನಾ ಕಾರ್ಯಕ್ಕೆ ಸಂಬಂಧಿಸಿದ ಟ್ರಾವೆಲ್ಸ್ ಬಿಲ್ಲುಗಳಲ್ಲಿನ ನ್ಯೂನತೆಗಳು**<br><br>2018-19 ಮತ್ತು 2019-20ನೇ ಸಾಲಿನ ಟ್ರಾವೆಲ್ಸ್ ಬಿಲ್ಲುಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ನ್ಯೂನತೆಗಳು ಕಂಡುಬಂದಿದ್ದು, ಈ ಸಂಬಂಧ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:65/2020-21, ದಿನಾಂಕ:22.07.2021ರಲ್ಲಿ ವಿವರ ಕೋರಲಾಗಿ ಸಮರ್ಪಕವಾದ ವಿವರಣೆಗಳಿರುವುದಿಲ್ಲ. ಆದುದರಿಂದ ಟ್ರಾವೆಲ್ಸ್ ಬಿಲ್ಲುಗಳನ್ನು ಪಾವತಿಸಿರುವ ಒಟ್ಟು ಮೊತ್ತ ರೂ.15,07,642/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ ಮತ್ತು ಆದಾಯ ತೆರಿಗೆ ಮೊತ್ತ ರೂ.30,152/- ಗಳನ್ನು ವಸೂಲಾತಿಯಲ್ಲಿಡಲಾಗಿದೆ.<br><br>1) ಕೆಲವೊಂದು ಟ್ರಾವೆಲ್ಸ್ ಬಿಲ್ಲುಗಳಲ್ಲಿ ಟ್ರಿಪ್ ಶೀಟ್ ಇರುವುದಿಲ್ಲ.<br>2) ಪಾವತಿಗೆ ಸಂಬಂಧಿಸಿದಂತೆ, ಯಾವುದೇ ದರಪಟ್ಟಿ ಟೆಂಡರ್ ಪ್ರಕ್ರಿಯೆ ಕೈಗೊಂಡಿರುವುದಿಲ್ಲ.<br>3) ಸದರಿ ಪಾವತಿಗೆ ಆದಾಯ ತೆರಿಗೆ ಕಾಯ್ದೆ 1961 ನಿಯಮ 1945ರ ಪ್ರಕಾರ ಶೇ.2 ರಷ್ಟು ಆದಾಯ ತೆರಿಗೆ ಕಟಾಯಿಸಿರುವುದಿಲ್ಲ. ವಿವರಗಳನ್ನು ಅನುಬಂಧ 28 ರಲ್ಲಿ ಲಗತ್ತಿಸಿದೆ.<br>ವಿವರಗಳನ್ನು **ಅನುಬಂಧ- 28** ರಲ್ಲಿ ಲಗತ್ತಿಸಿದೆ. | 22.5) |

| | |
|---|---|
| **23. ಸಾದಿಲ್ವಾರು ವೆಚ್ಚಗಳು**<br>**23.1. ಸ್ವಂತಕ್ಕೆ (Self Cheque) ನಗದು ಮೊತ್ತ ಸೆಳೆದಿರುವುದು** | |
| 2018-19, 2019-20ನೇ ಸಾಲಿನ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಲೆಕ್ಕಪರಿಶೋಧನೆಯಲ್ಲಿ ಬ್ಯಾಂಕ್ ಖಾತೆ ಸಂಖ್ಯೆ.5076101004383 ಮತ್ತು 64207962559 ಗಳನ್ನು ಪರಿಶೀಲಿಸಲಾಗಿ, ವಿವಿಧ ದಿನಾಂಕಗಳಲ್ಲಿ ಸ್ವಂತಕ್ಕೆ (Self Cheque) ಮೊತ್ತ ರೂ.3,96,324/- ಗಳನ್ನು ಸ್ವಂತಕ್ಕೆ ಸೆಳೆದಿರುವುದು ಕಂಡು ಬಂದಿರುತ್ತದೆ. ಮುಂದುವರೆದು, ವಿಶ್ವವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರ ಹೆಸರಿನಲ್ಲಿ ಚೆಕ್ ನೀಡಿರುವುದು ಕಂಡು ಬಂದಿರುತ್ತದೆ.<br><br>ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇಧ 72(ಎ) ಅನ್ವಯ ಒಂದು ಸಾವಿರ ರೂಪಾಯಿಗಳ ಮೇಲ್ಪಟ್ಟ ಪಾವತಿಗಳಿಗೆ ಚೆಕ್ ಮೂಲಕವೇ (ಕ್ರಾಸಡ್ ಚೆಕ್) ಪಾವತಿಸಬೇಕಾಗಿದ್ದು, ಈ ಸಂಬಂಧ ಲೆಕ್ಕಪರಿಶೋಧನೆಗೆ ವಿವರಣೆಯನ್ನು ನೀಡಲು ವಿಚಾರಣಾ ಪತ್ರ ಸಂಖ್ಯೆ, 45,ದಿನಾಂಕ:28.06.2021ರಲ್ಲಿ ಕೋರಲಾಗಿದ್ದು, ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ.<br><br>ನಗದು ವ್ಯವಹಾರಗಳನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಿ ಚೆಕ್ ಮೂಲಕ ವ್ಯವಹರಿಸಲು ಸೂಚಿಸಿದ್ದು, ಸದರಿ ಮೊತ್ತ ರೂ.3,96,324/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳನ್ನು **ಅನುಬಂಧ-29** ದಲ್ಲಿ ಕಾಣಿಸಲಾಗಿದೆ. | 23.1) ಬೆಂಗಳೂರು ಉತ್ತರ ವಿಶ್ವವಿದ್ಯಾಲಯವು 2018-19 ಮತ್ತು 2019-20 ನೇ ಸಾಲಿನಲ್ಲಿ ವಿಶ್ವವಿದ್ಯಾಲಯದಲ್ಲಿ ಆಚರಿಸಿರುವ ರಾಷ್ಟ್ರೀಯ, ನಾಡಹಬ್ಬಗಳು ಹಾಗು ಮಹಾತ್ಮರ ಜಯಂತಿ ಕಾರ್ಯಕ್ರಮಗಳಿಗೆ ಹಾಗು ಸಾಂದರ್ಭಿಕವಾಗಿ ಪರೀಕ್ಷಾ ಸಾಮಗ್ರಿ ಸಾಗಾಣಿಕ ವೆಚ್ಚ ಇಂತಹ ವೆಚ್ಚಗಳನ್ನು ಭರಿಸಲು Self Cheque ಮೂಲಕ ಸೆಳೆದು ವೆಚ್ಚ ಮಾಡಿರುವುದು ಸರಿಯಷ್ಟೆ.<br><br>ಸದರಿ ಆಡಿಟ್‌ನಲ್ಲಿನ ಸೂಚನೆಯಂತೆ ಪ್ರಸ್ತುತ Self Cheque ಮೂಲಕ ಸೆಳೆಯುವುದನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಿದೆ ಹಾಗು ಇಂತಹ ವೆಚ್ಚಗಳನ್ನು ಭರಿಸಬೇಕಾದ ಸಂಧರ್ಭಗಳಿಗಾಗಿ ಪರೀಕ್ಷಾ ವಿಭಾಗ, ವಿದ್ಯಾರ್ಥಿನಿಲಯ ವಿಭಾಗ, ಸಾಂಸ್ಕೃತಿಕ ವಿಭಾಗ ಹಾಗು ಕ್ರೀಡಾ ವಿಭಾಗಕ್ಕೆಂದು ಪ್ರತ್ಯೇಕವಾಗಿ ಬ್ಯಾಂಕ್ ಖಾತೆ ತೆರೆದಿದ್ದು, ವೆಚ್ಚ ಭರಿಸಬೇಕಾದ ಸಂಧರ್ಭದಲ್ಲಿ ಸದರಿ ಖಾತೆಗಳಿಗೆ ಹಣ ಬಿಡುಗಡೆ ಮಾಡಲಾಗುತ್ತದೆ. ಹಾಗಾಗಿ ಸದರಿ ಆಕ್ಷೇಪಣೆ ಮೊತ್ತ ರೂ.3,96,324/-ಗಳನ್ನು ಆಡಿಟ್ ವರದಿಯಿಂದ ಕೈಬಿಡಲು ಕೋರಿದೆ. |
| **23.2. ಕೈ ನಗದು ಮುಂಗಡಗಳಿಗೆ ಸಮರ್ಪಕವಾದ ವಿವರಣೆ ಇಲ್ಲದಿರುವುದು** | |
| 2016-17ನೇ ಸಾಲಿನಿಂದ 2019-20ನೇ ಸಾಲಿನವರೆಗಿನ ವಿಶ್ವವಿದ್ಯಾಲಯದ ಸ್ವೀಕೃತಿ ಮತ್ತು ಪಾವತಿ ತಃಖ್ತೆಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ಮೊತ್ತವು (Cash in hand) ಕೈ ನಗದು ಲೆಕ್ಕ ಶೀರ್ಷಿಕೆಯಲ್ಲಿ ಕಂಡುಬಂದಿರುತ್ತದೆ.ಸಾದಿಲ್ವಾರು ಕೈಪಿಡಿ 1958 ನಿಯಮ 36(1) ರಂತೆ ಆಯಾ ಬಿಲ್ಲುಗಳನ್ನು ಒಂದು ತಿಂಗಳೊಳಗಾಗಿ ಸಕಾಲದಲ್ಲಿ ತೀರುವಳಿ ಮಾಡಬೇಕಾಗುತ್ತದೆ, ಇಲ್ಲದಿದ್ದಲ್ಲಿ ಕರ್ನಾಟಕ ಆರ್ಥಿಕ ಸಂಹಿತೆ 1958ರ ನಿಯಮ 4(ಎ) ರಂತೆ | 23.2) |

| | |
|---|---|
| ಹಣದ ತಾತ್ಕಾಲಿಕ ದುರಪಯೋಗವಾದಂತಾಗುತ್ತದೆ. ಮುಂದುವರೆದು, ಸಾದಿಲ್ವಾರು ವೆಚ್ಚಕ್ಕಾಗಿ ಡ್ರಾ ಮಾಡಿದ ಮೊದಲಿನ ಮುಂಗಡವನ್ನು ಖರ್ಚು ಮಾಡಿದ ನಂತರವಷ್ಟೆ ಮುಂದಿನ ವೆಚ್ಚಕ್ಕಾಗಿ ಮೊತ್ತವನ್ನು ಸೆಳೆಯಬೇಕಾಗಿರುತ್ತದೆ<br><br>ಆದರೆ, ವಿಶ್ವವಿದ್ಯಾಲಯದ ಸ್ವೀಕೃತಿ ಮತ್ತು ಪಾವತಿ ತಃಖ್ತೆಗಳನ್ನು ಪರಿಶೀಲಿಸಿದಾಗ ಮುಂಗಡಕ್ಕೆ ಸಂಬಂಧಿಸಿದಂತೆ ವೋಚರ್‌ಗಳನ್ನು ಹಾಜರುಪಡಿಸದಿರುವುದು ಕಂಡುಬಂದಿರುತ್ತದೆ. ವಿವರಣೆ ಈ ಕೆಳಕಂಡಂತಿದೆ.<br><br>ಕ್ರ.ಸಂ. / ವರ್ಷ / ಕೈನಗದು:<br>1 / 2016–17 / –<br>2 / 2017–18 / 85,750.00<br>3 / 2018–19 / 1,69,007.00<br>4 / 2019–20 / 1,72,146.00<br><br>2019–20ನೇ ಆರ್ಥಿಕ ವರ್ಷದಲ್ಲಿ ತೀರುವಳಿ ಮಾಡದೇ ಉಳಿಸಿಕೊಂಡಿರುವ ರೂ.1,72,146/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.<br><br>**23.3. ಡಿಸಿ ಬಿಲ್ಲುಗಳಿಗೆ ಸಂಬಂಧಿಸಿದ ನ್ಯೂನತೆಗಳು**<br><br>2017–18 ರಿಂದ 2019–20ನೇ ಸಾಲಿನ ವಿಶ್ವವಿದ್ಯಾಲಯದ ಡಿಸಿ ಬಿಲ್ಲುಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ನ್ಯೂನತೆಗಳು ಕಂಡುಬಂದಿರುತ್ತದೆ.<br><br>1) ಬಿಲ್ಲುಗಳಿಗೆ ದರಪಟ್ಟಿ ಇರುವುದಿಲ್ಲ. Manual of Contingenciesರ ಪ್ರಕಾರ ರೂ.5,000/– ಗಳನ್ನು ಮೀರಿದ ಖರೀದಿಗೆ ದರಪಟ್ಟಿ ಆಹ್ವಾನಿಸಿ ಖರೀದಿ ಪ್ರಕ್ರಿಯೆ ಕೈಗೊಳ್ಳಬೇಕಾಗಿರುತ್ತದೆ.<br>2) ದರಪಟ್ಟಿಗಳಲ್ಲಿ ಜಿ.ಎಸ್.ಟಿ. ಸಂಖ್ಯೆ/ಟಿನ್ ಸಂಖ್ಯೆ/ದಿನಾಂಕ ಇರುವುದಿಲ್ಲ.<br>3) ತುಲನಾತ್ಮಕ ಪಟ್ಟಿಗೆ ಸಂಬಂಧಪಟ್ಟ ಅಧಿಕಾರಿಗಳಿಂದ ದೃಢೀಕರಣವಿರುವುದಿಲ್ಲ. | 23.3) |

| | |
|---|---|
| 4) ಆದಾಯ ತೆರಿಗೆ ಕಾಯ್ದೆ 1964 ಸೆಕ್ಷನ್ (194 ಸಿ) ರ ಪ್ರಕಾರ ಶೇ.2 ರಷ್ಟು ಆದಾಯ ತೆರಿಗೆ ಕಟಾಯಿಸಿರುವುದಿಲ್ಲ.<br>5) ಕೆಲವೊಂದು ಬಿಲ್ಲುಗಳು, ದರಪಟ್ಟಿಗಳು ಕೈಬರಹದಲ್ಲಿರುತ್ತದೆ.<br><br>ಈ ಸಂಬಂಧ ಆಡಿಟ್ ವಿವರಣಾ ಪತ್ರ ಸಂಖ್ಯೆ:13/20-21, 13a/20-21,14a/20-21, ದಿನಾಂಕ:21.03.2021/22.03.2021/26.03.2021 ರಲ್ಲಿ ವಿವರ ಕೋರಿದ್ದರೂ, ಸಮಂಜಸವಾದ ವಿವರಣೆಗಳಿರುವುದಿಲ್ಲ. ಆದುದರಿಂದ, ರೂ.8,74,835/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ ಮತ್ತು ರೂ.3,811/-ಗಳನ್ನು ವಸೂಲಾತಿಯಲ್ಲಿಡಲಾಗಿದೆ. ವಿವರಗಳನ್ನು **ಅನುಬಂಧ– 30** ರಲ್ಲಿ ಲಗತ್ತಿಸಿದೆ.<br><br>**23.4 .ಮಂಜೂರಾತಿ ಪಡೆಯದೇ ವೆಚ್ಚ ಭರಿಸಿರುವುದು**<br><br>2018–19 ಮತ್ತು 2019–20ನೇ ಸಾಲಿನ ವೋಚರ್‌ಗಳನ್ನು ಪರಿಶೀಲಿಸಿದಾಗ, ವೋಚರ್‌ಗಳಿಗೆ ಮಂಜೂರಾತಿ ಆದೇಶವಿಲ್ಲದೇ ಪಾವತಿ ಮಾಡಿರುವುದು ಕಂಡುಬಂದಿರುತ್ತದೆ ಮತ್ತು ಸದರಿ ವೋಚರ್‌ಗಳಲ್ಲಿ ಕೆಲವೊಂದು ನ್ಯೂನತೆಗಳು ಕಂಡುಬಂದಿದ್ದು, ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:45/28.06.2021ದಿನಾಂಕ:28.06.2021ರಲ್ಲಿ ವಿವರ ಕೋರಿದ್ದರೂ, ಸಮರ್ಪಕವಾದ ವಿವರಣೆಗಳಿರುವುದಿಲ್ಲ. ಪಾವತಿಗಳ ವಿವರ ಈ ಕೆಳಕಂಡಂತಿದೆ:– | 23.4) |

| ಕ್ರಂ. ಸಂ | ಧನಾದೇಶ ಸಂಖ್ಯೆ/ದಿನಾಂಕ | ಮೊತ್ತ (ರೂ.ಗಳಲ್ಲಿ) | ನ್ಯೂನತೆಗಳು |
|---|---|---|---|
| 1. | 641241/ 04.09.2019 | 2,08,876/- | ಸದರಿ ಪಾವತಿಗೆ ರೂ.46,000/–ಕ್ಕೆ ಬಿಲ್ಲು ಮತ್ತು ರೂ.36,000/– ಕ್ಕೆ ದರಪಟ್ಟಿ ಇರುವುದಿಲ್ಲ. |
| 2. | 253219/ 23.11.2018 | 70,000/– | ಕಬ್ಬಡಿ ಪಂದ್ಯಾವಳಿಯು ದಿನಾಂಕ:04.10.2017 ರಂದು ಆಯೋಜಿಸಿದ್ದು, ಬಿಲ್ಲಿನ ದಿನಾಂಕ:03.11.2018 ಕ್ಕೆ ಆಗಿದೆ,. |
| 3. | 253830/ 14.12.2018 | 25,000/– | ಸದರಿ ಪಾವತಿಗಳಿಗೆ ಸೂಕ್ತ ಆದೇಶಗಳಿರುವುದಿಲ್ಲ. |

| | | | |
|---|---|---|---|
| 4. | 253834/ 18.12.2018 | 60,826/- | |
| 5. | 253863/ 18.12.2018 | 8,000/- | |
| 6. | 623214/ 26.10.2018 | 1,00,000/- | ಸದರಿ ಮೊತ್ತವನ್ನು ಕ್ರೀಡಾ ಉದ್ದೇಶಕ್ಕೆ ಬಳಸಿದ್ದು, ಸೂಕ್ತ ದರಪಟ್ಟಿಗಳು, ಟ್ರಿಪ್ ಶೀಟ್ ಮತು ಆದೇಶಗಳಿರುವುದಿಲ್ಲ. |
| 7. | 253211/ 11.09.2018 | 1,50,000/- | |
| 8. | 2018-19/ 623220 | 1,50,000/- | |
| 9. | 254834/ 04.05.2019 | 64,350/- | ಕ್ರೀಡಾ ಉದ್ದೇಶಕ್ಕೆ ಖರ್ಚು ಮಾಡಿದ್ದು, ಸೂಕ್ತ ದರಪಟ್ಟಿ ಇರುವುದಿಲ್ಲ. ಕಛೇರಿ ಆದೇಶ ದಿನಾಂಕ:27.03.2019 ರಂದು ನೀಡಿದ್ದು, ಕ್ರೀಡಾ ಕೂಟ ದಿನಾಂಕ:03.12.2018 ರಂದು ಆಯೋಜಿಸಲಾಗಿತ್ತು. |
| 10. | 046307/ 30.12.2019 | 76,120/- | ಮೊತ್ತ ಖರ್ಚು ಮಾಡಿದ ನಂತರ ಕಛೇರಿ ಆದೇಶ ನೀಡಲಾಗಿದೆ. |
| 11. | 254364/ 28.03.2019 | 25,000/- | ಕಛೇರಿ ಆದೇಶ ಇರುವುದಿಲ್ಲ, ಹಣಕಾಸು ನಿಯಂತ್ರಣಾಧಿಕಾರಿಗಳ ಆದೇಶ ಸಂಖ್ಯೆ ಇರುವುದಿಲ್ಲ. |
| 12. | 253876/ 23.01.2019 | 5,000/- | |
| 13. | 945413/ 18.09.2019 | 18,000/- | ಕಛೇರಿ ಆದೇಶವಿರುವುದಿಲ್ಲ, ವಿಶ್ವವಿದ್ಯಾಲಯದ ನೌಕರರ ವೈಯಕ್ತಿಕ ಹೆಸರಿನಲ್ಲಿ ಚೆಕ್ ನೀಡಲಾಗಿದೆ. |
| 14. | 106327/ 16.07.2019 | 61,450/- | ಲೇಖನ ಸಾಮಾಗ್ರಿ ದಾಸ್ತಾನು ತೆಗೆದುಕೊಂಡ ವಿವರವಾಗಲೀ, ಕಛೇರಿ ಆದೇಶವಾಗಲೀ ಇರುವುದಿಲ್ಲ. |
| ಒಟ್ಟು | | **10,22,622 /-** | |

ಆದುದರಿಂದ ರೂ.10,22,622/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

| | |
|---|---|
| **23.5. ಡಿ.ಸಿ ಬಿಲ್ಲಿನ ಮತ್ತು Imprest ಬಿಲ್ಲುಗಳಿಗೆ ವಿವರಣೆ ಇಲ್ಲದಿರುವುದು**<br><br>2018–19 ಮತ್ತು 2019–20ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ಡಿ.ಸಿ ಬಿಲ್ಲುಗಳನ್ನು, Imprest ಬಿಲ್ಲುಗಳನ್ನು ಪರಿಶೀಲಿಸಿದಾಗ, ಮೊತ್ತವಾಗಿ ನಿರ್ದಿಷ್ಟ ಮೊತ್ತದ ಹಣವನ್ನು ಸೆಳೆಯಲಾಗುತ್ತಿದ್ದು, ಸದರಿ ಪಾವತಿ ವೋಚರ್‌ಗಳಲ್ಲಿ ಈ ಕೆಳಕಂಡ ನ್ಯೂನತೆಗಳನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.<br><br>➢ ಪಾವತಿ ಬಿಲ್ಲುಗಳಲ್ಲಿ ಬಹುತೇಕ ಕೈಬರಹದಲ್ಲಿದೆ.<br>➢ ಬಿಲ್ಲುಗಳ ಹಿಂಭಾಗದಲ್ಲಿ ದೃಢೀಕರಣವಿರುವುದಿಲ್ಲ.<br>➢ ನಿರ್ದಿಷ್ಟ ಮೊತ್ತದ ಸಾದಿಲ್ವಾರು ವೆಚ್ಚವನ್ನು ಸೆಳೆಯಲು ಕಛೇರಿ ಆದೇಶವಿರುವುದಿಲ್ಲ.<br>➢ ಒಂದು ನಿರ್ದಿಷ್ಟ ಮೊತ್ತದ ಸಾದಿಲ್ವಾರು ವೆಚ್ಚ ಮುಗಿದ ನಂತರವಷ್ಟೆ ಮುಂದಿನ ವೆಚ್ಚಕ್ಕಾಗಿ ಮೊತ್ತವನ್ನು ಸೆಳೆಯಬೇಕಾಗಿದ್ದು, ಈ ನಿಯಮದ ಉಲ್ಲಂಘನೆಯಾಗಿರುತ್ತದೆ.<br>➢ ಕೆಲವೊಂದು ಪಾವತಿ ವೋಚರ್‌ಗಳನ್ನು ನೌಕರರ ಹೆಸರಲ್ಲಿ ನೀಡಲಾಗಿದೆ.<br><br>ಈ ಸಂಬಂಧ ಲೆಕ್ಕತಪಾಸಣಾ ಸಂಖ್ಯೆ: 14a/20–21,23,20–21,45/20–21,50/20–21, ದಿನಾಂಕ:22.03.2021/29.03.2021/28.06.2021/01.07.2021ರಲ್ಲಿ ವಿವರ ಕೋರಿದ್ದರೂ ಸ್ಪಷ್ಟನೆ ಇರುವುದಿಲ್ಲ. ಆದುದರಿಂದ ರೂ.21,00,014/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.ವಿವರಗಳನ್ನು **ಅನುಬಂಧ–31**ರಲ್ಲಿ ನೀಡಲಾಗಿದೆ | 23.5) |

## 24. ಪರೀಕ್ಷಕರ ಸಂಭಾವನೆ ಪಾವತಿಗಳು

### 24.1. .ಪರಿನಿಯಮವಿಲ್ಲದೆ ಮೌಲ್ಯಮಾಪನ ಕಾರ್ಯಗಳಿಗೆ ಹಾಗೂ ಪ್ರಯೋಗಾಲಯ ಪರೀಕ್ಷಾ ಕಾರ್ಯಕ್ಕಾಗಿ ಸಂಭಾವನೆ ಪಾವತಿಸಿರುವುದು

ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ, 2018-19 ಮತ್ತು 2019-20 ನೇ ಸಾಲಿನ ಪ್ರಯೋಗಾಲಯ ಪರೀಕ್ಷೆ ಹಾಗೂ ಮೌಲ್ಯಮಾಪನ ಕಾರ್ಯಗಳಿಗೆ ಅಧ್ಯಾಪಕರುಗಳಿಗೆ ಸಂಭಾವನೆಯಾಗಿ ರೂ.1,10,94,922/-ನೀಡಿರುವುದು ಕಡತ ಪರಿಶೀಲನೆಯಲ್ಲಿ ಕಂಡುಬಂದಿರುತ್ತದೆ.

ಕರ್ನಾಟಕ ಶಿಕ್ಷಣ ಕಾಯ್ದೆ 1983 ರ ಸೆಕ್ಷನ್ 28 ರ ಅನ್ವಯ ಪರೀಕ್ಷಾ ಕಾರ್ಯವು ಅಧ್ಯಾಪಕರುಗಳ ಶೈಕ್ಷಣಿಕ ಕಾರ್ಯದ ಒಂದು ಭಾಗವಾಗಿದ್ದು, ಸಂಭಾವನೆ ಪಡೆಯಲು ಅವಕಾಶವಿರುವುದಿಲ್ಲ ಆದರೆ ಪರೀಕ್ಷಾ ಕಾರ್ಯದ ಸಲುವಾಗಿ ಬೇರೆ ಸ್ಥಳಕ್ಕೆ ನಿಯೋಜನೆಗೊಂಡ ಪ್ರಾಧ್ಯಾಪಕರುಗಳಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳ ಅನ್ವಯ ಪ್ರಯಾಣಭತ್ಯೆ, ದಿನಭತ್ಯೆ ಪಾವತಿಸಲು ಅವಕಾಶವಿರುತ್ತದೆ. ಪ್ರಯಾಣ ಭತ್ಯೆ ದಿನಭತ್ಯೆ ಪಾವತಿ ಮೊತ್ತ ಬೇರ್ಪಡಿಸಿ ಲೆಕ್ಕಪರಿಶೋಧನೆಗೆ ಒದಗಿಸಲು ಹಾಗೂ ಈ ಸಂಭಾವನೆಗಳಿಗೆ ಸಂಬಂಧಿಸಿದಂತೆ ಕರ್ನಾಟಕ ವಿಶ್ವವಿದ್ಯಾಲಯಗಳ ಕಾಯ್ದೆ-2000ರ ಪ್ರಕರಣ 46(3)ರ ಅನ್ವಯ ಪರಿನಿಯಮಗಳನ್ನು ರಚಿಸಿಕೊಂಡಿದ್ದಲ್ಲಿ, ಸದರಿ ಪಾವತಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯ ರಚಿಸಿಕೊಂಡಿರುವ ಪರಿನಿಯಮ ಹಾಗೂ ಸರ್ಕಾರಿ ಆದೇಶವನ್ನು ಲೆಕ್ಕಪರಿಶೋಧನೆಗೆ ವಿಚಾರಣಾ ಪತ್ರ ಸಂಖ್ಯೆ:, 49/20-21,50/20-21,51/20-21,ದಿನಾಂಕ:01.07.2021ರಲ್ಲಿವಿವರ ಕೋರಿದ್ದರೂ, ಸಮರ್ಪಕವಾದ ವಿವರಣೆ ದೊರೆತಿರುವುದಿಲ್ಲ. ಆದ್ದರಿಂದ ಸಂಭಾವನೆ ಪಾವತಿಗೆ ಪರಿನಿಯಮ ರಚಿಸುವವರೆಗೆ ಸಂಭಾವನೆ ಪಾವತಿಸಿರುವ ಮೊತ್ತ ರೂ.1,10,94,922/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.ವಿವರಗಳನ್ನು **ಅನುಬಂಧ-32**ರಲ್ಲಿ ಲಗತ್ತಿಸಿದೆ.

24.1) ಮಹಾಲೇಖಪಾಲರ ಆಡಿಟ್ ವರದಿಯಲ್ಲಿ ಮೌಲ್ಯಮಾಪನ ಹಾಗೂ ಪ್ರಯೋಗಾಲಯ ಪರೀಕ್ಷಾ ಕಾರ್ಯಕ್ಕಾಗಿ ಆಧ್ಯಾಪಕರುಗಳಿಗೆ ಸಂಭಾವನೆ ರೂ.29,00,785/- ಗಳನ್ನು ಈ ಕೆಳಕಂಡಂತೆ ನೀಡಲಾಗಿದೆ ಎಂದು ಹಾಗೂ ಸರ್ಕಾರಿ ಆದೇಶದನ್ವಯ G.O.No.ED.100 UNE 2000/08-08-2000 ಇವರುಗಳು ಸಂಭಾವನೆಗೆ ಅರ್ಹರಲ್ಲವೆಂದು ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ.

| ಕ್ರ.ಸಂ | ವರ್ಷ | ಮೊತ್ತ |
|---|---|---|
| 1 | 2018-19 | ರೂ.4,80,010/- |
| 2 | 2019-20 | ರೂ.9,91,205/- |
| 3 | 2020-21 | ರೂ.14,29,570/- |
| **ಒಟ್ಟು** | | **ರೂ.29,00,570/-** |

ಮಹಾಲೇಖಪಾಲರು ಆಡಿಟ್ ಸಿಬ್ಬಂದಿಯವರು ಈ ಕಛೇರಿಯಲ್ಲಿ ಲಭ್ಯವಿರುವ ಎಲ್ಲಾ ದಾಖಲಾತಿಗಳನ್ನು ಕೂಲಂಕುಶವಾಗಿ ಲೆಕ್ಕ ತಪಾಸಣೆ ಮಾಡಿ ಆಡಿಟ್ ವರದಿಯಲ್ಲಿ ಕಂಡಿಕೆ II/A/2017-18 Irregular payment of Remuneration to Professors/ Lecturers Rs.29,00 Lakhs ಎಂದು ಆಕ್ಷೇಪಣೆ ಮಾಡಿರುತ್ತಾರೆ. ಸದರಿ ಆಡಿಟ್ ಕಂಡಿಕೆಯ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ, ತಮ್ಮ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.

ನಿಮ್ಮ ಕಛೇರಿಯಿಂದ ಬಂದಿರುವ ಆಡಿಟ್ ವರದಿಯ ಕಂಡಿಕೆ 24.1 ನ್ನು ಪರಿಶೀಲಿಸಲಾಗಿ ಮೌಲ್ಯಮಾಪನ ಹಾಗೂ TA+DA ಗೆ ಒಟ್ಟು ರೂ.1,10,94,922/-ಗಳು ಪಾವತಿಸಿದ್ದು, ಇದನ್ನು ಆಕ್ಷೇಪಣೆಯಲ್ಲಿ ಇಡಲಾಗಿದೆ ಎಂದು ತಿಳಿಸಲಾಗಿದೆ.

ಮಹಾಲೇಖಪಾಲರ ಆಡಿಟ್ ವರದಿಗೂ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರಗಳ ಇಲಾಖೆಯ ಆಡಿಟ್ ವರದಿಗೂ ಅಜಗಜಾಂತರ ವ್ಯತ್ಯಾಸವಿರುವುದು ಕಂಡು ಬಂದಿದೆ. ಕರ್ನಾಟಕ ರಾಜ್ಯಲೆಕ್ಕ ಪರಿಶೋಧನಾ ಮತ್ತು ಲೆಕ್ಕಪತ್ರಗಳ ಇಲಾಖೆಯ ಆಡಿಟ್ ವರದಿಯಲ್ಲಿ ನೀಡಿರುವ ಕಂಡಿಕೆಯನ್ನು ಪರಶೀಲಿಸಲಾಗಿ ಚೆಕ್ಕುಗಳ ಆಧಾರದ ಮೇರೆಗೆ ಒಟ್ಟಾರೆ ಮೊತ್ತವನ್ನು ತೆಗೆದುಕೊಂಡಿರುತ್ತಾರೆ. ಸದರಿ ಮೊತ್ತದಲ್ಲಿ Remuneration, TA+DA ಹಾಗೂ ಇತರೆ ಮೊತ್ತಗಳು ಸಹ ಒಳಗೊಂಡಿರುತ್ತದೆ. ಆದ್ದರಿಂದ ಈ ಮೊತ್ತವು ತುಂಬಾ ಹೆಚ್ಚಾಗಿರುತ್ತದೆ.

ಈ ಕಾರಣದಿಂದ ಮಹಾಲೇಖಪಾಲರ ಆಡಿಟ್ ವರದಿಗೂ ಕರ್ನಾಟಕ ರಾಜ್ಯ ಲೆಕ್ಕಲೆಕ್ಕಪರಿಶೋಧನಾ ಇಲಾಖೆಯ ಆಡಿಟ್ ವರದಿಗೂ ತಾಳೆ ನೋಡಿದ್ದಲ್ಲಿ ವ್ಯತ್ಯಾಸವಾಗಿದೆ. ಮಹಾಲೇಖಪಾಲರು ನೀಡಿರುವ ಆಕ್ಷೇಪಣೆ ಮೊತ್ತ ಸರಿಯಾಗಿರುತ್ತದೆ. ಆದುದರಿಂದ ತಾವು ದಯಮಾಡಿ ನಿಮ್ಮ ಆಡಿಟ್ ವರದಿಯಲ್ಲಿ ಸೂಚಿಸಿರುವ ಆಕ್ಷೇಪಣೆ ಮೊತ್ತ ಮಿತಿಗೊಳಿಸಲು ತಮ್ಮಲ್ಲಿ ಕೋರಲಾಗಿದೆ.

**ಈ ಕೆಳಕಂಡ ಕಾರಣಗಳಿಂದ ಸಂಭಾವನೆ ನೀಡಲು ಅನಿವಾರ್ಯವಾಯಿತು.**

1. ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇಲ್ಲಿಂದ ಬೇರ್ಪಟ್ಟು ಹೊಸದಾಗಿ ಕೋಲಾರದಲ್ಲಿ ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಸ್ಥಾಪನೆಯಾಯಿತು. ಬೆಂಗಳೂರು ವಿಶ್ವವಿದ್ಯಾಲಯ ನಿರ್ವಹಿಸುತ್ತಿದ್ದ ಆಧಾರದ ಮೇರೆಗೆ ಇಲ್ಲಿಯು ಸಹ ಅಧ್ಯಾಪಕರುಗಳಿಗೆ ಸಂಭಾವನೆ ನೀಡಲಾಯಿತು.

2. ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರದಲ್ಲಿ ನುರಿತ ಹಾಗೂ ಖಾಯಂ ಅಧ್ಯಾಪಕ ವರ್ಗದವರು ಈ ಕಾರ್ಯನಿರ್ವಹಿಸಲು ಇರಲಿಲ್ಲ ಆದ ಕಾರಣ ಬೇರೆ ವಿಶ್ವವಿದ್ಯಾಲಯಗಳಿಂದ ಹಾಗೂ ಇತರೆ ರಾಜ್ಯಗಳ ವಿಶ್ವವಿದ್ಯಾಲಯಗಳಿಂದ ಅಧ್ಯಾಪಕರುಗಳಿಗೆ ಆಹ್ವಾನಿಸಿ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡಲಾಗಿದೆ.

3. ಈ ಕಾರ್ಯವನ್ನು ಉದಾಸೀನ ಮಾಡುವ ಹಾಗೂ ತಡಮಾಡುವ ಹಾಗಿಲ್ಲಾ. ಹಾಗೂ ಇದು ತುಂಬಾ ಅತ್ಯಾವಶ್ಯಕ ಕೆಲಸವಾಗಿದ್ದು, ಸಕಾಲಕ್ಕೆ Result ಘೋಷಣೆ ಮಾಡಬೇಕಾಗಿದ್ದರಿಂದ ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈ ಕಾರ್ಯವು ತುರ್ತಾಗಿ ಮಾಡಬೇಕಾದ ಸಂಧರ್ಭ ಒದಗಿ ಬಂತು.
4. ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಘನತೆ ಗೌವರವನ್ನು ಕಾಪಾಡಲು ಹಾಗೂ ವಿದ್ಯಾರ್ಥಿಗಳ ಭವಿಷ್ಯದಲ್ಲಿ ತೊಂದರೆ ಆಗಬಾರದೆಂಬ ಹಿತದೃಷ್ಟಿಯಿಂದ ಕ್ರಮವಹಿಸಲಾಗಿದೆ.
5. ಇತರೆ ವಿಶ್ವವಿದ್ಯಾಲಯಗಳಿಂದ ಈ ಕಾರ್ಯಕ್ಕೆ ಬಂದಂತಹ ಅಧ್ಯಾಪಕರುಗಳಿಗೆ ಸಂಭಾವನೆ ನೀಡದಿದ್ದಲ್ಲಿ ಅವರುಗಳು ಮೌಲ್ಯಮಾಪನ ಕೆಲಸಕ್ಕೆ ಹಾಜರಾಗುತ್ತಿರಲಿಲ್ಲ.

ಮೇಲ್ಕಂಡ ಎಲ್ಲಾ ಅಂಶಗಳನ್ನು ತಮ್ಮ ಅವಗಾಹನೆಗೆ ತರಲಾಗಿದೆ ಹಾಗೂ ಈಗಾಗಲೇ ಈ ಕಾರ್ಯ ಪೂರ್ಣವಾಗಿದ್ದು ಅಧ್ಯಾಪಕರುಗಳಿಗೆ ಸಂಭಾವನೆ ನೀಡಲಾಗಿದ್ದು. ಇದು ಸುಮಾರು ವರ್ಷಗಳು ಹಳೆಯದಾಗಿದ್ದು, ಈ ಹಂತದಲ್ಲಿ ಅವರುಗಳಿಂದ ವಸೂಲಿ ಮಾಡುವ ಸಾಧ್ಯತೆಗಳು ಇರುವುದಿಲ್ಲ.

ಈ ವಿಷಯವನ್ನು ಸಿಂಡೀಕೇಟ್ ಮತ್ತು Finance Committee ಸಭೆಗಳಲ್ಲಿ ಸಹ ವಸೂಲಿ ಮಾಡಲು ಸಾಧ್ಯವಿಲ್ಲವೆಂದು ಸರ್ವಾನುತದಿಂದ ಅನುಮೋದಿಸಲಾಗಿದೆ (ಸದರಿ ಸಭೆಯ ನಡಾವಳಿಯ ಪ್ರತಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ).

ಮೇಲೆ ವಿವರಿಸಿದಂತೆ ತಾವು ದಯವಿಟ್ಟು ಸದರಿ ಕಂಡಿಕೆಯನ್ನು ಆಡಿಟ್ ವರದಿಯಿಂದ ಕೈಬಿಡಲು ಕೋರಲಾಗಿದೆ.

| | |
|---|---|
| **25.2 ಪರೀಕ್ಷಾ ಸೇವೆಗಳ ಸಂಗ್ರಹಣೆಯಲ್ಲಿ ನಡೆದ ಟೆಂಡರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ**<br><br>ಬೆಂಗಳೂರು ಉತ್ತರ ವಿಶ್ವವಿದ್ಯಾಲಯವು ಪರಿಣಾಮಕಾರಿಯಾದ ಪರೀಕ್ಷಾ ವಿಭಾಗವನ್ನು ಅನುಸರಿಸುವ ಸಲುವಾಗಿ ಪರೀಕ್ಷಾ ಪ್ರಕ್ರಿಯೆ ನಿರ್ವಹಣಾ ಪದ್ಧತಿ ಮತ್ತು ಪರೀಕ್ಷಾ ನಿರ್ವಹಣೆಯಲ್ಲಿ ಇ-ಆಡಳಿತವನ್ನು ಅಳವಡಿಸಿಕೊಳ್ಳಲು ಟೆಂಡರ್ ಪ್ರಕ್ರಿಯೆ ಮೂಲತ ಸೇವಾ ಗುತ್ತಿಗೆದಾರರನ್ನು ಆಯ್ಕೆ ಮಾಡಿಕೊಂಡು ನಂತರದಲ್ಲಿ ಪಾವತಿಗಳನ್ನು ಮಾಡಲು ಆರಂಭಿಸಲಾಗಿರುತ್ತದೆ.<br><br>**ಗುತ್ತಿಗೆ ಪಾವತಿಗೆ ಸಂಬಂಧಿಸಿದ ವಿವರ ಈ ಕೆಳಕಂಡಂತಿದೆ:-**<br><br>**ಪರೀಕ್ಷಾ ಪ್ರಕ್ರಿಯೆ ನಿರ್ವಹಣಾ ಪದ್ಧತಿ** (Examination Management system)<br><br>ಗುತ್ತಿಗೆದಾರ: ಮೆ॥ ಲಾಜಿಸಿಸ್<br>ಟೆಂಡರು ಮೊತ್ತ: ನಮೂದಿಸಿರುವುದಿಲ್ಲ<br><br>ಪಾವತಿ ದರ ಪ್ರತಿ ಪರೀಕ್ಷೆಗೆ ಪ್ರತಿ ವಿದ್ಯಾರ್ಥಿಗೆ ಮೂಲ ದರ ರೂ.170/-ರಂತೆ ಮತ್ತು ಪ್ರತಿ ವರ್ಷಕ್ಕೆ ಶೇ.5 ಹೆಚ್ಚಳದಂತೆ ನಿಗದಿ.<br><br>ಪ್ರಸಕ್ತ ಸಾಲಿನ ಪಾವತಿ:<br>254326/19.02.2019 — 11,22,000.00<br>255325/12.06.2019 — 11,22,000.00<br>163821/30.01.2020 — 17,08,092.00 | 25.2) ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯವನ್ನು ಹಿಂದಿನ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರುನಿಂದ ತ್ರಿವಿಭಜಿಸುವ ಮೂಲಕ ಸ್ಥಾಪಿಸಲಾಯಿತು. ಅಂದರೆ ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಬೆಂಗಳೂರು ನಗರ ವಿಶ್ವವಿದ್ಯಾಲಯ ಮತ್ತು ಬೆಂಗಳೂರು ವಿಶ್ವವಿದ್ಯಾಲಯ ಎಂದು ಗೆಜೆಟ್ ಅಧಿಸೂಚನೆ ಭಾಗ-A No.922, ದಿನಾಂಕ 13ನೇ ಆಗಸ್ಟ 2015 ರ ಮೂಲಕ ಸ್ಥಾಪಿಸಲಾಯಿತು, ಶೈಕ್ಷಣಿಕ ಮತ್ತು ಆಡಳಿತಾತ್ಮಕ ಮತ್ತು ಇತರ ಚಟುವಟಿಕೆಗಳು ಔಪಚಾರಿಕವಾಗಿ ಶೈಕ್ಷಣಿಕದಿಂದ ಪ್ರಾರಂಭವಾಯಿತು.<br><br>**ವರ್ಷ 2018-19.**<br><br>ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯವನ್ನು ಕರ್ನಾಟಕ ವಿಶ್ವವಿದ್ಯಾನಿಲಯ ಕಾಯಿದೆಯಡಿಯಲ್ಲಿ ಸ್ಥಾಪಿಸಲಾಯಿತು. ಹೊಸ ವಿಶ್ವವಿದ್ಯಾಲಯವು ತನ್ನ ಚಟುವಟಿಕೆಗಳನ್ನು ಪ್ರಾರಂಭಿಸಿತು. ಬೆಂಗಳೂರು ಉತ್ತರ ವಿಶ್ವವಿದ್ಯಾಲಯಕ್ಕೆ ಕಟ್ಟಡ, ಸ್ಥಳ, ಪೀಠೋಪಕರಣಗಳು, ವಿಭಾಗೀಯ ಸಿಬ್ಬಂದಿ, ದೂರವಾಣಿ, ಮತ್ತು ಇಂಟರ್‌ನೆಟ್ ನಂತಹ ಯಾವುದೇ ತಾಂತ್ರಿಕ ಸೌಲಭ್ಯಗಳು ಇರಲಿಲ್ಲ. ಆದರೂ ಅಧಿಕಾರಿಗಳು ಕುಳಿತು ಕೆಲಸಗಳನ್ನು ನಿರ್ವಹಿಸಿರುತ್ತಾರೆ.<br><br>ಆದಾಗ್ಯೂ, ವಿಶ್ವವಿದ್ಯಾನಿಲಯವು ಕೋಲಾರದಲ್ಲಿ ಶಾಶ್ವತ ವಿದ್ಯುತ್ ಸರಬರಾಜು, ನೀರು ಇತ್ಯಾದಿಗಳಿಲ್ಲದೆ ಬಹುತೇಕ ಅಂತಿಮ ಹಂತದಲ್ಲಿದ್ದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ (ಕೆಎಸ್‌ಒಯು) ಹೊಸ ಕಟ್ಟಡವನ್ನು ತೆಗೆದುಕೊಂಡು ಹೆಚ್ಚಿನ ಪ್ರಯತ್ನದಿಂದ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಲಾಯಿತು.<br><br>ವಿಶ್ವವಿದ್ಯಾನಿಲಯದ ಶೈಕ್ಷಣಿಕ, ಸಂಶೋಧನೆ, ವಿಸ್ತರಣೆ ಮತ್ತು ಆಡಳಿತಾತ್ಮಕ ಚಟುವಟಿಕೆಗಳನ್ನು ಈ ವಿಶ್ವವಿದ್ಯಾನಿಲಯದ ಘಟನೆಗಳ ಕ್ಯಾಲೆಂಡರ್‌ನ ಪ್ರಕಾರ |

| | | |
|---|---|---|
| | 213112/11.11.2019 | 10,04,800.00 |
| | 2124491/14.11.19 | 10,04,800.00 |
| | 109576/17.08.19 | 6,23,877.00 |
| | ಒಟ್ಟು | **65,85,569.00** |
| ಗುತ್ತಿಗೆ ಅವಧಿ 5 ವರ್ಷಗಳು | | (ಲೆಕ್ಕಪರಿಶೋಧನಾ ಅವಧಿಯಲ್ಲಿನ ಮಾಹಿತಿ ಪ್ರಕಾರ) |

**ಪರೀಕ್ಷಾ ನಿರ್ವಹಣೆಯಲ್ಲಿ ಇ-ಆಡಳಿತ** (ಇ–Government in examination Management)

ಬೆಂಗಳೂರು ಉತ್ತರ ವಿಶ್ವವಿದ್ಯಾಲಯವು ನಿರ್ವಹಿಸುವ ಪರೀಕ್ಷಾ ಕಾರ್ಯಗಳಿಗೆ ಪರೀಕ್ಷಾ ಪ್ರಕ್ರಿಯೆ ನಿರ್ವಹಣಾ ಪದ್ಧತಿ (Examination Management system)ಮತ್ತು ಪರೀಕ್ಷಾ ನಿರ್ವಹಣೆಯಲ್ಲಿ ಇ-ಆಡಳಿತ (E-Government in examination Management) ಈ ಸೇವಾ ಗುತ್ತಿಗೆ ಪದ್ಧತಿಯಲ್ಲಿ ಕಂಡುಬಂದ ನ್ಯೂನತೆಗಳು.

| | |
|---|---|
| ಗುತ್ತಿಗೆದಾರ | ಮೆ॥ ಯೂನಿಕ್ಲೇರ್ ಸಲ್ಯೂಷನ್ ಪ್ರೈ., ಲಿ., ಟೆಂಡರ್ ಮೊತ್ತ ನಮೂದಿಸಿರುವುದಿಲ್ಲ |

ಪಾವತಿ ದರ, ಪ್ರತಿ ಪರೀಕ್ಷೆ, ಪ್ರತಿ ವಿದ್ಯಾರ್ಥಿಗೆ ಮೂಲ ದರ ರೂ.110/– ರಂತೆ ಮೊತ್ತ ಪ್ರತಿ ವರ್ಷಕ್ಕೆ ಶೇ.5 ರಂತೆ ಹೆಚ್ಚು ನಿಗದಿ.

| | | |
|---|---|---|
| ಪ್ರಸಕ್ತ ಸಾಲಿನ ಪಾವತಿ | 254325/19.02.2019 | 7,26,000.00 |
| | 109575/17.01.2019 | 5,80,800.00 |
| | 213111–111119 | 6,53,400.00 |
| | 212448–14114 | 6,53,400.,00 |

ಮಾತ್ರವಲ್ಲದೆ ರಾಜ್ಯದ ಇತರ ವಿಶ್ವವಿದ್ಯಾಲಯಗಳಿಗೆ ಸಮಾನಾಂತರವಾಗಿ ಘಟನೆಗಳನ್ನು ಶೈಕ್ಷಣಿಕ ಕ್ಯಾಲೆಂಡರ್‌ನ ಪ್ರಾರಂಭದಲ್ಲಿ ಏಕರೂಪತೆಯನ್ನು ಕಾಪಾಡಿಕೊಳ್ಳಲು, ಅಂಗಸಂಸ್ಥೆಯನ್ನು ಕಾರ್ಯಗತಗೊಳಿಸುವ ಮಹತ್ವವನ್ನು ಅರಿತುಕೊಳ್ಳಬೇಕು. ಮತ್ತು ಆನ್‌ಲೈನ್ ಪ್ರವೇಶ ಪ್ರಕ್ರಿಯೆ (ಯುಜಿ ಕೋರ್ಸ್‌ಗಳಿಗೆ ಪ್ರವೇಶ ಮಾಡುವುದು, ಪ್ರವೇಶಗಳ ಪರಿಶೀಲನೆ, ಪ್ರವೇಶಗಳ ಅನುಮೋದನೆ ಇತ್ಯಾದಿ.

ಸುಮಾರು 36,000 ಅಭ್ಯರ್ಥಿಗಳ ಪ್ರವೇಶದೊಂದಿಗೆ ಸುಮಾರು 246 ಸಂಯೋಜಿತ ಕಾಲೇಜುಗಳು) ಮತ್ತು 10 ವಿಶ್ವವಿದ್ಯಾಲಯಗಳ ವಿಭಾಗಗಳನ್ನು ಹೊರತುಪಡಿಸಿ 45 ಕಾಲೇಜುಗಳಲ್ಲಿ ಕೌನ್ಸೆಲಿಂಗ್ ಮೂಲಕ ಪಿಜಿ ಕೋರ್ಸ್‌ಗಳಿಗೆ ಪ್ರವೇಶ ಒಟ್ಟು 5,000 ಕ್ಕೂ ಹೆಚ್ಚು ವಿದ್ಯಾರ್ಥಿಗಳ ಪ್ರವೇಶ ದಾಖಲಾತಿಗಳನ್ನು ಮಾಡಲಾಯಿತು.

ವಿಶ್ವವಿದ್ಯಾನಿಲಯದ ಅಧಿಕಾರಿಗಳು ಹಾಗು 08 ಅನುಭವವಿಲ್ಲದ ತಾತ್ಕಾಲಿಕ ಸಿಬ್ಬಂದಿಗಳೊಂದಿಗೆ (ಎಲ್ಲರು ಅನುಭವವಿಲ್ಲದ ಹೊಸ ಪದವೀಧರರು) ಸಮಯಕ್ಕೆ ಸರಿಯಾಗಿ ಕಷ್ಟಪಟ್ಟು ಯಶಸ್ವಿಯಾಗಿ ನಿರ್ವಹಿಸಿದರು. ನಿಯಮಗಳ ನಿಬಂಧನೆಗಳನ್ನು ಅನುಸರಿಸಿ ತಕ್ಷಣದ ಭೌತಿಕ, ತಾಂತ್ರಿಕ ಮತ್ತು ಇತರ ಮೂಲಸೌಕರ್ಯಗಳನ್ನು ರಚಿಸಲಾಗಿದೆ.

ಫಲಿತಾಂಶಗಳ ಪ್ರಕಟಣೆ, ದಕ್ಷತೆ ಮತ್ತು ಪಾರದರ್ಶಕತೆಯೊಂದಿಗೆ ಸಮಯಕ್ಕೆ ಅಂಕಗಳ ಕಾರ್ಡ್‌ಗಳ ವಿತರಣೆ ಸೇರಿದಂತೆ ಪರೀಕ್ಷೆಯನ್ನು ನಡೆಸುವುದು ಅತ್ಯಂತ ಪ್ರಮುಖ ಮತ್ತು ಸವಾಲಿನ ಕೆಲಸವಾಗಿದೆ.

ವಿಶ್ವವಿದ್ಯಾನಿಲಯದ ಚಿತ್ರಣ ಮತ್ತು ವಿಶ್ವಾಸಾರ್ಹತೆಯು ಎಲ್ಲಾ ಪ್ರವೇಶಗಳನ್ನು ಪೂರ್ಣಗೊಳಿಸುವಿಕೆ, ದೋಷ ಮುಕ್ತ ಪರೀಕ್ಷೆಗಳನ್ನು ನಡೆಸುವುದು, ವಿದ್ಯಾರ್ಥಿಗಳ ಕುಂದುಕೊರತೆಗಳನ್ನು ಪರಿಹರಿಸುವುದು ಸೇರಿದಂತೆ ಸಮಯಕ್ಕೆ ಫಲಿತಾಂಶಗಳ ಪ್ರಕಟಣೆಯನ್ನು ಅವಲಂಬಿಸಿರುತ್ತದೆ.

| | | |
|---|---|---|
| | 163821/30.01.2020 | 11,05,236.00 |
| **ಗುತ್ತಿಗೆ ಅವಧಿ 5 ವರ್ಷಗಳು** | | **37,18,836.00** |

**ಟೆಂಡರ್‌ಗೆ ಸಂಬಂಧಿಸಿದ ವಿವರ:-**

ವಿಶ್ವವಿದ್ಯಾಲಯವು ಪರೀಕ್ಷಾ ಪ್ರಕ್ರಿಯೆ ನಿರ್ವಹಣಾ ಪದ್ಧತಿ ಮತ್ತು ಪರೀಕ್ಷಾ ನಿರ್ವಹಣೆಯಲ್ಲಿ ಇ-ಆಡಳಿತಕ್ಕೆ ಸಂಬಂಧಿಸಿದಂತೆ, ಅಲ್ಪಾವಧಿ ಟೆಂಡರ್‌ನ್ನು ಟೆಂಡರ್ ಪ್ರಕಟಣೆ ಸಂಖ್ಯೆ.BNO/EB/Ex7-02/2018-19 ರ ಮೂಲಕ ದಿನಾಂಕ: 05.07.2018ಕ್ಕೆ ಅರ್ಜಿಯನ್ನು ಆಹ್ವಾನಿಸಿ, ದಿನಾಂಕ: 19.07.2018 ರವರಗೆ, ಕೇವಲ 15 ದಿನಗಳ ಕಾಲಾವಕಾಶವನ್ನು ನೀಡಲಾಗಿರುತ್ತದೆ.

ಸದರಿ ಟೆಂಡರ್‌ನ ಡಾಕ್ಯೂಮೆಂಟಿನಲ್ಲಿ Item No. 1 Qualification required fromthe Tenderer ಎನ್ನುವ ಷರತ್ತಿನಲ್ಲಿ, ಟೆಂಡರ್‌ದಾರನು ಹೊಸದಾಗಿ ಸ್ಥಾಪಿಸಿರುವ ವಿಶ್ವವಿದ್ಯಾಲಯದಲ್ಲಿ ಕನಿಷ್ಟ ಪಕ್ಷ 2 ವರ್ಷ Examination Automation ಪದ್ಧತಿಯನ್ನು ಅಳವಡಿಸಿ ಕಾರ್ಯಗತಗೊಳಿಸಿರುವ ಅನುಭವ ಹೊಂದಿರಬೇಕು.

ಮುಂದುವರೆದು, ಕನಿಷ್ಟ ಪಕ್ಷ 2 ವರ್ಷ Examination Automation ನ್ನು web portal & mobileapplication used ಮೂಲಕ ಅಳವಡಿಸಿ ಕಾರ್ಯಗತಗೊಳಿಸಿದ ಅನುಭವ ಹೊಂದಿರಬೇಕು ಎಂದು ತಿಳಿಸಿದೆ.ಈ ಸೇವಾ ನೈಪುಣ್ಯತೆಯು consortium/Joint venture ಸಂಸ್ಥೆಗಳಿಗೂ ಅನ್ವಯಿಸುವುದಾಗಿ Item No. 01 ರ ಷರತ್ತು 9ರಲ್ಲಿ ತಿಳಿಸಲಾಗಿದೆ.

ಈ ಸಂಬಂಧ ಕಡತಗಳನ್ನು ಪರಿಶೀಲಿಸಿದಾಗ ಟೆಂಡರ್‌ನ ಮೊದಲನೇ ಕರೆಯಲ್ಲಿ ಭಾಗವಹಿಸಿದ ಕಂಪನಿಗಳ ವಿವರವಾಗಲಿ ಈ ಪೋರ್ಟ್‌ನ ವಿವರವಾಗಲೀ ಲೆಕ್ಕಪರಿಶೋಧನೆಗೆ ಲಭ್ಯವಿರುವುದಿಲ್ಲ. ದಿನಾಂಕ: 21.08.2018 ರಂದು ವಿಶ್ವವಿದ್ಯಾಲಯದ ತಾಂತ್ರಿಕ ಸಲಹಾ ಸಮಿತಿ ಸಭೆ ನಡೆಸಿ, ಟೆಂಡರ್‌ನಲ್ಲಿ 4 ಜನ ಬಿಡ್ಡುದಾರರು ಭಾಗವಹಿಸಿದ್ದು, Examination Process Management system ಗೆ ಸಂಬಂಧಿಸಿದಂತೆ, Logisys ಕಂಪನಿಗೆ 85 ಅಂಕಗಳನ್ನು ನೀಡಿ ಮತ್ತು TRS forms and Services Private Limited ಗೆ 82 ಅಂಕಗಳನ್ನು ನೀಡಿ ಅರ್ಹರನ್ನಾಗಿಸಿದೆ. E-Governess in examination Management ನಲ್ಲಿ ಭಾಗವಹಿಸಿದ 5

ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಮತ್ತು ತಾಂತ್ರಿಕವಾಗಿ ಅರ್ಹತೆ ಮತ್ತು ಸಮರ್ಥ ಮಾನವ ಸಂಪನ್ಮೂಲಗಳಂತಹ ಅಗತ್ಯ ಮೂಲಸೌಕರ್ಯಗಳ ಲಭ್ಯತೆಯಿಲ್ಲದ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು ಹೊಸ ವಿಶ್ವವಿದ್ಯಾನಿಲಯದಲ್ಲಿ ಐಸಿಟಿ ಮೂಲಸೌಕರ್ಯಗಳು (ಸಾಫ್ಟ್‌ವೇರ್, ಹಾರ್ಡ್‌ವೇರ್, ದಕ್ಷ ನೆಟ್‌ವರ್ಕ್ ಸೌಲಭ್ಯ ಇತ್ಯಾದಿ) ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳಿಗೆ ಎಲ್ಲಾ ಪರೀಕ್ಷಾ ಕಾರ್ಯಗಳನ್ನು ಸ್ವಂತವಾಗಿ ನಡೆಸಲು, ಮಾಜಿ ಉಪಕುಲಪತಿಗಳು, ಹಿರಿಯ ಶೈಕ್ಷಣಿಕ ತಜ್ಞರು/ಪ್ರೊಫೆಸರ್‌ಗಳನ್ನು ಒಳಗೊಂಡ ಶೈಕ್ಷಣಿಕ ಸಲಹಾ ಸಮಿತಿ ಮತ್ತು 4ನೇ ಜನವರಿ 2018 ರಂದು ನಡೆದ ವಿಶ್ವವಿದ್ಯಾನಿಲಯದ ಅಧಿಕಾರಿಗಳು ಸಭೆಯಲ್ಲಿ ರಾಜ್ಯದ ಇತರ ವಿಶ್ವವಿದ್ಯಾಲಯಗಳಲ್ಲಿ ಮಾಡಿದಂತೆ ಸಮರ್ಥ ಸೇವಾ ಪೂರೈಕೆದಾರರಿಂದ ಸೇವೆಗಳನ್ನು ನೇಮಿಸಿಕೊಳ್ಳುವ ಮೂಲಕ ಎಲ್ಲಾ ಪರೀಕ್ಷಾ ಕಾರ್ಯಗಳನ್ನು ಯೋಜಿಸಲು ಮತ್ತು ಕಾರ್ಯಗತಗೊಳಿಸಲು ನಿರ್ಧರಿಸಲಾಯಿತು (ಪ್ರತಿ ಲಗತ್ತಿಸಿದೆ).

ಸುಗಮ ಆಡಳಿತ ನಡೆಸಲು ವಿಶ್ವವಿದ್ಯಾನಿಲಯವು ಹಲವಾರು ರಾಜ್ಯ ವಿಶ್ವವಿದ್ಯಾನಿಲಯಗಳನ್ನು ಸಂಪರ್ಕಿಸಿ ಮತ್ತು ಚರ್ಚಿಸಿದಂತೆ, ಮತ್ತು ವಿಶ್ವವಿದ್ಯಾಲಯಗಳ ಕೆಲವು ಹಿರಿಯ ಅಧಿಕಾರಿಗಳು ಸೇರಿದಂತೆ ಎಲ್ಲಾ ವಿಶ್ವವಿದ್ಯಾಲಯಗಳು KTPP ನಿಯಮಗಳನ್ನು ಅನುಸರಿಸುವ ಮೂಲಕ ಅಧಿಕೃತ ಹೊರಗುತ್ತಿಗೆ ಏಜೆನ್ಸಿ ಮೂಲಕ ಪರೀಕ್ಷೆಗೆ ಸಂಬಂಧಿಸಿದ ಕೆಲಸಗಳನ್ನು ನಿರ್ವಹಿಸುತ್ತಿವೆ.

ಅದರಂತೆ, ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯವು ಮಾನವ ಸಂಪನ್ಮೂಲ ಸೇರಿದಂತೆ ಎಲ್ಲಾ ಪರೀಕ್ಷಾ ಕಾರ್ಯಗಳಿಗೆ (ವಿಶ್ವವಿದ್ಯಾನಿಲಯಕ್ಕೆ ಖಾಯಂ ಮತ್ತು ಅರ್ಹ ಸಿಬ್ಬಂದಿ ಕೊರತೆಯಿಂದಾಗಿ) ಟೆಂಡರ್‌ಗಳನ್ನು ಕರೆಯಲು ನಿರ್ಧರಿಸಿತು, ಇದಕ್ಕಾಗಿ ಕೆಟಿಪಿಪಿ ನಿಯಮಗಳ ಪ್ರಕಾರ ಎರಡು ಬಾರಿ ಕರೆಯಲಾಯಿತು.

ಐಸಿಟಿ ಕ್ಷೇತ್ರದ ಪರಿಣಿತರನ್ನು ಒಳಗೊಂಡ ತಾಂತ್ರಿಕ ಪರಿಶೀಲನಾ ಸಮಿತಿ, ಇತರೆ ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ (ಮೌಲ್ಯಮಾಪನ) ಮತ್ತು ಬೆಂಗಳೂರು ಉತ್ತರ

| | |
|---|---|
| ಕಂಪನಿಗಳಲ್ಲಿ 4 ಕಂಪನಿಗಳು ಅನರ್ಹರೆಂದು Uniclare Solutions Private Limited ಕಂಪನಿಗೆ M\s Logisys ಕಂಪನಿಯ ನಡುವಿನ consortium/Joint venture ಗೆ ಸಂಬಂಧಿಸಿದ ನೈಜನೆಯ ಪರೀಕ್ಷೆಗೆ ಒಳಪಟ್ಟು, M\|\| Logisys ಗೆ ನೀಡಿದ ಅಂಕಗಳನ್ನು M\s Uniclare solutions Private Limited ನೀಡಲಾಗಿದೆ. ಈ ಸಂಬಂಧ ಕಾನೂನು ಸಲಹ ಸಮಿತಿಯ ಅಭಿಪ್ರಾಯವನ್ನು ಕೇಳಿದ್ದು, ಕಾನೂನು ಅಭಿಪ್ರಾಯ ಈ ಕೆಳಕಂಡಂತಿರುತ್ತದೆ.<br><br>Logisis company & Uniclare solutions Pvt. Ltd., ಕಂಪನಿಗಳು ಬೇರೆ ಬೇರೆ ಕಂಪನಿಗಳಾಗಿದ್ದು, consortium/Agreement or Joint venture ಆಗಿರುವುದಕ್ಕೆ ಯಾವುದೇ ದಾಖಲೆಗಳಿರುವುದಿಲ್ಲ. Logisis company & Uniclare solutions Pvt. Ltd., ಕಂಪನಿಗಳುನೀಡಿದ ಅಂಕಗಳು eTender bulletin Item no. 2 ರ ಪ್ಯಾರಾ 25 ರಲ್ಲಿ ನಮೂದಿಸಿದಂತೆ ಇದೆ ಇನ್ನುವ ನಿರ್ಧಾರಕ್ಕೆ ಬರಲು ಕಾರಣ ನಮೂದಿಸಿಲ್ಲ. ಆದ್ದರಿಂದ, ಈ ವಿಚಾರದಲ್ಲಿ ವಿಶ್ವವಿದ್ಯಾಲಯವು ಮತ್ತೊಂದು ಟೆಂಡರ್ ಕರೆಯಲು ಉಚಿತ ಎಂಬ ಅಭಿಪ್ರಾಯ ನೀಡಲಾಗಿದೆ. ಮುಂದುವರೆದು ವಿಶ್ವವಿದ್ಯಾಲಯದ ತಾಂತ್ರಿಕ ಸಮಿತಿಯ ದಿನಾಂಕ: 05.09.2018 ರಂದು ಸಭೆ ನಡೆಸಿ ಮರುಟೆಂಡರನ್ನು ಆಹ್ವಾನಿಸುವ ತೀರ್ಮಾನಕ್ಕೆ ಬಂದಿರುತ್ತಾರೆ.<br><br>ನಂತರದಲ್ಲಿ ದಿನಾಂಕ: 12.09.2018 ರಂದು ಟೆಂಡರ್ ಪ್ರಕಟಣೆ ಸಂಖ್ಯೆ: No. BNO/Exam/e-tender/423(call2)/2018-19 ರ ಮೂಲಕ 2ನೇ ಟೆಂಡರ್‌ನ್ನು ಆಹ್ವಾನಿಸಿ ದಿನಾಂಕ: 19.09.2018 ಅಂದರೆ, ಕೇವಲ 7 ದಿನಗಳ ಕಾಲಾವಕಾಶವನ್ನು ನೀಡಲಾಗಿದೆ. ಸದರಿ ಟೆಂಡರ್‌ನಲ್ಲಿ ಐಟಂ ನಂ. 1 Qualifications required from the vendor ಷರತ್ತಿನಡಿಯಲ್ಲಿ, ಷರತ್ತಿನ ಸಂಖ್ಯೆ. 02, 03, 04 ರಲ್ಲಿ Examination automation ಪದ್ಧತಿಯನ್ನು ವಿಶ್ವವಿದ್ಯಾಲಯದಲ್ಲಿ ಮತ್ತು ಹೊಸದಾಗಿ ಸ್ಥಾಪಿಸಿದ ವಿಶ್ವವಿದ್ಯಾಲಯದಲ್ಲಿ ಅಳವಡಿಸಿ ಕಾರ್ಯಗತಗೊಳಿಸಿರುವ ಕನಿಷ್ಟ 2 ವರ್ಷ ಅನುಭವವನ್ನು ಹೊಂದಿರಬೇಕು ಎಂದು ತಿಳಿಸಿ, Joint venture/consortium ಒಪ್ಪಂದವನ್ನು ಹೊರಗಿಡಲಾಗಿದೆ ಎಂದು ತಿಳಿಸಲಾಗಿದೆ.ಮುಂದುವರೆದು ಷರತ್ತಿನ ಸಂಖ್ಯೆ.16ರಲ್ಲಿ ವಿಶ್ವವಿದ್ಯಾಲಯವು OMR Sheet ತಂತ್ರಜ್ಞಾನವನ್ನು ಫಲಿತಾಂಶ Processing ಗೆ ಬಳಸುವುದಿಲ್ಲ ಮತ್ತು OMR Sheet ಆಧಾರದ ಮೇಲೆ ಫಲಿತಾಂಶ Processing ಮಾಡಿದ ಅನುಭವವನ್ನು ಪರಿಗಣಿಸುವುದಿಲ್ಲ ಎಂಬ ಹೊಸ ಅಂಶವನ್ನು ಸೇರ್ಪಡೆಗೊಳಿಸಲಾಗಿದೆ. | ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ (ಮೌಲ್ಯಮಾಪನ) ತಾಂತ್ರಿಕ ಪರಿಶೀಲನಾ ಸಮಿತಿಯ ಶಿಫಾರಸುಗಳ ಆಧಾರದ ಮೇಲೆ ಅರ್ಹ ಬಿಡ್ಡುದಾರರ ಟೆಂಡರ್ ದಾಖಲೆಗಳನ್ನು ಪರಿಶೀಲಿಸಿತು. ಅರ್ಹ ಬಿಡ್ಡುದಾರರಿಗೆ ಆದೇಶ ನೀಡಲಾಯಿತು.<br><br>ಆದ್ದರಿಂದ, ICT ಉಪಕ್ರಮವನ್ನು ಜಾರಿಗೊಳಿಸಲಾಗಿದೆ, KTPP ನಿಯಮಗಳ ನಿಬಂಧನೆಗಳ ಪ್ರಕಾರ ಟೆಂಡರ್ ಪ್ರಕ್ರಿಯೆಯನ್ನು ಮಾಡಲಾಗಿದೆ ಮತ್ತು KTPP ನಿಯಮಗಳ ಯಾವುದೇ ಉಲ್ಲಂಘನೆ ಮಾಡಿಲ್ಲಾ.<br><br>**ಕೆಳಗೆ ವಿವರಿಸಿದಂತೆ ಇಡೀ ಪ್ರಕ್ರಿಯೆಯಲ್ಲಿ ಯಾವುದೇ ಅಕ್ರಮಗಳಿಲ್ಲ.**<br><br>A) ಅನುಮೋದಿತ ದರಗಳು ಇತರ ವಿಶ್ವವಿದ್ಯಾನಿಲಯಗಳಿಗಿಂತ ತುಲನಾತ್ಮಕವಾಗಿ ಕಡಿಮೆಯಾಗಿದೆ, ಇದರಲ್ಲಿ ಸೇವಾ ಪೂರೈಕೆದಾರರಿಂದ ವಿಶ್ವವಿದ್ಯಾನಿಲಯ ಅನುಮೋದಿತ ತಾಂತ್ರಿಕ ವಿವರಣೆಯ ಅಂಕಗಳ ಕಾರ್ಡ್‌ಗಳ ಪೂರೈಕೆಯನ್ನು ಒಳಗೊಂಡಿರುತ್ತದೆ.<br>B) ವಿಶ್ವವಿದ್ಯಾನಿಲಯವು ದೋಷ ಮುಕ್ತ ಫಲಿತಾಂಶಗಳನ್ನು ಸಮಯಕ್ಕೆ ಸರಿಯಾಗಿ ಪೂರ್ಣಗೊಳಿಸುತ್ತಿದೆ ಮತ್ತು ಪ್ರಕಟಿಸುತ್ತಿದೆ.<br><br>C) ಯುಜಿಸಿ ಮತ್ತು ಸರ್ಕಾರದ ಪ್ರಕಾರ ವಿಶ್ವವಿದ್ಯಾಲಯವು ಎಲ್ಲಾ (ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳ ಡೇಟಾ) ವಿದ್ಯಾರ್ಥಿಗಳ ಫಲಿತಾಂಶ ಡೇಟಾ, ಅಂಕಗಳ ಕಾರ್ಡ್‌ಗಳು, ಪದವಿ ಪ್ರಮಾಣಪತ್ರಗಳು ಇತ್ಯಾದಿಗಳನ್ನು ಡಿಜಿಟಲ್ ಲಾಗಿನ್‌ನ್ನು ಸಮಯಕ್ಕೆ ಅಪ್‌ಲೋಡ್ ಮಾಡುತ್ತಿದೆ.<br><br>D) NICಯು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಿಲ್ಲ ಅಥವಾ ಪ್ರಸ್ತುತ ದಿನದ ಪರೀಕ್ಷಾ ವ್ಯವಸ್ಥೆಗೆ ತಮ್ಮ ಸಾಫ್ಟ್‌ವೇರ್ ಅನ್ನು ಮಾರಾಟ ಮಾಡುತ್ತಿಲ್ಲ. ಹಿಂದಿನ ಎನ್‌ಐಸಿ ಸೇವೆಗಳು ಸಾಫ್ಟ್‌ವೇರ್ ಅನ್ನು ಮಾತ್ರ ನೀಡಲು ನಿರ್ಬಂಧಿಸಲಾಗಿದೆ ಮಾನವ ಸಂಪನ್ಮೂಲ ಸೇವಾ ಬೆಂಬಲವಿಲ್ಲ. |

ಸದರಿ ಟೆಂಡರ್ ಮುಖ್ಯವಾಗಿ Examination Management system & E-Governance in examination management ಎನ್ನುವ ಎರಡು Project ಗಳನ್ನು ಒಳಗೊಂಡಿದ್ದು, ಎರಡು ಕೆಲಸಗಳನ್ನು ಒಬ್ಬ Vendor ಗೆ ನೀಡುವುದಾಗಿ, ಒಪ್ಪಂದವನ್ನು ಮಾತ್ರ 2 ಬೇರೆ ಬೇರೆ ಮಾಡಿಕೊಂಡು, Lead bidder ಆದ ಕಂಪನಿ ಎರಡೂ ಒಪ್ಪಂದಗಳ ಪ್ರಮುಖ ಕಂಪನಿಯಾಗಿದ್ದು, ಎರಡೂ ಕೆಲಸಗಳನ್ನು ಜಾರಿಗೊಳಿಸಲು ಹೊಣೆಗಾರರನ್ನಾಗಿ ಮಾಡಲಾಗಿದೆ. ಮುಂದುವರೆದು, ವಿಶ್ವವಿದ್ಯಾಲಯವು ದಿನಾಂಕ: 24.09.2018 ರಂದು ತಾಂತ್ರಿಕ Scrutiny ಸಭೆ ನಡೆಸಿ, M\s Logisys ಮಾತ್ರ ಟೆಂಡರ್‌ನಲ್ಲಿ ಭಾಗವಹಿಸಿದ್ದು, ಸದರಿ ಕಂಪನಿಗೆ 88 ಅಂಕಗಳನ್ನು ನೀಡಿ ದಿನಾಂಕ: 25.09.2018 ರಂದು letter of intent ನ್ನು ನೀಡಲಾಗಿದ್ದು, ದಿನಾಂಕ: 26.09.2018 ರಂದು ಕಾರ್ಯಾದೇಶ ನೀಡಲಾಗಿದೆ. ಸದರಿ ಒಪ್ಪಂದವು 5 ವರ್ಷಗಳ ಒಪ್ಪಂದವಾಗಿದ್ದು, Examination Processing ಗೆ 170/– ರೂ.Per Student, revaluation ಗೆ ಸಂಬಂಧಿಸಿದಂತೆ, 40/– ರೂ.Per Student & E-Governance in examinations management ಗೆ 110/– ರೂ. ಗಳನ್ನು Per Student ಗೆ ನಿಗದಿಪಡಿಸಿ ಪ್ರತಿ ವರ್ಷ ಶೇ. 5 ಹೆಚ್ಚಿಗೆ ಅವಕಾಶ ಕಲ್ಪಿಸಲಾಗಿದೆ.

ಸದರಿ ಕಡತಗಳನ್ನು ಪರಿಶೀಲಿಸಿದಾಗ 2ನೇ ಕರೆಯಲ್ಲಿ ಭಾಗವಹಿಸಿದ ಕಂಪನಿಗಳ ವಿವರವನ್ನು ತೋರಿಸುವ ಇ-ಪೋರ್ಟಲ್ ಡಾಕ್ಯುಮೆಂಟ್‌ಗಳು ಲೆಕ್ಕಪರಿಶೋಧನೆಗೆ ಲಭ್ಯವಿರುವುದಿಲ್ಲ. ಮುಂದುವರೆದು, Logysis & Uniclare solutions Pvt., Ltd., ಕಂಪನಿಗಳ ಮಾಹಿತಿಗಳನ್ನು ಲಭ್ಯವಿರುವುದಿಲ್ಲ.

M/s Logysis & M\s Uniclare Solutions Pvt. Ltd., ಕಂಪನಿಗಳು ದಿನಾಂಕ: 04.09.2018 ರಂದು Joint Venture ಒಪ್ಪಂದವನ್ನು ಮಾಡಿಕೊಂಡಿರುವುದು ಕಡತಕ್ಕೆ ಪರಿಶೀಲನೆಯಲ್ಲಿ ಕಂಡುಬಂದಿರುತ್ತದೆ. ಇದರಿಂದ ಮೊದಲನೇ ಟೆಂಡರಿನಲ್ಲಿ ಸದರಿ ಕಂಪನಿಗಳು Joint Venture/corporation ಆಗಿರುತ್ತದೆ ಎಂಬುದಕ್ಕೆ ಯಾವುದೇ ಪುರಾವೆಗಳಿಲ್ಲ ಎಂಬ ಕಾನೂನು ಸಲಹೆಗಾರ ನೀಡಿದ ಅಭಿಪ್ರಾಯಕ್ಕೆಟೆಂಡರ್‌ನ್ನು ಪಡೆದುಕೊಳ್ಳುವ ಉದ್ದೇಶದಿಂದ

E) ಉನ್ನತ ಶಿಕ್ಷಣ ಇಲಾಖೆಯು ಶೈಕ್ಷಣಿಕ ಮತ್ತು ಪರೀಕ್ಷಾ ಕಾರ್ಯಗಳಿಗಾಗಿ, ಕಾಲೇಜುಗಳ ಮತ್ತು ವಿಶ್ವವಿದ್ಯಾಲಯಗಳಿಗೆ ಯಾವುದೇ ಸಾಫ್ಟ್‌ವೇರನ್ನು ಪೂರೈಸುತ್ತಿಲ್ಲ. ವಾಸ್ತವವಾಗಿ, ಇದು UUCMS ಎಂದು ಕರೆಯಲ್ಪಡುವ ಸಾಫ್ಟ್‌ವೇರ್ ಅನ್ನು ಅಭಿವೃದ್ಧಿಪಡಿಸುತ್ತಿದೆ (2021-22 ರಿಂದ).

F) ಬೆಂಗಳೂರು ಉತ್ತರ ವಿಶ್ವವಿದ್ಯಾಲಯವು ಸರ್ಕಾರದ ನಿರ್ದೇಶನಗಳನ್ನು ಅನುಸರಿಸಲು ನಿರ್ಧರಿಸಿದೆ. 2022-23 ರಿಂದ ಕರ್ನಾಟಕದ UUCMS ಅನ್ನು ಬಳಸಲು ನಿರ್ಧರಿಸಿದೆ.

G) ಭಾಗ II, ವಿಭಾಗ A, ವಿಶ್ವವಿದ್ಯಾನಿಲಯದ ಅಡಿಯಲ್ಲಿ ಪುಟ 3 ರಲ್ಲಿ ಗಮನಿಸಿದಂತೆ, G.O ED ಪ್ರಕಾರ ಅವಧಿ ಮುಗಿದ ನಂತರ ಸೇವಾ ಪೂರೈಕೆದಾರರೊಂದಿಗಿನ MOU ನ ಮುಂದುವರಿಕೆಯನ್ನು ನಿಲ್ಲಿಸಲು ಈಗಾಗಲೇ (20.07.2021 ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯವನ್ನು ವೀಕ್ಷಿಸಿ) ನಿರ್ಧರಿಸಿದೆ. 35 EGOV2020 ದಿನಾಂಕ 23.11.2020.

H)ಆದ್ದರಿಂದ ವಿದ್ಯಾರ್ಥಿಗಳು, ಪ್ರಾಂಶುಪಾಲರು, ಶಿಕ್ಷಕರು ಮತ್ತು ವಿಶ್ವವಿದ್ಯಾನಿಲಯದಿಂದ ಯಾವುದೇ ದೂರುಗಳಿಲ್ಲದೆ ಪರೀಕ್ಷೆಗಳನ್ನು ನಡೆಸುವಲ್ಲಿ ಟೆಂಡರ್ ಕರೆಯಲಾಯಿತು ಮತ್ತು ಯಶಸ್ವಿಯಾಗಿದೆ.

ಮೇಲಿನ ಸಂದರ್ಭಗಳಲ್ಲಿ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯವು ಟೆಂಡರ್ ಪ್ರಕ್ರಿಯೆಯಲ್ಲಿ ಕೆಟಿಪಿಪಿ ನಿಯಮಗಳನ್ನು ಅನುಸರಿಸಿದೆ ಮತ್ತು ಟೆಂಡರ್ ನಿಯಮಗಳ ನಿಬಂಧನೆಗಳನ್ನು ಉಲ್ಲಂಘಿಸಿಲ್ಲ ಎಂದು ತಿಳಿಸಲಾಗಿದೆ.

ಆದ್ದರಿಂದ ಮೇಲೆ ವಿವರಿಸಿದಂತೆ ಸದರಿ ಕಂಡಿಕೆಯನ್ನು ಆಡಿಟ್ ವರದಿಯಿಂದ ಕೈಬಿಡಲು ಕೋರಲಾಗಿದೆ.

| | |
|---|---|
| ದಿನಾಂಕ: 04.09.2018 ರಂದು Joint Venture ಮಾಡಿಕೊಳ್ಳಲಾಗಿದೆಯೇ? ಮುಂದುವರೆದು, ಸದರಿ ಕಂಪನಿಗೆ ಟೆಂಡರನ್ನು ನೀಡಲು ಟೆಂಡರ್ document ನಲ್ಲಿ, ಹೊಸದಾದ ಅಂಶಗಳನ್ನು ಟೆಂಡರದಾರನಿಗೆ ಅನುಕೂಲ ಮಾಡಿಕೊಳ್ಳಲು ನೀಡಲಾಗಿದೆಯೇ ಎಂಬ ಸಂಶಯಗಳು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುತ್ತದೆ.<br><br>**ಒಟ್ಟಾರೆ ಸದರಿ ಸೇವಾ ಗುತ್ತಿಗೆಯಲ್ಲಿ ಕಂಡು ಬಂದ ಕೆಲವು ನ್ಯೂನತೆಗಳನ್ನು ಮುಂದಿನಂತೆ ಪ್ರಸ್ತಾಪಿಸಲಾಗಿದೆ.**<br><br>1. ಟೆಂಡರಿನಲ್ಲಿ ಸೇವಾ ಗುತ್ತಿಗೆದಾರನು ಪ್ರತಿ ವಿದ್ಯಾರ್ಥಿಗೆ ರೂ. 170.00 ಮತ್ತು ರೂ. 110.00 ಗಳನ್ನು ನಮೂದಿಸಿದ್ದು, ಈ ದರಗಳನ್ನು ಯಾವ ಆಧಾರದ ಮೇಲೆ ನಮೂದಿಸಲಾಗಿರುತ್ತದೆ ಮತ್ತು ಟೆಂಡರ ಅಂಗೀಕಾರ ಪ್ರಾಧಿಕಾರಿ ಯಾವ ಲೆಕ್ಕಾಚಾರ ಆಧಾರದ ಮೇಲೆ ಈ ದರಗಳನ್ನು ಒಪ್ಪಿಕೊಂಡಿರುತ್ತಾರೆ ಎಂಬುದಕ್ಕೆ ಹಾಗೂ ಪ್ರತಿ ವಾರ್ಷಿಕ ಶೇ 5%ರ ಹೆಚ್ಚಳಕ್ಕೆ ಕರಾರಿನ ಕಂಡಿಕೆ ಸಂಖ್ಯೆ: 16 ರಲ್ಲಿ ಅಳವಡಿಸಿಕೊಂಡಿರುವ ಅಂಶವು ಮೂಲ ಟೆಂಡರು ಷರತ್ತಿನಲ್ಲಿ ಇಲ್ಲದಿದ್ದಾಗ್ಯೂ ಹೆಚ್ಚಳಕ್ಕೆ ಒಪ್ಪಿಕೊಳ್ಳಲಾಗಿರುತ್ತದೆ. ಆದ್ದರಿಂದ, ಈ ಹೆಚ್ಚಳವನ್ನು ಕೈಬಿಟ್ಟು ಕ್ರಮ ಕೈಗೊಳ್ಳುವುದು.<br><br>2. "e-Governances in Examination Management" ಸೇವೆಗೆ ಕರೆದಿರುವ ಟೆಂಡರು ಷರತ್ತಿನಲ್ಲಿ 2 ವರ್ಷಗಳ ಕಾರ್ಯಾನುಭವ, 2 ವರ್ಷಗಳ ಪರೀಕ್ಷೆಗಳ ನಿರ್ವಹಣೆಯ ಅನುಭವ ಇತ್ಯಾಧಿಗಳನ್ನು ಕೇಳಿರುತ್ತಾರೆ. ಆದರೆ "e-Governances in Examination Management" ಗುತ್ತಿಗೆಯನ್ನು ಪಡೆದಿರುವ ಸಂಸ್ಥೆಯಾದ M/s Uniclare ಸಂಸ್ಥೆಯು ದಿನಾಂಕ 27.04.2018 ರಿಂದ ಅಸ್ತಿತ್ವಕ್ಕೆ ಬಂದಿರುತ್ತದೆ. ಅಂದರೆ ಟೆಂಡರು ಕರೆಯುವ 3 ತಿಂಗಳು ಮೊದಲು ಹಾಗಿದ್ದಾಗ 2 ವರ್ಷಗಳ ಅನುಭವವನ್ನು ಅದು ಹೊಂದಿರಲು ಸಾಧ್ಯವಿರುವುದಿಲ್ಲ. ಆದರೆ, M/s Uniclare ಸಂಸ್ಥೆಯು M/s Logisis ಸಂಸ್ಥೆಯ ಅನುಭವದ ದಾಖಲೆಯನ್ನು ನೀಡಿರುತ್ತದೆ ಮತ್ತು ಟೆಂಡರನ್ನು ತನ್ನದಾಗಿಸಿಕೊಂಡಿರುತ್ತದೆ. ಆದಾಗ್ಯೂ ಟೆಂಡರು ಅಂಗೀಕಾರ ಪ್ರಾಧಿಕಾರಿಯು ಈ ನ್ಯೂನತೆಯನ್ನು ಪರಿಗಣಿಸಿರುವುದಿಲ್ಲ. | |

| | |
|---|---|
| 3. "E-Governances in Examination Management" ಟೆಂಡರಿನ ಅವಶ್ಯ ಅರ್ಹತೆಗಳ (**Qualifications required from vendor**) ಕಂಡಿಕೆ 1(9) ರಲ್ಲಿ Contortion/Joint venture ಗೆ ಅವಕಾಶವನ್ನು ಕಲ್ಪಿಸಲಾಗಿದೆ. ಆದರೆ, ತಾಂತ್ರಿಕ ಮೌಲ್ಯಮಾಪನೆಯ ಕಂಡಿಕೆ 2 ಮತ್ತು 3 ನೇ ಮಾನದಂಡಗಳಲ್ಲಿ Joint venture ಸಂಸ್ಥೆಗಳನ್ನು ಹೊರಗಿಡಲಾಗಿರುತ್ತದೆ. ಆದರೆ, ಟೆಂಡರು ಪರಿಶೀಲನೆಯಲ್ಲಿ M/S uniclare ಸಂಸ್ಥೆಗೆ ಸಂಪೂರ್ಣ ಅಂಕಗಳನ್ನು ನೀಡಿ ಸದರಿ ಸಂಸ್ಥೆಯನ್ನು ಆಯ್ಕೆ ಮಾಡಲಾಗಿದೆ. ಟೆಂಡರು ಪರಿಶೀಲನಾ ಪ್ರಾಧಿಕಾರವು ಈ ವೈರುಧ್ಯಗಳನ್ನು ಗಮನಿಸಿಲ್ಲ.<br><br>4. "Examination Process Management System" ನ ಗುತ್ತಿಗೆದಾರರೊಂದಿಗೆ ಮಾಡಿಕೊಂಡಿರುವ ಕರಾರು ಪತ್ರದ 2(2.03)ಯಲ್ಲಿರುವ ರೀತಿ M/s Logisys ಸಂಸ್ಥೆಯವತಿಯಿಂದ 30 ಜನ ಸಿಬ್ಬಂದಿಯನ್ನು ಮತ್ತು "E-governance in Examination Management" ನೊಂದಿಗೆ ಮಾಡಿಕೊಂಡಿರುವ ಒಪ್ಪಂದ ಪತ್ರದ 2(2.03)ರಲ್ಲಿರುವಂತೆ M/s Uniclare ಸಂಸ್ಥೆಯವರು 3 ಜನ ಸಿಬ್ಬಂದಿಯನ್ನು ಒದಗಿಸುತ್ತಾರೆಂದು ಅವರಿಗೆ ಅವಶ್ಯವಿರುವ ಜಾಗ, ಟೇಬಲ್, ಚೇರ್, ಕಂಪ್ಯೂಟರ್, ಪ್ರಿಂಟರ್, ಯು.ಪಿ.ಎಸ್ ಇತ್ಯಾದಿಗಳನ್ನು ಒದಗಿಸಲು ಒಪ್ಪಂದವಾಗಿದೆ.<br><br>ಆದರೆ ಟೆಂಡರು ಕರೆಯುವ ಸಂದರ್ಭದಲ್ಲಿ ಸಿಬ್ಬಂದಿಯ ತಾಂತ್ರಿಕ ವಿದ್ಯಾರ್ಹತೆಯ ಮಾನದಂಡದ ಷರತ್ತನ್ನು ವಿಧಿಸಿಲ್ಲ. ನಿಯೋಜಿಸುವ 30+3 ಸಿಬ್ಬಂದಿಗಳ ವಿದ್ಯಾರ್ಹತೆಯ ಅಗತ್ಯದಾಖಲೆಗಳನ್ನು ವಿಶ್ವವಿದ್ಯಾಲಯವು ಪಡೆಯುವುದು ಸೂಕ್ತವಾಗಿತ್ತು.ಏಕೆಂದರೆ ವಿಶ್ವವಿದ್ಯಾಲಯವು ನಡೆಸಲು ಉದ್ದೇಶಿಸಲು ತಾಂತ್ರಿಕತೆ ಆಧಾರಿತ, ತ್ವರಿತ, ಸುಧಾರಿತ, ಗುಣಮಟ್ಟ ಪರೀಕ್ಷೆಗಳ ಕಾರ್ಯವನ್ನು ನಿರ್ವಹಿಸಲು ಸದರಿ ಸಿಬ್ಬಂದಿಯು ನಿಪುಣರೆ ಎಂಬುದನ್ನು ದೃಢೀಕರಿಸಿಕೊಳ್ಳುವುದು ವಿಶ್ವವಿದ್ಯಾಲಯದ ಜವಾಬ್ದಾರಿಯಾಗಿತ್ತು ಮತ್ತು ಈ ಅಂಶವನ್ನು ಟೆಂಡರಿನಲ್ಲಿ ಮತ್ತು ಅಗ್ರಿಮೆಂಟಿನಲ್ಲಿ ಸೇರಿಸಿಕೊಳ್ಳುವುದು ವಿಹಿತವಾಗಿತ್ತು.ಆದರೆ ವಿಶ್ವವಿದ್ಯಾಲಯವು ಈ ಬಗ್ಗೆ ಗಮನವನ್ನೇ ಹರಿಸಿಲ್ಲ.<br><br>ಟೆಂಡರು ಷರತ್ತಿನಲ್ಲಾಗಲಿ ಮತ್ತು ಅಗ್ರಿಮೆಂಟಿನಲ್ಲಾಗಲಿ "ದಂಡನಾತ್ಮಕ ಕ್ಲಾಸ್" (Penalty | |

Clause) ನ್ನು ಅಳವಡಿಸಿಕೊಂಡಿಲ್ಲ. ಬಹುಕೋಟಿಮೊತ್ತದ ಮತ್ತು 5 ವರ್ಷಗಳಷ್ಟು ದೀರ್ಘಕಾಲದ ಗುತ್ತಿಗೆ ಕಾಲಾವಧಿಯಲ್ಲಿ ಗುತ್ತಿಗೆದಾರನಿಂದ ಯಾವುದೇ ವೈಫಲ್ಯಗಳುಂಟಾಗಿ ನಿಗದಿತ ಕೆಲಸಗಳು ಆಗದೆ ಉದ್ದೇಶಿತ ಗುರಿ ಸಾಧಿಸದಿದ್ದಾಗ ಹಣಪಡೆಯುವ ಗುತ್ತಿಗೆದಾರನ ಮೇಲೆ ದಂಡನಾತ್ಮಕ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಆದರೆ ಈ ಅಗ್ರಿಮೆಂಟಿನಲ್ಲಿ ಅಂತಹ "ದಂಡನಾತ್ಮಕ ಕ್ಲಾಸ್" ಇಲ್ಲದಿರುವುದರಿಂದ ಭವಿಷ್ಯದಲ್ಲಿನ ಭಾದಕ ಅಂಶಗಳನ್ನು ನಿವಾರಿಸಿಕೊಳ್ಳಲು ವಿಶ್ವವಿದ್ಯಾಲಯದ ಯಾವುದೇ ನಿಯಂತ್ರಣವಿಲ್ಲದಂತಾಗಿದೆ.ಈ ಬಗ್ಗೆವಿಶೇಷ ಗಮನಹರಿಸುವುದು ಅವಶ್ಯವಿತ್ತು.

5. ಗುತ್ತಿಗೆ ಕರಾರಿನಲ್ಲಿರುವಂತೆ ಸೇವಾಗುತ್ತಿಗೆದಾರ ಸಂಸ್ಥೆಯ ಸಿಬ್ಬಂಧಿ ಕಾರ್ಯನಿರ್ವಹಿಸಲು ಸ್ಥಳಾವಕಾಶ, ಫರ್ನಿಚರ್ಸ್, ಕಂಪ್ಯೂಟರ್‌ಗಳು, ಪ್ರಿಂಟರ್‌ಗಳು ಇತ್ಯಾಧಿಗಳನ್ನು, ವಿಶ್ವವಿದ್ಯಾಲಯವೇ ಒದಗಿಸಲು ಕರಾರು ನಿಬಂಧನೆಯಿರುವುದು. ಆದಾಗ್ಯೂ ಪರೀಕ್ಷಾ ಕಾರ್ಯ ನಿರ್ವಹಣೆಗೆ ತಯಾರಿಸಿರುವ ಸಾಫ್ಟವೇರ್ ಅನ್ನು "Turn Key" ಆಧಾರದಲ್ಲಿ ನೀಡಿದ್ದು, ಈ ಪದ್ದತಿಯಲ್ಲಿ ಗುತ್ತಿಗೆದಾರನು ಸೇವಾ ಸೌಲಭ್ಯವನ್ನು ಸಂಪೂರ್ಣವಾಗಿ ವಿನ್ಯಾಸಗೊಳಿಸಿ, ನಿರ್ಮಿಸಿ, ಸಜ್ಜುಗೊಳಿಸಿ ಕಾರ್ಯಚರಣೆಗೆ ಸಿದ್ದವಾದಾಗ ಯೋಜನೆಯನ್ನು ಖರೀದಿದಾರರಿಗೆ ಹಿಂದಿರುಗಿಸಬೇಕಾಗಿರುತ್ತದೆ. ಇದರನ್ವಯ ಗುತ್ತಿಗೆ ಅವಧಿ ಮುಗಿದ ನಂತರ ವಿಶ್ವವಿದ್ಯಾಲಯವೇ ಸ್ವತಃ ನಿರ್ವಹಣೆ ಮಾಡುವ ಕ್ರಮವಾಗಿ ತನ್ನ ಸಿಬ್ಬಂದಿಯನ್ನು ಸೇವಾಗುತ್ತಿಗೆ ಸಂಸ್ಥೆಯೊಂದಿಗೆ ಸೇರಿಸಿ ತರಬೇತಿ ನೀಡುವ ಅಂಶವನ್ನು ಷರತ್ತಿನಲ್ಲಿ ಸೇರಿಸಬಹುದಾಗಿತ್ತು. ಇದರಿಂದ ವಿಶ್ವವಿದ್ಯಾಲಯದ ಸಿಬ್ಬಂದಿಗಳೇ ಪರಿಣಿತರಾಗಿ, ವಿಶ್ವವಿದ್ಯಾಲಯಕ್ಕೆ ಆರ್ಥಿಕವಾಗಿ ಭವಿಷ್ಯದಲ್ಲಿ ಉಳಿತಾಯವಾಗುತ್ತಿತ್ತು.

6. ಪರೀಕ್ಷಾಕಾರ್ಯಗಳು ಸುಗಮವಾಗಿ ಸಾಗಲು ಅವಶ್ಯಕವಾದ ತಾಂತ್ರಿಕ ವಿಶಿಷ್ಟಗಳನ್ನು (System Required Specification) ತಯಾರಿಸಿ, ಚಾಲನೆಗೊಳಿಸಿ, ಪರೀಕ್ಷೆಗೆ ಪೂರಕವಾಗಿ ಬಳಸಿಕೊಳ್ಳಲಾಗಿದೆ ಎಂಬುದನ್ನು ಸತ್ಯಾಪನೆ ಮಾಡಿಕೊಳ್ಳಬೇಕಾಗಿರುತ್ತದೆ. ಕಾಲಕಾಲಕ್ಕೆ, ವಿಶೇಷವಾಗಿ ಕ್ಲೇಮು ಪೂರ್ವದಲ್ಲಿ ಈ ತರಹದ ಸತ್ಯಾಪನೆಗಳನ್ನು ಮಾಡಿ ಧೃಢೀಕರಿಸಿಕೊಳ್ಳಬೇಕಿರುತ್ತದೆ. ಇದಕ್ಕೊಸ್ಕರ ವಿಶೇಷ ತಜ್ಞರ ಸಮಿತಿಯನ್ನು ರಚಿಸಿ ಅವರ ಸಲಹೆ ಮತ್ತು ಅಭಿಪ್ರಾಯ ಪಡೆದು ಮತ್ತು ಅದಕ್ಕೆ ತಗಲಬಹುದಾದ ಯಾವುದೇ ವೆಚ್ಚವನ್ನು ಭರಿಸಲು ಗುತ್ತಿಗೆದಾರ ಸಂಸ್ಥೆಯು ಜವಾಬ್ದಾರಿ ವಹಿಸಿಕೊಳ್ಳುವಂತಹ ಷರತ್ತನ್ನು ಅಗ್ರಿಮೆಂಟಿನಲ್ಲಿ ಸೇರಿಸಿಕೊಂಡಿರುವುದಿಲ್ಲ.

7. ಗುತ್ತಿಗೆಯ ಕಾರ್ಯಾವಧಿ ಮುಗಿಯುವ ಹಂತದಲ್ಲಿ (Exit Contract) ವಿಶ್ವವಿದ್ಯಾಲಯ ಮತ್ತು ಗುತ್ತಿಗೆದಾರ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಷರತ್ತಿನಲ್ಲಿ ವಿವರಿಸಿಲ್ಲ. ವಿಶೇಷವಾಗಿ ಭೌತಿಕ ಆಸ್ತಿಯ ಸೃಜನೆ ಮತ್ತು ಹಸ್ತಾಂತರದ ಬಗ್ಗೆ ವಿವರವಿಲ್ಲ. ಪರೀಕ್ಷಾ ಸಾಫ್ಟ್‌ವೇರ್ ತಂತ್ರಾಂಶವನ್ನು ಯಾವ ರೀತಿ ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸಲಾಗುತ್ತದೆ. ಗುತ್ತಿಗೆ ಕಾರ್ಯಾವಧಿಯಲ್ಲಿನ ಗೋಪ್ಯತೆಯನ್ನು ಗುತ್ತಿಗೆ ಮುಗಿದ ನಂತರವೂ ಯಾವ ರೀತಿ ನಿರ್ವಹಿಸಬೇಕಾಗುತ್ತದೆ. ಇತ್ಯಾದಿಗಳ ಬಗ್ಗೆ ವಿಶ್ವವಿದ್ಯಾಲಯ ಗಮನ ಹರಿಸುವುದು ಅವಶ್ಯವಿತ್ತು.

8. ಕೆ.ಟಿ.ಪಿ.ಪಿ ಕಾಯ್ದೆ 12(3) ಹಾಗೂ "Standard tender document" ನಿಯಮ 29 ರನ್ವಯ ಶೇ 5 ರಷ್ಟು ಭದ್ರತಾ ಠೇವಣಿಯನ್ನು (Security Deposit) ಬಿಡ್ಡುದಾರರಿಂದ, ಕಾರ್ಯಾದೇಶ ನೀಡುವ ಪೂರ್ವದಲ್ಲಿಯೇ ಪಡೆಯಬೇಕಿರುತ್ತದೆ. ಆದರೆ, ಇಲ್ಲಿ 2 ಗುತ್ತಿಗೆದಾರರಿಂದ ಭದ್ರತಾ ಠೇವಣಿಯನ್ನು ಪಡೆದಿರುವುದಿಲ್ಲ. ಆದ್ದರಿಂದ ಕೂಡಲೇ ಭದ್ರತಾ ಠೇವಣಿಯನ್ನು ಪಡೆಯುವುದು. ಭದ್ರತಾ ಠೇವಣಿ ಪಡೆಯದಿರುವುದರಿಂದ ಗುತ್ತಿಗೆ ಸೇವಾವಧಿಯಲ್ಲಿ ಯಾವುದೇ ವೈಫಲ್ಯಗಳು ಗುತ್ತಿಗೆದಾರನಿಂದ ಉಂಟಾದಲ್ಲಿ, ವಿಶ್ವವಿದ್ಯಾಲಯಕ್ಕೆ ಅವನಮೇಲೆ ಯಾವುದೇ ಆರ್ಥಿಕ ನಿಯಂತ್ರಣವಿಲ್ಲದಂತಾಗಿ, ಉದ್ದೇಶಿತ ಕಾರ್ಯವು ವಿಫಲವಾಗುವ ಸಾಧ್ಯತೆಯಿರುತ್ತದೆ. ಇಂತಹ ವೈಫಲ್ಯಕ್ಕೆ ವಿಶ್ವವಿದ್ಯಾಲಯದ ಆಡಳಿತವೇ ಜವಾಬ್ದಾರಿಯಾಗಿರುತ್ತದೆ.

9. ಕರಾರು ಒಪ್ಪಂದ ಕಂಡಿಕೆ 1.27 ರಲ್ಲಿ ನಮೂದಿಸಿರುವಂತೆ, ಸೇವಾ ಗುತ್ತಿಗೆದಾರ ಸಂಸ್ಥೆಯಾದ ಮೆ॥ ಲಾಜೀಸಿಸ್ ಸಂಸ್ಥೆಯು ಅಂಕಪಟ್ಟಿಗಳನ್ನು ಖರೀದಿಸಬೇಕಾಗಿರುತ್ತದೆ. ಈ ಷರತ್ತನ್ನು ಟೆಂಡರ್‌ನ ದರ ಸಂದಾನಕ್ಕೆ ಅನುಸಂದಾನವಾಗಿ ಸೇರಿಸಲಾಗಿರುವುದು ದಾಖಲೆಗಳಿಂದ ಕಂಡು ಬರುತ್ತದೆ. ಅಂದರೆ, ದರ ಸಂದಾನ ಸಂದರ್ಭದಲ್ಲಿ ಗುತ್ತಿಗೆದಾರ ನಮೂದಿಸಿರುವ ದರವನ್ನು ಕಡಿಮೆಗೊಳಿಸಲು ಅವರೊಂದಿಗೆ ಕಾನೂನಿನ ಚೌಕಟ್ಟಿನಲ್ಲಿ ಸಂದಾನ ನಡೆಸಿ ದರಗಳನ್ನು ಕಡಿಮೆಗೊಳಿಸಬೇಕಿರುತ್ತದೆ. ಆದರೆ, ಇಲ್ಲಿ ದರಗಳನ್ನು ಕಡಿಮೆಗೊಳಿಸುವ ಬದಲು ಖಾಲಿ ಅಂಕಪಟ್ಟಿಗಳನ್ನು ಗುತ್ತಿಗೆದಾರನೇ ಖರೀದಿಸಬೇಕೆಂದು ತಿಳಿಸಲಾಗಿದೆ. ಈ ವೆಚ್ಚವನ್ನೇ ದರ ಸಂದಾನದ ಫಲಿತವೆಂದು ಭಾವಿಸಿದಂತೆ ಕಂಡು ಬರುತ್ತದೆ. ಆದರೆ, ವಿದ್ಯಾರ್ಥಿಗಳ ಭವಿಷ್ಯ ನಿರ್ಧರಿಸುವಂತಹ

ಅಂಕಪಟ್ಟಿಗಳ ತಯಾರಿಕೆ ದಾಸ್ತಾನು ಉಪಯೋಗದಂತಹ ಕ್ರಿಯೆಗಳ ಮೇಲೆ ಪರೀಕ್ಷಾಂಗವೇ ನೇರ ಉಸ್ತುವಾರಿ ಮತ್ತು ಜವಾಬ್ದಾರಿಯನ್ನು ವಹಿಸುವುದು ಸೂಕ್ತವಾಗಿರುತ್ತದೆ. ಅಂಕಪಟ್ಟಿಗಳ ನಿರ್ವಹಣೆ ಅತ್ಯುನ್ನತ ನಿಯಂತ್ರಣ ಪ್ರಾಧಿಕಾರವನ್ನು ಹೊಂದಿರುವಂತಹದ್ದಾಗಿದ್ದು, ಇದನ್ನು ಖಾಸಗಿಯವರ ನಿಯಂತ್ರಣಕ್ಕೆ ನೀಡಿರುವುದನ್ನು ಮತ್ತು ಅಂಕಪಟ್ಟಿಗಳ ತಯಾರಿ ಮತ್ತು ಸರಬರಾಜನ್ನು ದರಸಂದಾನದ ಭಾಗವಾಗಿರಿಸಿರುವುದನ್ನು ಲೆಕ್ಕಪರಿಶೋಧನೆಯು ಆಕ್ಷೇಪಿಸುತ್ತದೆ. ಅಲ್ಲದೆ, ಅಂಕಪಟ್ಟಿಗಳನ್ನು ಯಾವ ಮೂಲದಿಂದ ತರಿಸಿಕೊಳ್ಳಬೇಕು, ಅದರ ತಾಂತ್ರಿಕ ವಿಶಿಷ್ಟಗಳೇನಿರಬೇಕು, ಸದರಿ ವಿಶ್ವವಿದ್ಯಾಲಯವೇ ವಿತರಿಸಿದ ಅಂಕಪಟ್ಟಿ ಎಂಬುದನ್ನು ಖಾತರಿಪಡಿಸುವಂತಹ ಅದಕ್ಕೆ ಅಳವಡಿಸಬೇಕಾದ "ಸುರಕ್ಷಾ" ಚಿಹ್ನೆಗಳು ಇತ್ಯಾದಿಗಳು ಖಾಸಗೀಕರಣಗೊಂಡರೆ ಆಗಬಹುದಾದಸಾಧಕ-ಬಾಧಕಗಳನ್ನುಪರೀಕ್ಷಾಂಗವು ಆಮೂಲಾಗ್ರವಾಗಿ ಪರಾಮರ್ಶಿಸಿ ಖಾತರಿ ಪಡಿಸಿಕೊಂಡಬಗ್ಗೆಲೆಕ್ಕತಪಾಸಣೆಗೆಮಾಹಿತಿ ಇರುವುದಿಲ್ಲ. ಹಾಗೂ ದರ ಸಂದಾನದ ಮತ್ತು ದರಕಡಿತಕ್ಕೆ ಪರ್ಯಾಯವಾಗಿ ಪಣವಾಗಿಸಿರುವ ಅಂಕಪಟ್ಟಿಗಳ ವಾಸ್ತವ ಬೆಲೆ ಎಷ್ಟು ಎಂಬುದನ್ನು ಆಡಳಿತ ಅಂದಾಜಿಸಿರುವುದಿಲ್ಲ ಹಾಗೂ ಒಟ್ಟು ಮೌಲ್ಯದಿಂದ ಎಷ್ಟು ಮೊತ್ತ ಉಳಿತಾಯವಾಗಿದೆ ಎಂಬುದನ್ನು ದರಸಂದಾನ ಪ್ರಕ್ರಿಯೆಯಲ್ಲಿ ಎಲ್ಲಿಯೂ ನಮೂದಿಸಿಲ್ಲ.

10. ಸರ್ಕಾರದ ಸಂಸ್ಥೆಗಳಾದ "Center for E-Governance" & "National Information Centre" ಸಂಸ್ಥೆಗಳನ್ನು ಸಂಪರ್ಕಿಸಿ ಇಂತಹ ಸೇವೆಗಳನ್ನು ಪಡೆಯಲು ಪ್ರಯತ್ನಿಸಬಹುದಾಗಿತ್ತು. ಆದರೆ, ಪ್ರಥಮದಲ್ಲಿ ಈ ಪ್ರಯತ್ನವನ್ನು ಮಾಡದೆ ನೇರವಾಗಿ ಖಾಸಗಿ ಸಂಸ್ಥೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ ಹಾಗೂ "Online Examination" ಸಂಬಂಧ ಉನ್ನತ ಶಿಕ್ಷಣ ಇಲಾಖೆ ಹೊರಡಿಸಿರುವ ಆದೇಶ ಸಂಖ್ಯೆ: ED:03:EGH:01, Bangalore, Date: 04.07.2015 ರ ಮಾರ್ಗದರ್ಶಿ ನಿರ್ದೇಶನಗಳನ್ನು ಪಾಲಿಸಿರುವುದಿಲ್ಲ.

11. ಸರ್ಕಾರದ ಆದೇಶ ಸಂಖ್ಯೆ. FD 09/PC4/2004(P-III), Date: 06.08.2005 ರನ್ವಯ ಹತ್ತು ಲಕ್ಷಗಳನ್ನು ಮೀರಿದ "Consultancy Service" ಟೆಂಡರನ್ನು K/C-4 ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟಿನಲ್ಲಿ ನಿರ್ವಹಿಸಬೇಕಿರುತ್ತದೆ. ಆದರೆ, ಇದರ ಪ್ರಕಾರ ಟೆಂಡರು ಪ್ರಕ್ರಿಯೆ ಕೈಗೊಂಡಿರುವುದಿಲ್ಲ.

ಪರೀಕ್ಷಾ ಕಾರ್ಯಗಳನ್ನು ಡಿಜಿಟಲೀಕರಣಗೊಳಿಸುವ ಪ್ರಕ್ರಿಯೆಗೆ ಅಂಕಪಟ್ಟಿ ವಿಷಯವು ಮೂಲ ಷರತ್ತಿನಲ್ಲಿ ಸೇರದ ಸಂದರ್ಭದಲ್ಲಿ, ಸೇರ್ಪಡೆಗೊಳಿಸಿರುವುದು ಪರೀಕ್ಷಾಂಗವು ಈ ಬಗ್ಗೆ ಗಮನವನ್ನು ನೀಡಿಲ್ಲದೆ.ನಂತರದಲ್ಲಿ ದರಸಂದಾನಕ್ಕೆ ಪರ್ಯಾಯ ರೂಪದಲ್ಲಿ ಕರಾರಿಗೆ ಸೇರಿಸಿರುವುದು ಆಕ್ಷೇಪಣೆಯುಕ್ತವಾಗಿದೆ.

ಈ ಸಂಬಂಧ ಲೆಕ್ಕ ವಿಚಾರಣಾ ಸಂಖ್ಯೆ 54/20-21, ದಿನಾಂಕ 08.07.2021 ರಲ್ಲಿ ವಿವರ ಕೋರಿದ್ದರೂ ಸ್ಪಷ್ಟವಾದ ಉತ್ತರ ನೀಡಿರುವುದಿಲ್ಲ. ಆದುದರಿಂದ, ರೂ. 1,03,14,405/- ಗಳನ್ನು ಆಕ್ಷೆಪಣೆಯಲ್ಲಿಡಲಾಗಿದೆ.

**30. ಇತರೆ ಮುಂಗಡಗಳು**

**30.1. ಎ.ಸಿ ಬಿಲ್ಲಿನ ಮುಂಗಡಕ್ಕೆ ಸಲ್ಲಿಸಿರುವ ಎನ್.ಡಿ.ಸಿ ಬಿಲ್ಲುಗಳ ಪರಿಶೀಲನೆಯಲ್ಲಿ ಕಂಡುಬಂದ ನ್ಯೂನತೆಗಳು.**

ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ 2016-17 ರಿಂದ 2019-20ನೇ ಸಾಲಿನವರೆಗೆ ಲೆಕ್ಕಪರಿಶೋಧನೆ ಕೈಗೊಂಡಿದ್ದು, ಎ.ಸಿ ಬಿಲ್ಲಿನಲ್ಲಿ ಪಡೆದಿರುವ ಮುಂಗಡ ಮೊಬಲಗಿಗೆ ಅನುಬಂಧದಲ್ಲಿ ಲಗತ್ತಿಸಿರುವ ಎನ್.ಡಿ.ಸಿ ವೋಚರ್‌ಗಳಿಗೆ ಸಂಬಂಧಿಸಿದಂತೆ, ಈ ಕೆಳಕಂಡ ನ್ಯೂನತೆಗಳನ್ನು ಗಮನಿಸಿದೆ.

1. ಸಾದಿಲ್ವಾರು ವೆಚ್ಚಗಳ ನಿಯಮ 36(6) ಪ್ರಕಾರ ಮುಂಗಡ ಪಡೆದ ಒಂದು ತಿಂಗಳೊಳಗಾಗಿ ಸಲ್ಲಿಸಬೇಕಾಗಿರುತ್ತದೆ. ಎನ್.ಡಿ.ಸಿ ಸಲ್ಲಿಸಲು ವಿಳಂಬವಾಗಿರುತ್ತದೆ.
2. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 2 ಟಿ.ಎಫ್.ಪಿ 2010, ದಿನಾಂಕ:30.04.2010ರ ರೀತ್ಯಾ ರೂ.2.00 ಲಕ್ಷದ ಮೇಲ್ಪಟ್ಟ ಮುಂಗಡಗಳನ್ನು ಎ.ಸಿ ಬಿಲ್ಲುಗಳ ಮೂಲಕ ಪಡೆಯಲು ನಿರ್ಬಂಧವಿರುತ್ತದೆ. ಈ ಬಗ್ಗೆ ಸ್ಪಷ್ಟೀಕರಣ ನೀಡಿರುವುದಿಲ್ಲ
3. ಕ್ರೀಡಾ ಸ್ಪರ್ಧೆಗಳಿಗೆ ನೀಡಿರುವ ಪ್ರಯಾಣ ಭತ್ಯೆ, ದಿನಭತ್ಯೆ ದರಗಳಿಗೆ ಯಾವ ನಿಯಮದ ಮೇಲೆ ಪಾವತಿಸಲಾಗಿದೆ ಹಾಗೂ ವಿಶ್ವವಿದ್ಯಾಲಯವು ರಚಿಸಿಕೊಂಡಿರುವ ಪರಿನಿಯಮ ಒದಗಿಸಿರುವುದಿಲ್ಲ.
4. ಎ.ಸಿ ಬಿಲ್ಲುಗಳ ಮೂಲಕ ಮುಂಗಡ ಪಡೆಯುವ ಮೊದಲೇ ವೆಚ್ಚ ಭರಿಸಿದ್ದು,

30.1)

1. ಬೆಂಗಳೂರು ಉತ್ತರ ವಿಶ್ವವಿದ್ಯಾಲಯವು ಬೆಂಗಳೂರು ವಿಶ್ವವಿದ್ಯಾಲಯದಿಂದ ಬೇರ್ಪಟ್ಟು, ಕೋಲಾರದಲ್ಲಿ ಪ್ರಾರಂಭವಾಗಿದೆ. ಸದರಿ ವಿಶ್ವವಿದ್ಯಾಲಯದಲ್ಲಿ ಖಾಯಂ ನೌಕರರು ಇಲ್ಲದ ಕಾರಣ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿ ವರ್ಗದವರನ್ನು ನೇಮಿಸಿಕೊಂಡು ಕಛೇರಿಯ ಕೆಲಸಗಳನ್ನು ನಿರ್ವಹಿಸಲಾಗುತ್ತಿದೆ. ಕಛೇರಿ ಕೆಲಸಗಳನ್ನು ತಡಮಾಡದೆ ಆಗಿಂದಾಗಲೇ ನಿರ್ವಹಿಸಬೇಕಾಗಿದ್ದರಿಂದ ಹಾಗು ಸದರಿ ಸಿಬ್ಬಂದಿಯವರಿಗೆ ನಿಯಮಗಳ ಅರಿವಿಲ್ಲದ ಕಾರಣ ನಿಯಮಗಳನ್ನು ಪಾಲಿಸಿಲ್ಲ.

   ಇನ್ನು ಮುಂದೆ ಸದರಿ ನಿಯಮಗಳನ್ನು ತಪ್ಪದೆ ಪಾಲಿಸಲಾಗುವುದು. ಸದರಿ ವಿಷಯವನ್ನು ತಮ್ಮ ಅವಗಾಹನೆಗೆ ಸಲ್ಲಿಸಿದೆ.

2. ಕಂಡಿಕೆ 30.1 ರ ಅನುಬಂಧ 33 ರಲ್ಲಿ ಎ.ಸಿ. ಬಿಲ್ಲಿನ ಮುಂಗಡಕ್ಕೆ ಸಲ್ಲಿಸಿರುವ ಎನ್.ಡಿ.ಸಿ ಬಿಲ್ಲುಗಳ ವಿವರಗಳ ಪಟ್ಟಿಯಲ್ಲಿ ನಮೂದಿಸಿರುವ ಎ.ಸಿ. ಬಿಲ್ಲುಗಳಲ್ಲಿ ರೂ.2.00 ಲಕ್ಷದ ಮೇಲ್ಪಟ್ಟ ಯಾವುದೇ ಎ.ಸಿ. ಬಿಲ್ಲುಗಳು ಇರುವುದಿಲ್ಲ. ಇನ್ನು ಮುಂದೆ ಇಂತಹ ಪ್ರಕರಣಗಳು ಬಂದಲ್ಲಿ ಸರ್ಕಾರದ ಆದೇಶ ಸಂಖ್ಯೆ:FD 2 TFC 2010 ದಿನಾಂಕ:30.04.2010 ರಂತೆ ಕ್ರಮವಹಿಸಲಾಗುವುದು.

3. ಕ್ರೀಡಾ ಸ್ಪರ್ಧೆಗಳಿಗೆ ಕರ್ನಾಟಕ ನಾಗರಿಕ ಸೇವಾ ನಿಯಮ (KCSR Rules 1958) 449 ಮತ್ತು 450 ನಿಯಮದಂತೆ ವಾಸಸ್ಥಳದಿಂದ ಕ್ರಿಡಾಂಗಣ ಸ್ಥಳಕ್ಕೆ ಬಂದು ಹೋಗಲು ಬಸ್ಸಿನಲ್ಲಿ ಪ್ರಯಾಣ ಮಾಡಿದ್ದಕ್ಕೆ ಪ್ರಯಾಣ ಭತ್ಯೆ ಹಾಗೂ ದಿನದ ಭತ್ಯೆಯನ್ನು ಕಾನೂನು ರೀತ್ಯಾ ಪಾವತಿಸಲಾಗಿದೆ ಹಾಗೂ ಬೆಂಗಳೂರು ವಿಶ್ವವಿದ್ಯಾಲಯ ರಚಿಸಿಕೊಂಡಿರುವ ನಿಯಮದ ಪ್ರಕಾರ ಕ್ರಮವಹಿಸಲಾಗಿದೆ.

| | |
|---|---|
| ಸಾದಿಲ್ವಾರು ವೆಚ್ಚದ ನಿಯಮ 36(2) ಪ್ರಕಾರ ಕೂಡಲೇ ಬಟವಾಡೆಗೆ ಬೇಕಾಗಿರುವ ಹಣವನ್ನು ಬಿಟ್ಟು ಬೇರೆ ಇನ್ನಾವುದೇ ಮುಂಗಡ ಹಣವನ್ನು ತೆಗೆಯುವಂತಿಲ್ಲ. ಆದ್ದರಿಂದ ಮುಂಗಡ ಕೊಡುವ ಉದ್ದೇಶವೇ ವಿಫಲವಾಗಿರುವುದು ಕಂಡುಬಂದಿರುತ್ತದೆ.<br>5. ಅನುಬಂಧದಲ್ಲಿ ಕಾಣಿಸಿರುವ ಎ.ಸಿ ಬಿಲ್ಲು ಪಾವತಿಗಳಿಗೆ ಎನ್.ಡಿ.ಸಿ ವೋಚರಗಳನ್ನು ಸಲ್ಲಿಸಿರುವುದಿಲ್ಲ.<br><br>ಮೇಲ್ಕಂಡ ಎನ್.ಡಿ.ಸಿ.ಯಲ್ಲಿರುವ ನ್ಯೂನತೆಗಳಿಗೆ ಸ್ಪಷ್ಟೀಕರಣವನ್ನು ಲೆಕ್ಕಪರಿಶೋಧನೆಗೆ ಒದಗಿಸಲು ವಿಚಾರಣಾ ಪತ್ರ ಸಂಖ್ಯೆದಿನಾಂಕ:49/20-21,50/20-21,51/20-21 52/20-21,53/20-21,ದಿನಾಂಕ:01.07.2021/06.07.2021ರಲ್ಲಿ ವಿವರಣೆ ಕೋರಲಾಗಿದ್ದು,ಸ್ಪಷ್ಟೀಕರಣ ನೀಡಿರುವುದಿಲ್ಲ. ಸದರಿ ನಿಯಮದ ಉಲ್ಲಂಘನೆಯಾಗಿರುವುದರಿಂದ ರೂ.9,41,130/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳನ್ನು **ಅನುಬಂಧ-33** ರಲ್ಲಿ ಲಗತ್ತಿಸಿದೆ. | 4. ಕೆಲವು ಸಂದರ್ಭಗಳಲ್ಲಿ ತುತಾರ್ಗಿ ಹಣ ಪಾವತಿಸಬೇಕಾದ ಪ್ರಸಂಗಗಳು ಉದ್ಭವಿಸಿದ್ದರಿಂದ ಅಂತಹ ಸಂಧರ್ಭಗಳಲ್ಲಿ AC ಬಿಲ್ಲಿನಲ್ಲಿ ಡ್ರಾ ಮಾಡುವ ಮೊದಲೇ ಪಾವತಿಸಿದ್ದು, ಅಂತಹ ಪಾವತಿಗಳನ್ನು AC ಬಿಲ್ಲಿನಲ್ಲಿ ಡ್ರಾ ಮಾಡುವಾಗ ಸದರಿ ಮೊತ್ತವನ್ನು ಹೊಂದಾಣಿಕೆ ಮಾಡಿಕೊಂಡಿರುತ್ತದೆ.<br><br>ಸಾದಿಲ್ವಾರು ನಿಯಮದ ಪ್ರಕಾರ ಬಟವಾಡೆಗೆ ಬೇಕಾಗಿರುವ ಹಣವನ್ನು ಮಾತ್ರ AC ಬಿಲ್ಲಿನಲ್ಲಿ ಡ್ರಾ ಮಾಡಲಾಗಿದೆ.<br><br>5. ಅನುಬಂಧ 33 ರಲ್ಲಿ ಕಾಣಿಸಿರುವ ಎ.ಸಿ. ಬಿಲ್ಲುಗಳಿಗೆ NDC ವೋಚರ್‌ಗಳನ್ನು ಸಲ್ಲಿಸಿಲ್ಲವೆಂದು ಆಕ್ಷೇಪಣೆ ಮಾಡಲಾಗಿದೆ. ಅನುಬಂಧದ ಕ್ರಮ ಸಂಖ್ಯೆ (2) ರಿಂದ (15) ರವರೆಗೆ ಒಟ್ಟು 14 NDC ಬಿಲ್ಲುಗಳ ಜೆರಾಕ್ ಪ್ರತಿಗಳನ್ನು ಹಾಗು ಸಂಬಂಧಪಟ್ಟ ಆದೇಶದ ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ತಮ್ಮ ಮಾಹಿತಿಗಾಗಿ ಹಾಗು ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.<br><br>ಇನ್ನು ಮುಂದೆ ಸಕಾಲಕ್ಕೆ ಆಡಿಟ್ ವಿಚಾರಣಾ ಪತ್ರಗಳಿಗೆ ಆಗಿಂದಾಗಲೇ ಉತ್ತರಿಸಲು ಕ್ರಮವಹಿಸಲಾಗುವುದು.<br><br>ಮೇಲ್ಕಂಡ ಎಲ್ಲಾ ಅಂಶಗಳನ್ನು ತಮ್ಮ ಅವಗಾಹನೆಗೆ ಸಲ್ಲಿಸಲಾಗಿದೆ.<br><br>ಆದುದರಿಂದ ದಯವಿಟ್ಟು ಸದರಿ ಆಡಿಟ್ ಕಂಡಿಕೆಯನ್ನು, ಆಡಿಟ್ ವರದಿಯಿಂದ ಕೈ ಬಿಡುವಂತೆ ತಮ್ಮಲ್ಲಿ ಕೋರಿದೆ. |
| **34. ಪಿಂಚಣಿ ಸೌಲಭ್ಯ ಯೋಜನೆಗಳು**<br><br>**34.1. Staffliability ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಶಿಲ್ಕು ಉಳಿಸಿಕೊಂಡಿರುವುದು**<br><br>2018-19ನೇ ಮತ್ತು 2019-20ನೇ ಸಾಲಿನ ಸ್ವೀಕೃತಿ ಮತ್ತು ಪಾವತಿ ತಃಖ್ತೆಗಳನ್ನು ಪರಿಶೀಲಿಸಿದಾಗ ನೌಕರರ ಸಂಬಂಧ ಪಾವತಿಗಳಾದ GIS, GIF, LIC, KGID, NPS ಮೊತ್ತಗಳನ್ನು ಸಕಾಲದಲ್ಲಿ ಸಂಬಂಧಪಟ್ಟ ಇಲಾಖೆಗಳಿಗೆ ಪಾವತಿ ಮಾಡದೇ ಶಿಲ್ಕು | 34.1) |

ಉಳಿಸಿಕೊಳ್ಳಲಾಗಿದೆ.ಈ ಸಂಬಂಧ ಲೆಕ್ಕತಪಾಸಣಾ ಪತ್ರ ಸಂಖ್ಯೆ. 54/20-21, ದಿನಾಂಕ: 17.07.2021 ರಲ್ಲಿ ವಿವರ ಕೋರಿದ್ದರೂ ಸಮರ್ಪಕವಾದ ವಿವರಣೆ ದೊರೆತಿರುವುದಿಲ್ಲ. ಆದುದರಿಂದ, ಶಾಸನಾತ್ಮಕ ಕಟಾವಣೆಗಳನ್ನು ಸಂಬಂಧಪಟ್ಟ ಇಲಾಖೆಗಳಿಗೆ ಜಮೆ ಮಾಡುವವರೆಗೂ ರೂ. 2,84,237/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

ವಿವರ ಈ ಕೆಳಕಂಡಂತಿದೆ.

| ಕ್ರ ಸಂ | ವಿವರ | ಮೊತ್ತ |
|---|---|---|
| 1 | ಕೋ ಆಪರೇಟಿವ್ ಸೊಸೈಟಿ ಸಾಲದ ಮೊತ್ತ | 28350 |
| 2 | ಪಿಂಚಣಿ | 27482 |
| 3 | ಜಿಐಎಸ್ | 3300 |
| 4 | ಜಿಪಿಎಸ್ | 15700 |
| 5 | ಕೆಜಿಐಡಿ | 85700 |
| 6 | ಎಲ್‌ಐಸಿ | 102555 |
| 7 | ಕೆಜಿಐಡಿ ಲೋನ್ | 21150 |
| | ಒಟ್ಟು | 284237 |

**ವಿತ್ತಾಧಿಕಾರಿಗಳು,**
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ,
ಟಮಕ, ಕೋಲಾರ-563103

# ವಸೂಲಾತಿಯ ಕಂಡಿಕೆಗಳು

## ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ 2016-17 ರಿಂದ 2019-20ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಆಡಿಟ್ ವಸೂಲಾತಿಯ ವಿವರ

| ಕ್ರ. ಸಂ | ಕಂಡಿಕೆ | ವಿವರ | ವಸೂಲಾತಿ (ರೂ.ಗಳಲ್ಲಿ) | ಪುಟದ ಸಂಖ್ಯೆ |
|---|---|---|---|---|
| 1 | 11.2 | ಅಲ್ಪಾವಧಿ ಠೇವಣಿಗಳ ಬಡ್ಡಿಯ ಮೇಲೆ ಆದಾಯ ತೆರಿಗೆಯನ್ನು ಕಟಾಯಿಸಿ ಪಾವತಿಸಿರುವುದು | 6,92,163/- | 1 |
| 2 | 11.3 | ವಿಶ್ವವಿದ್ಯಾಲಯದ ಉಳಿತಾಯ ಖಾತೆಗಳಲ್ಲಿ ಬ್ಯಾಂಕ್‌ನಿಂದ ಕಟಾವಣೆ ಮಾಡಿರುವುದು. | 77,046/- | 1 |
| 3 | 11.4 | 2017-18 ಮತ್ತು 2019-20ನೇ ಸಾಲಿನವರೆಗೆ ಸಂಯೋಜನೆ ಶುಲ್ಕದ ಸ್ವೀಕೃತಿಗಳನ್ನು ಬ್ಯಾಂಕ್ ಖಾತೆಯೊಂದಿಗೆ ಲೆಕ್ಕ ಸಮನ್ವಯಗೊಳಿಸದಿರುವುದು ಹಾಗೂ ಡಿ.ಸಿ.ಬಿ ನಿರ್ವಹಿಸದಿರುವುದು ಮತ್ತು ಜಿ.ಎಸ್.ಟಿ ಸಂಗ್ರಹಣೆ ಮಾಡದಿರುವುದು | 2,63,48,679/- | 2 |
| 4 | 11.6 | ಸಂಯೋಜನಾ ಶುಲ್ಕಕ್ಕೆ ಸಂಬಂಧಿಸಿದಂತೆ, ತಡಪಾವತಿ ಶುಲ್ಕ ವಸೂಲಾತಿ ಮಾಡದಿರುವುದು | 2,17,000/- | 5 |
| 5 | 11.7 | ವಿಶ್ವವಿದ್ಯಾಲಯದ ಕಾಲೇಜುಗಳಿಂದ ಸಂಯೋಜನಾ ಶುಲ್ಕ ವಸೂಲಿಸದಿರುವುದು. | 20,18,558/- | 6 |
| 6 | 11.8 | 2017-18 ರಿಂದ 2019-20ನೇ ಸಾಲಿನವರೆಗೆ ಪರೀಕ್ಷಾ ಶುಲ್ಕದ ಸ್ವೀಕೃತಿಗಳನ್ನು ಬ್ಯಾಂಕ್ ಖಾತೆಯೊಂದಿಗೆ ಲೆಕ್ಕ ಸಮನ್ವಯಗೊಳಿಸದಿರುವುದು. | 1,74,81,084/- | 7 |
| 7 | 11.9 | ಬಿ.ಎಡ್ ಸಂಯೋಜಿತ ಕಾಲೇಜುಗಳ ಪ್ರವೇಶಾತಿ ಅನುಮೋದನೆ ಶುಲ್ಕ ವಿಳಂಬವಾಗಿ ಪಾವತಿಸಿರುವ ಕಾಲೇಜುಗಳಿಂದ ದಂಡ ಶುಲ್ಕ ವಸೂಲಿಸದಿರುವುದು | 2.62.000/- | 9 |
| 8 | 11.10 | ಬಿ.ಎಡ್ ಕಾಲೇಜುಗಳ ಸಂಯೋಜನಾ ಶುಲ್ಕಕ್ಕೆ ಸಂಬಂಧಿಸಿದಂತೆ, ತಡಪಾವತಿ ಶುಲ್ಕ ವಸೂಲಿಸಿರುವುದು | 29,000/- | 10 |
| 9 | 11.11 | ವಿಶ್ವವಿದ್ಯಾಲಯದ ಬಿ.ಎಡ್., ಕಾಲೇಜುಗಳಿಂದ ಪ್ರವೇಶಾತಿ ಶುಲ್ಕ ವಸೂಲಿಸದಿರುವುದು | 76,133/- | 10 |
| 10 | 11.12 | ವಿಶ್ವವಿದ್ಯಾಲಯದ ಬಿ.ಎಡ್., ಕಾಲೇಜುಗಳಿಂದ ಪ್ರವೇಶಾತಿ ಶುಲ್ಕ ವಸೂಲಿಸದಿರುವುದು | 11,091/- | 11 |
| 11 | 11.13 | 2018-19 ಮತ್ತು 2021-21ನೇ ಸಾಲಿನವರೆಗೆ ಪ್ರವೇಶಾತಿ ಶುಲ್ಕದ ಸ್ವೀಕೃತಿಗಳನ್ನು ಬ್ಯಾಂಕ್ ಖಾತೆಯೊಂದಿಗೆ ಲೆಕ್ಕ ಸಮನ್ವಯಗೊಳಿಸದಿರುವುದು ಹಾಗೂ ಡಿ.ಸಿ.ಬಿ ನಿರ್ವಹಿಸದಿರುವುದು. | 1,03,31,346/- | 11 |
| 12 | 11.14 | ಯು.ಜಿ ವಿದೇಶಿ ವಿದ್ಯಾರ್ಥಿಗಳಿಂದ ಅರ್ಹತಾ ಶುಲ್ಕವನ್ನು ವಸೂಲಿಸದಿರುವುದು. | 2,51,860/- | 14 |
| 13 | 11.15 | ಯು.ಜಿ, ಪಿ.ಜಿ, ವಿದ್ಯಾರ್ಥಿಗಳಿಂದ ಕ್ರೀಡಾ ಶುಲ್ಕ ವಸೂಲಾತಿ ಮಾಡದೆ ಇರುವುದು. | 5,77,312/- | 14 |
| 14 | 11.16 | ಪಿ.ಜಿ, ಪ್ರವೇಶಾತಿಗೆ ಸಂಬಂದಿಸಿದಂತೆ ದಂಡ ವಸೂಲಿಸದಿರುವುದು. | 2,48,000/- | 15 |
| 15 | 11.17 | ಪಿ.ಜಿ ಕಾಲೇಜುಗಳಿಂದ ಕ್ರೀಡಾ ಶುಲ್ಕ ವಸೂಲಿಸದಿರುವುದು. | 4,53,450/- | 15 |
| 16 | 11.19 | ಯುನಿವರ್ಸಿಟಿ ಕೋಟಾದಡಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಪ್ರವೇಶಾತಿ ಶುಲ್ಕ ಪಾವತಿ ಮಾಡದಿರುವುದರ ಬಗ್ಗೆ ಮಾಹಿತಿ ಇಲ್ಲದಿರುವುದು | 15,92,300/- | 16 |
| 17 | 11.21 | ವಿಶ್ವವಿದ್ಯಾಲಯದ ಯು.ಜಿ ಮತ್ತು ಪಿ.ಜಿ ಕಾಲೇಜುಗಳಿಂದ ಪ್ರವೇಶಾತಿ ಅನುಮೋದನೆ ಶುಲ್ಕ ವಸೂಲಿಸದಿರುವುದು | 20,74,691/- | 16 |
| 18 | 11.22 | ಪಿ.ಜಿ ವಿದೇಶಿ ವಿದ್ಯಾರ್ಥಿಗಳ ಹೆಚ್ಚುವರಿ ಅರ್ಹತಾ ಶುಲ್ಕ ವಸೂಲಿಸದಿರುವುದು | 11,32,120/- | 17 |
| 19 | 12.1 | ಕೆಮಿಕಲ್ಸ್ ಖರೀದಿ ಟೆಂಡರ್ ಗೆ ಸಂಬಂಧಿಸಿದ ನ್ಯೂನತೆಗಳು | 6,582/- | 18 |
| 20 | 12.6 | ವಿಶ್ವವಿದ್ಯಾಲಯಕ್ಕೆ ಪೀಠೋಪಕರಣಾ ಖರೀದಿಗೆ ಸಂಬಂಧಿಸಿದಂತೆ ಜಿ.ಎಸ್.ಟಿ ಕಟಾವಣೆ ಮಾಡದಿರುವುದು | 3,23,843/- | 19 |
| 21 | 12.7 | ಪರೀಕ್ಷಾ ಉತ್ತರ ಪತ್ರಿಕೆಗಳ ಮುದ್ರಣಕ್ಕೆ ಅಲ್ಪಾವಧಿ ಟೆಂಡರ್ ಗೆ ಸಂಬಂಧಿಸಿದ ನ್ಯೂನತೆಗಳು | 1,31,250/- | 20 |

| ಆಡಿಟ್ ವರದಿಯಲ್ಲಿ ಮಾಡಿರುವ ಆಕ್ಷೇಪಣೆ | ಆಡಿಟ್ ವರದಿಯ ಆಕ್ಷೇಪಣೆಗೆ ಉತ್ತರ |
| --- | --- |
| **11.2 ಅಲ್ಪಾವಧಿ ಠೇವಣಿಗಳ ಬಡ್ಡಿಯ ಮೇಲೆ ಆದಾಯ ತೆರಿಗೆಯನ್ನು ಕಟಾಯಿಸಿ ಪಾವತಿಸಿರುವ ಮೊತ್ತ.**<br><br>2018-19ನೇ ಸಾಲಿನಲ್ಲಿ ಅಲ್ಪಾವಧಿ ಠೇವಣಿಗಳ ಬಡ್ಡಿಯ ಮೇಲೆ ಆದಾಯ ತೆರಿಗೆ ಕಟಾಯಿಸಿ ಪಾವತಿಸಿರುವುದು ಕಂಡುಬರುತ್ತದೆ.<br>ಆದಾಯ ತೆರಿಗೆಯ ಕಾಯ್ದೆ 1961 ರ ನಿಯಮ 10(23c)(3ab) ರ ಅನ್ವಯ ವಿಶ್ವವಿದ್ಯಾಲಯದ ಆದಾಯಗಳಿಗೆ ತೆರಿಗೆ ವಿನಾಯಿತಿ ಇರುತ್ತದೆ, ಆದ್ದರಿಂದ ಈ ಮೊತ್ತದ ಪಾವತಿಯು ವಿಶ್ವವಿದ್ಯಾಲಯಕ್ಕೆ ಉಂಟಾದ ನಷ್ಟವಾಗಿರುತ್ತದೆ. ಆದ್ದರಿಂದ, ಕೂಡಲೇ ಈ ಮೊತ್ತವನ್ನು ವಸೂಲಿಸಲು ಕ್ರಮ ಕೈಗೊಳ್ಳಲು ಲೆಕ್ಕ ವಿಚಾರಣಾ ಪತ್ರ ಸಂಖ್ಯೆ:57/20/21 ದಿನಾಂಕ:15.07.2021 ರಲ್ಲಿ ಕೋರಲಾಗಿತ್ತು. ಈ ಸಂಬಂಧ ಯಾವುದೇ ಮಾಹಿತಿಯನ್ನು ನೀಡಿಲ್ಲವಾದ್ದರಿಂದ, ಪಾವತಿಸಿರುವ ಮೊತ್ತ ರೂ.6,92,163/- ಗಳನ್ನು ವಸೂಲಿಸಿ ವಿಶ್ವವಿದ್ಯಾಲಯದ ನಿಧಿಗೆ ಜಮೆ ಮಾಡಲು ಸೂಚಿಸಿದೆ. ವಿವರಗಳನ್ನು **ಅನುಬಂಧ- 03** ರಲ್ಲಿ ಕಾಣಿಸಲಾಗಿದೆ. | 11.2) ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಅಲ್ಪಾವಧಿ ಠೇವಣಿಗಳಿಗೆ ಲಭ್ಯವಾಗಿರುವ ಬಡ್ಡಿಯನ್ನು ಆಧರಿಸಿ, ಬ್ಯಾಂಕ್ ಕಟಾಯಿಸಿರುವ ಆದಾಯ ತೆರಿಗೆಯನ್ನು ಹಿಂತಿರುಗಿಸಲು 2018-19 ರಿಂದ 2021-22 ರ ವರೆಗೆ ಕಟಾಯಿಸಿರುವ ಎಲ್ಲಾ ಮೊತ್ತವನ್ನು ಹಿಂತಿರುಗಿಸಲು ಆದಾಯ ತೆರಿಗೆ ಇಲಾಖೆಗೆ, ಆದಾಯ ತೆರಿಗೆ Filling ಮಾಡುವ ಸಂಧರ್ಭದಲ್ಲಿ claim ಮಾಡಿದ್ದು, ಆದಾಯ ತೆರಿಗೆ ಇಲಾಖೆ ನಮಗೆ ಹಿಂತಿರುಗಿಸುವ ನಿರೀಕ್ಷೆಯಿದೆ. |
| **11.3.ವಿಶ್ವವಿದ್ಯಾಲಯದ ಉಳಿತಾಯ ಖಾತೆಗಳಲ್ಲಿ ಬ್ಯಾಂಕ್‌ನಿಂದ ಕಟಾವಣೆ ಮಾಡಿರುವುದು**<br><br>2016-17,2017-18, 2018-19 ಮತ್ತು 2019-20 ನೇ ಸಾಲಿನ ಸ್ವೀಕೃತಿ ಮತ್ತು ಪಾವತಿ ತಃಖ್ತೆಯನ್ನು ಪರಿಶೀಲಿಸಲಾಗಿ Bank Chargesಎಂದು ಒಟ್ಟು ಮೊತ್ತ ರೂ.77,046/- ಗಳನ್ನು ಕಟಾಯಿಸಿರುತ್ತಾರೆ. Proceedings of Government of Karnataka letter No.FD/367/SDA/2050 Dated: 09.11.2015 ರ ಸುತ್ತೋಲೆಯಲ್ಲಿ ಯಾವುದೇ ಬ್ಯಾಂಕ್‌ಗಳಲ್ಲಿ ಬ್ಯಾಂಕ್ ಖಾತೆ ನಿರ್ವಹಣೆ ಹಾಗೂ ವ್ಯವಹಾರಗಳಿಗೆ ಎಲ್ಲಾ ರೀತಿಯ ಶುಲ್ಕಗಳಿಗೆ ವಿನಾಯಿತಿ ನೀಡುವಂತಹ ಬ್ಯಾಂಕ್ ಖಾತೆಗಳಲ್ಲಿ ಖಾತೆ ನಿರ್ವಹಣೆ ಮಾಡಬೇಕಿರುತ್ತದೆ. ವಿಶ್ವವಿದ್ಯಾಲಯವು ಎಲ್ಲಾ ಹಣಕಾಸಿನ ವ್ಯವಹಾರವನ್ನು ಎಸ್.ಬಿ.ಐ/ಕೆನರಾ ಬ್ಯಾಂಕಿನಲ್ಲಿ ನಿರ್ವಹಿಸುತ್ತಿದ್ದು, ಎಲ್ಲಾ ಶುಲ್ಕಗಳ ಕಡತಗಳಿಂದ ವಿನಾಯಿತಿ ನೀಡಬೇಕಿರುತ್ತದೆ.ಈ ನಿಯಮದಅನುಸಾರಯಾವುದೇ ಫೀ ಅಥವಾ ಕಮಿಷನ್‌ಗಳನ್ನು ವಿಧಿಸುವಂತಿಲ್ಲ. ಆದ್ದರಿಂದ ಕಟಾಯಿಸಿರುವ ಮೊತ್ತವನ್ನು ಬ್ಯಾಂಕ್‌ನಿಂದ ವಸೂಲಿಸಿ ಖಾತೆಗೆ ಜಮೆ ಮಾಡುವವರೆಗೂ ವಸೂಲಾತಿಗೆ ಸೂಚಿಸಿದೆ. | 11.3) ಈ ಕಛೇರಿಯ ಪತ್ರದ ದಿನಾಂಕ:27.04.2022 ರಲ್ಲಿ ವ್ಯವಸ್ಥಾಪಕರು, ಕೆನರಾ ಬ್ಯಾಂಕ್, ಟಮಕ, ಕೋಲಾರ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹೊಸ ಬಡಾವಣೆ, ಕೋಲಾರ ಇವರುಗಳಿಗೆ ಪತ್ರಗಳನ್ನು ಬರೆದು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರದ SB ಖಾತೆಯಲ್ಲಿರುವ ಮೊತ್ತದಲ್ಲಿ Bank Charges ಗಾಗಿ ರೂ.77046/- ಗಳನ್ನು ಕಟಾವು ಮಾಡಿರುವುದಾಗಿ, ಈ ಮೊತ್ತವನ್ನು ಬ್ಯಾಂಕ್‌ಗಳಿಂದ ವಸೂಲಿಸಿ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಖಾತೆಗೆ ಜಮಾ ಮಾಡುವಂತೆ ಆಡಿಟ್ ವರದಿಯಲ್ಲಿ ಆಕ್ಷೇಪಣೆ ಮಾಡಿರುವುದಾಗಿ ಬ್ಯಾಂಕ್‌ಗಳಿಗೆ ಪತ್ರದ ಮುಖೇನ ತಿಳಿಸಲಾಗಿದೆ (ಸದರಿ ಪತ್ರಗಳ ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿದೆ).<br><br>ಸದರಿ ಬ್ಯಾಂಕ್‌ನವರು ಆಡಿಟ್ ವರದಿಯಲ್ಲಿ ನಮೂದಿಸಿರುವ ಸರ್ಕಾರದ ಆದೇಶ ಪತ್ರ Proceeding of Government of Karnataka Letter No.FD/367/SDA/2050 dt:09.11.2015 ರ ಪ್ರತಿ ಹಾಗೂ ವಸೂಲಾತಿಗೆ ಸೂಚಿಸಿರುವ ಆಯಾ ಬ್ಯಾಂಕಿನ ಮೊತ್ತದ ವಿವರಗಳ ತಃಖ್ತೆಯನ್ನು ನೀಡುವಂತೆ ಕೋರಿದ್ದಾರೆ. ಈ ವಿವರಗಳನ್ನು ತಮ್ಮಿಂದ ನೀಡಿದ್ದಲ್ಲಿ, ಸದರಿ ಮೊತ್ತವನ್ನು ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರ SB ಖಾತೆಗೆ ಜಮಾ |

**11.4 2017–18 ಮತ್ತು 2019–20ನೇ ಸಾಲಿನವರೆಗೆ ಸಂಯೋಜನೆ ಶುಲ್ಕದ ಸ್ವೀಕೃತಿಗಳನ್ನು ಬ್ಯಾಂಕ್ ಖಾತೆಯೊಂದಿಗೆ ಲೆಕ್ಕ ಸಮನ್ವಯಗೊಳಿಸದಿರುವುದು ಹಾಗೂ ಡಿ.ಸಿ.ಬಿ ನಿರ್ವಹಿಸದಿರುವುದುಮತ್ತು ಜಿ.ಎಸ್.ಟಿ ಸಂಗ್ರಹಣೆ ಮಾಡದಿರುವುದು**

ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ 2017–18 ಮತ್ತು 2019–20ನೇ ಸಾಲಿನವರೆಗಿನ ಕಾಲೇಜುಗಳ ಸಂಯೋಜನಾ ನವೀಕರಣ/ಹೊಸ ಕೋರ್ಸಿನ ಸಂಯೋಜನೆ/ವಿದ್ಯಾರ್ಥಿ ಪ್ರಮಾಣದ ಹೆಚ್ಚಳ/ ಶಾಶ್ವತ ಸಂಯೋಜನೆ/ಶಾಶ್ವತ ಸಂಯೋಜನಾ ನವೀಕರಣ/ಸ್ಥಳ/ಹೆಸರು ಬದಲಾವಣೆ ಅಧಿಸೂಚನೆಗಳು, ಬೇಡಿಕೆ ಸ್ವೀಕೃತಿ ಬಾಕಿ ವಿವರ, ಕಡತ, ವಹಿ ಹಾಗೂ ಬ್ಯಾಂಕ್ ಖಾತೆಯೊಂದಿಗೆ ಲೆಕ್ಕಸಮನ್ವಯಗೊಳಿಸಿದ ದೃಢೀಕೃತ ಪ್ರತಿಯನ್ನು ವಿತ್ತಾಧಿಕಾರಿಗಳ ಸಹಿಯೊಂದಿಗೆ ಲೆಕ್ಕಪರಿಶೋಧನೆಗೆ ಒದಗಿಸಲು ವಿಚಾರಣಾ ಪತ್ರ ಸಂಖ್ಯೆ:, 79/20–21,ದಿನಾಂಕ: 18.08.2021ರಲ್ಲಿ ವಿವರಣೆ ಕೋರಲಾಗಿತ್ತು,ಆದರೆ ವಿಶ್ವವಿದ್ಯಾಲಯವು ಯಾವುದೇ ಅನುಸರಣೆ ಒದಗಿಸಿರುವುದಿಲ್ಲ, ಕರ್ನಾಟಕ ಆರ್ಥಿಕ ಸಂಹಿತೆ 1958 ಅನುಚ್ಛೇಧ 34ರ ರೀತ್ಯಾ ನಿಯಂತ್ರಣಾಧಿಕಾರಿಯು ವಸೂಲು ಮಾಡಿದ ಮತ್ತು ಸಂದಾಯ ಮಾಡಿದ ಮೊಬಲಗುಗಳ ಬಗ್ಗೆ ಬೇಡಿಕೆ, ವಸೂಲಿ, ಶಿಲ್ಕು ಲೆಕ್ಕಪತ್ರವನ್ನು ಮತ್ತು ತಃಖ್ತೆಗಳನ್ನು ಸಿದ್ಧಪಡಿಸಿ ಪ್ರಮಾಣೀಕರಿಸಬೇಕಾಗಿರುತ್ತದೆ ಹಾಗೂ ಅನುಚ್ಛೇದ 34(2) ರೀತ್ಯ ವಾಸ್ತವಿಕ ಜಮೆಗಳೊಂದಿಗೆ ಹೋಲಿಸಿ, ಸ್ವೀಕೃತಿಗಳ ಸಮನ್ವಯ ಪತ್ರವನ್ನು ತಯಾರಿಸಬೇಕಾಗುತ್ತದೆ.

2017–18, 2018–19, 2019–20ನೇ ಸಾಲಿನಲ್ಲಿ ಒಟ್ಟು ಕ್ರಮವಾಗಿ215,250 ಮತ್ತು 288(ಲೆಕ್ಕಪರಿಶೋಧನೆಗೆ ನೀಡಿರುವ ಮಾಹಿತಿ) ಕಾಲೇಜುಗಳಿಂದ ಬರಬೇಕಾದ ಸಂಯೋಜನಾ ಶುಲ್ಕ ಬೇಡಿಕೆಯ ಪಟ್ಟಿ ಮತ್ತು ಸಂಗ್ರಹ ವಾಗಿರುವ ಸಂಯೋಜನೆ ಶುಲ್ಕದ ವಿವರವನ್ನು ಮಾತ್ರ

ಮಾಡಲಾಗುವುದೆಂದು ಮೌಖಿಕವಾಗಿ ಬ್ಯಾಂಕ್‌ಗಳ ವ್ಯವಸ್ಥಾಪಕರು ತಿಳಿಸಿರುತ್ತಾರೆ. ಆದರೆ ಆಡಿಟ್ ವರದಿಯನ್ನು ಪರಿಶೀಲಿಸಲಾಗಿ, ಆದೇಶದ ಪ್ರತಿ ಮತ್ತು ಮೊತ್ತದ ವಿವರಗಳ ತಃಖ್ತೆ ಲಗತ್ತಿಸಿಲ್ಲ.

ಆದುದರಿಂದ ತಾವು ದಯಮಾಡಿ, ಸರ್ಕಾರದ ಆದೇಶದ ಪ್ರತಿ ಹಾಗೂ ರೂ.77046/-ಗಳ ವಿವರದ ಪಟ್ಟಿಯನ್ನು ಸಲ್ಲಿಸಬೇಕಾಗಿ ತಮ್ಮಲ್ಲಿ ಕೋರಲಾಗಿದೆ.

ಇನ್ನು ಮುಂದೆ ಆಗಿಂದಾಗಲೇ ಪರಿಶೀಲಿಸಿ ಈ ಬಗ್ಗೆ ಕ್ರಮವಹಿಸಲಾಗುವುದು.

11.4) ಬೆಂಗಳೂರು ವಿಶ್ವವಿದ್ಯಾಲಯದ 2017-18 ರಿಂದ 2020-21 ನೇ ಸಾಲಿನವರೆಗಿನ ಕಾಲೇಜುಗಳ ಸಂಯೋಜನ ಶುಲ್ಕ, ನವೀಕರಣ, ಹೊಸ ಕೋರ್ಸಿನ ಸಂಯೋಜನೆ ಇತ್ಯಾದಿಗಳನ್ನು ಕಾಲೇಜುಗಳಿಂದ ವಸೂಲಿ ಮಾಡಿ ಜಮಾ ಮಾಡಲಾಗಿದೆ.

ಸಂಯೋಜನ ಶುಲ್ಕದ ಬೇಡಿಕೆ, ಸ್ವೀಕೃತಿ ಹಾಗೂ ಬಾಕಿಯ (DCB) ವಿವರಗಳನ್ನು ಬ್ಯಾಂಕ್ ಖಾತೆಯೊಂದಿಗೆ ಲೆಕ್ಕ ಸಮನ್ವಯಗೊಳಿಸಿ ವಿತ್ತಾಧಿಕಾರಿಗಳು ಧೃಡೀಕರಿಸಿರುತ್ತಾರೆ.

ಸಂಯೋಜನಾ ಶುಲ್ಕದ ಬೇಡಿಕೆ ವಸೂಲಾತಿ ಹಾಗೂ ಬಾಕಿಯ (2018-19 ರಿಂದ 2020-21) ವಿವರಗಳು ಈ ಕೆಳಕಂಡಂತಿದೆ.

1. 2018-19 ರ ಸಾಲಿನ ಸಂಯೋಜನಾ ಶುಲ್ಕದ ಬೇಡಿಕೆ, ವಸೂಲಾತಿ ಮತ್ತು ಬಾಕಿಯ ವಿವರಗಳು (DCB).

| **ಕಾಲೇಜುಗಳ ಸಂಖ್ಯೆ** | **ಒಟ್ಟು ಬೇಡಿಕೆ** | **ವಸೂಲಿ ಮಾಡಿರುವುದು (Including fines & Penalty)** | **31.03.2019ಕ್ಕೆ ಇರುವ ಬಾಕಿ** |
|---|---|---|---|
| 246 | ರೂ.4,45,54,910/- | ರೂ.4,41,41,132/- | ರೂ.4,13,778/- |

ಲೆಕ್ಕಪರಿಶೋಧನೆಗೆ ಒದಗಿಸಿದ್ದು, ಸಂಗ್ರಹವಾಗಬೇಕಾದ ಬಾಕಿ ವಿವರಗಳನ್ನು ಒದಗಿಸಿರುವುದಿಲ್ಲ. ಆದ್ದರಿಂದ ವಾರ್ಷಿಕ ಲೆಕ್ಕಪತ್ರಗಳಲ್ಲಿನ 2017-18, 2018-19 ಮತ್ತು 2019-20ನೇ ಸಾಲಿನಲ್ಲಿ ನಮೂದಿಸಿರುವ ಮೊತ್ತಕ್ಕೂ ಮತ್ತು ಬೇಡಿಕೆ ಪಟ್ಟಿಯಲ್ಲಿ ಒದಗಿಸಿರುವ ಮಾಹಿತಿಗೂ ಒಂದಕ್ಕೊಂದು ತಾಳೆಯಾಗಿರುವುದಿಲ್ಲ ಹಾಗೂ ಬೇಡಿಕೆ ಸ್ವೀಕೃತಿ ಬಾಕಿ ವಿವರಗಳು ಬ್ಯಾಂಕ್ ಖಾತೆಯೊಂದಿಗೆ ಲೆಕ್ಕಸಮನ್ವಯಗೊಳಿಸಿದ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ. ಲೆಕ್ಕಪರಿಶೀಲನೆಗೆ ಒದಗಿಸಿರುವ ಮಾಹಿತಿ ಪ್ರಕಾರ ರೂ. 14,63,81,550/- ಗಳು ಸಂಯೋಜನಾ ಶುಲ್ಕ ಸ್ವೀಕೃತವಾಗಿದ್ದು, ವಾರ್ಷಿಕ ಲೆಕ್ಕಪತ್ರಗಳ ಪ್ರಕಾರ ರೂ. 12,75,30,443/- ಗಳಷ್ಟು ಸಂಯೋಜನಾ ಶುಲ್ಕ ಸ್ವೀಕೃತವಾಗಿರುತ್ತದೆ.ಆದ್ದರಿಂದ ಸಂಯೋಜನಾ ಶುಲ್ಕದ ಡಿ.ಸಿ.ಬಿ ಹಾಗೂ ಲೆಕ್ಕಸಮನ್ವಯಗೊಳಿಸಿದ ತಃಖ್ತೆಯನ್ನು ತಯಾರಿಸಿ ಮುಂದಿನ ಲೆಕ್ಕಪರಿಶೋಧನೆಗೆ ಒದಗಿಸಲು ಸೂಚಿಸಿದೆ.ಮುಂದುವರೆದು, ಸದರಿ ಸ್ವೀಕೃತಿಗೊಂಡ ಸಂಯೋಜನೆ ಶುಲ್ಕದ ಮೇಲೆ ಜಿ.ಎಸ್.ಟಿ. ಕಾಯ್ದೆ 2017ರ ನಿಯಮ 15ರ ಪ್ರಕಾರ ಶೇ. 18 ರಷ್ಟು ಅಂದರೆ,ರೂ2,63,48,679.00 ಜಿ.ಎಸ್.ಟಿ ಸಂಗ್ರಹ ಮಾಡಿರುವುದಿಲ್ಲ.ಆದ್ದರಿಂದ ರೂ 2,63,48,679/-ಗಳನ್ನು ವಸೂಲಿಸಿ ಸಂಬಂಧಪಟ್ಟ ಇಲಾಖೆಗೆ ಜಮಾ ಮಾಡಲು ಸೂಚಿಸಿದೆ.

2018-19ನೇ ಸಾಲಿನಲ್ಲಿ ಈ ಕೆಳಕಂಡ ಸಾಲುಗಳ ಸಂಯೋಜನ ಶುಲ್ಕವನ್ನು ವಿಶ್ವವಿದ್ಯಾಲಯ ಖಾತೆಗೆ ಜಮೆ ಆಗಿರುತ್ತದೆ.

| ಕ್ರ.ಸಂ | ವರ್ಷ | ಮೊತ್ತ |
|---|---|---|
| 1 | 2017-18 | ರೂ.4,20,46,032/- |
| 2 | 2017-18 | ರೂ.2,02,000/- |
| 3 | 2018-19 | ರೂ.20,95,100/- |
| 4 | | ರೂ.4,000/- |
| **ಒಟ್ಟು** | | **ರೂ.4,43,43,132/-** |

2. 2019-20ನೇ ಸಾಲಿನ ಸಂಯೋಜನ ಶುಲ್ಕದ ಬೇಡಿಕೆ, ವಸೂಲಾತಿ ಮತ್ತು ಬಾಕಿಯ ವಿವರಗಳು (DCB).

| **ಕಾಲೇಜುಗಳ ಸಂಖ್ಯೆ** | **ಒಟ್ಟು ಬೇಡಿಕೆ** | **ವಸೂಲಿ ಮಾಡಿರುವುದು (Including fines & Penalty)** | **31.03.2020ಕ್ಕೆ ಇರುವ ಬಾಕಿ** |
|---|---|---|---|
| 253 | ರೂ.5,37,38,860/- | ರೂ.5,37,38,860/- | - |

2019-20ನೇ ಸಾಲಿನಲ್ಲಿ ಈ ಕೆಳಕಂಡ ಸಾಲುಗಳ ಸಂಯೋಜನ ಶುಲ್ಕವನ್ನು ವಿಶ್ವವಿದ್ಯಾಲಯ ಖಾತೆಗೆ ಜಮೆ ಆಗಿರುತ್ತದೆ.

| ಕ್ರ. ಸಂ | ವರ್ಷ | ಮೊತ್ತ |
|---|---|---|
| 1 | 2018-19 | ರೂ.5,05,72,420/- |
| 2 | 2019-20 | ರೂ.29,18,240/- |
| 3 | 2020-21 | ರೂ.2,48,200/- |
| **ಒಟ್ಟು** | | **ರೂ.5,37,38,860/-** |

3. 2020-21ನೇ ಸಾಲಿನ ಸಂಯೋಜನ ಶುಲ್ಕದ ಬೇಡಿಕೆ, ವಸೂಲಾತಿ ಮತ್ತು ಬಾಕಿಯ ವಿವರಗಳು (DCB).

| ಕಾಲೇಜುಗಳ ಸಂಖ್ಯೆ | ಒಟ್ಟು ಬೇಡಿಕೆ | ವಸೂಲಿ ಮಾಡಿರುವುದು (Including fines & Penalty) | 31.03.2020ಕ್ಕೆ ಇರುವ ಬಾಕಿ |
|---|---|---|---|
| 284 | ರೂ.6,55,15,739/- | ರೂ.6,55,15,739/- | - |

2020-21ನೇ ಸಾಲಿನಲ್ಲಿ ಈ ಕೆಳಕಂಡ ಸಾಲುಗಳ ಸಂಯೋಜನ ಶುಲ್ಕವನ್ನು ವಿಶ್ವವಿದ್ಯಾಲಯ ಖಾತೆಗೆ ಜಮೆ ಆಗಿರುತ್ತದೆ.

| ಕ್ರ.ಸಂ | ವರ್ಷ | ಮೊತ್ತ |
|---|---|---|
| 1 | 2018-19 | ರೂ.1,10,750/- |
| 2 | 2019-20 | ರೂ.6,07,48,777/- |
| 3 | 2020-21 | ರೂ.45,07,052/- |
| 4 | 2021-22 | ರೂ.1,49,209/- |
| ಒಟ್ಟು | | **ರೂ.6,55,15,739** |

2017-18 ರಿಂದ 2020-21 ನೇ ಸಾಲಿನವರೆಗೆ ಕ್ರಮವಾಗಿ 246,253 ಮತ್ತು 284 ಕಾಲೇಜುಗಳಿಂದ ಒಟ್ಟು ರೂ.16,35,97,731/-ಗಳು ವಸೂಲಿ ಆಗಿದ್ದು, ಡಿ.ಸಿ.ಬಿ ತಯಾರು ಮಾಡಲಾಗಿದೆ. ಸದರಿ ಮೊತ್ತಕ್ಕೂ ಬ್ಯಾಂಕ್‌ಖಾತೆಗೆ ಜಮಾ ಆಗಿರುವ ಮೊತ್ತಕ್ಕೆ ಸಮನ್ವಯ (Reconcialation) ಮಾಡಲಾಗಿದೆ. ಇದು ಹೊಂದಾಣಿಕೆ ಆಗಿದೆ.

ಮೇಲ್ಕಂಡ 3 ವರ್ಷಗಳ DCB Register ನ್ನು ಬ್ಯಾಂಕ್ ಖಾತೆಗಳ Statement ಗಳನ್ನು ಇದರೊಂದಿಗೆ ಲಗತ್ತಿಸಿ ತಮ್ಮ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.

ಎರಡನೇಯದಾಗಿ ವಸೂಲಿ ಮಾಡಿರುವ ಸಂಯೋಜನ ಶುಲ್ಕಕ್ಕೆ ಶೇ.18 GST ರೂ.2,63,48,679/-ಗಳನ್ನು ವಸೂಲಿಸಿ ಇಲಾಖೆಗೆ ಜಮಾ ಮಾಡಲು ಸೂಚಿಸಿದೆ.

ಸಂಯೋಜನಾ ಶುಲ್ಕಕ್ಕೆ GST ಅನ್ವಯಿಸುವುದಿಲ್ಲ. ಇದು ವಿದ್ಯಾಸಂಸ್ಥೆಯಾಗಿದ್ದು, Commercial ಸಂಸ್ಥೆಯಾಗಿರುವುದಿಲ್ಲ. ಈ ವಿಚಾರದಲ್ಲಿ GST ಬಗ್ಗೆ ಪರಿಣಿತರಾದ CA ರವರಿಂದ ಅಭಿಪ್ರಾಯ ಸಹ ಪಡೆಯಲಾಗಿದ್ದು, ವಿಶ್ವವಿದ್ಯಾಲಯವು ಶಿಕ್ಷಣ ಸಂಸ್ಥೆಯಾಗಿದ್ದು, ತನ್ನ ಸಂಯೋಜಿತ ಕಾಲೇಜುಗಳಿಗೆ ನೀಡವು ಸಂಯೋಜನಾ ಸೇವೆಯು ಸಹ ಶಿಕ್ಷಣದ ಸೇವಾ ವ್ಯಾಪ್ತಿಗೆ ಬರುವುದರಿಂದ ಸಂಯೋಜನಾ ಶುಲ್ಕಕ್ಕೆ GST ಅನ್ವಯವಾಗುವುದಿಲ್ಲವೆಂದು ಅಧಿಕೃತವಾಗಿ ಅಭಿಪ್ರಾಯ ನೀಡಿರುತ್ತಾರೆ.

| | |
|---|---|
| | ಹಾಗೂ ಇದಕ್ಕೆ ಪೂರಕವಾಗಿ GST ಇಲಾಖೆಯು ಸಂಯೋಜನಾ ಶುಲ್ಕಕ್ಕೆ ಅನ್ವಯಿಸುವ ಸೇವಾ ತೆರಿಗೆ ಕಟ್ಟಬೇಕೆಂದು ನೀಡಿದ್ದ Demand Notice ವಿರುದ್ಧವಾಗಿ Central exscise and Central Tax (GST) ಮಂಗಳೂರು ಇಲ್ಲಿ ನಿಗಧಿತ ಮೊತ್ತವನ್ನು Deposit ಮಾಡಿ ಮೇಲ್ಮನವಿಯನ್ನು ಸಲ್ಲಿಸಿದರು. ಸದರಿ ಮನವಿಯನ್ನು ಪರಿಶಿಲಿಸಿ, ಇಲಾಖೆಯು ಸಂಯೋಜನಾ ಶುಲ್ಕಕ್ಕೆ ಸೇವಾ ತೆರಿಗೆ ಅನ್ವಯವಾಗುವುದಿಲ್ಲ ಎಂಬುದನ್ನು ಪರಿಗಣಿಸಿ, Deposit ಮಾಡಿದ ಮೊತ್ತವನ್ನು ವಿಶ್ವವಿದ್ಯಾಲಯಕ್ಕೆ ಹಿಂತಿರುಗಿಸಿ, Demand Notice ನ್ನು ಕೈಬಿಡಲಾಗಿದೆ.<br><br>ಹಾಗೂ ಅದೇ ರೀತಿ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತೆ, ಸದರಿ ವಿಶ್ವವಿದ್ಯಾಲಯ ಸಂಗ್ರಹಿಸಿರುವ ಸಂಯೋಜನಾ ಶುಲ್ಕದ ಜೊತೆ ಸೇವಾ ತೆರಿಗೆಗೆ (Service Tax) ಸಂಬಂಧಿಸಿದಂತೆ, GST ಇಲಾಖೆಯು ನೀಡಿದ್ದ Demand Notice ವಿರುದ್ಧವಾಗಿ ಮಾನ್ಯ ಉಚ್ಚ ನ್ಯಾಯಾಲಯದ ಮೊರೆ ಹೋಗಲಾಗಿತ್ತು ದಿನಾಂಕ:28.06.2022 ರಂದು ಮಾನ್ಯ ಉಚ್ಚ ನ್ಯಾಯಾಲಯವು GST ಇಲಾಖೆ ನೀಡಿದ್ದ Demand Notice ನ್ನು ಕಾನೂನು ಬಾಹಿರವೆಂದು ರದ್ದುಪಡಿಸಲಾಗಿದೆ.<br><br>ಈ ಹಿನ್ನೆಲೆಯಲ್ಲಿ ಬೆಂಗಳೂರು ಉತ್ತರ ವಿಶ್ವವಿದ್ಯಾಲಯವು ಕಾಲೇಜುಗಳಿಗೆ ನೀಡುವ ಸಂಯೋಜನಾ ಚಟುವಟಿಕೆಯು ಶೈಕ್ಷಣಿಕ ಚಟುವಟಿಕೆ ಎಂದು ಪರಿಗಣಿಸಿ, ಸಂಯೋಜನಾ ಶುಲ್ಕದೊಂದಿಗೆ GST ತೆರಿಗೆ ಸಂಗ್ರಹಿಸುತ್ತಿರುವುದಿಲ್ಲ. ಈ ಅಂಶಗಳನ್ನು ತಾವು ಪರಿಗಣಿಸಿ, ಕಂಡಿಕೆಯನ್ನು ಕೈಬಿಡಲು ಕೋರಿದೆ. |
| **11.6 ಸಂಯೋಜನಾ ಶುಲ್ಕಕ್ಕೆ ಸಂಬಂಧಿಸಿದಂತೆ, ತಡಪಾವತಿ ಶುಲ್ಕ ವಸೂಲಾತಿ ಮಾಡದಿರುವುದು**<br><br>2017-18,2019-18, 2019-20 ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ಸಂಯೋಜನಾ ಕಾಲೇಜುಗಳನ್ನು ಮತ್ತು ಬಿ.ಇಡಿ ಕಾಲೇಜುಗಳಿಗೆ ಅಧಿಸೂಚನೆ ಸಂಖ್ಯೆ.BNU/Affiliation/2018-19, ದಿನಾಂಕ: 21.10.2017 ಮತ್ತು ಅಧಿಸೂಚನೆ ಸಂಖ್ಯೆ. ಬೆಂ.ಉ.ವಿ /ಎ.ಸಿ.ಎ ಸಂ.ನ.2019-20, ದಿನಾಂಕ 20.09.2019 ರಂದು ಪ್ರಕಟಣೆ ಹೊರಡಿಸಿದ್ದು. 2017-18ನೇ ಸಾಲಿನಲ್ಲಿ ದಿನಾಂಕ;25.11.2017ಕೊನೆಯ ದಿನಾಂಕವಾಗಿ, 2019-20ನೇ ಸಾಲಿನಲ್ಲಿ ದಿನಾಂಕ 25.10.2019 ನ್ನು ಕೊನೆಯ ದಿನಾಂಕವಾಗಿ ನಿಗದಿಪಡಿಸಲಾಗಿದೆ. ನಂತರ ಬಂದ ಅರ್ಜಿಗಳಿಗೆ 2017-18 ರಲ್ಲಿ ರೂ.1,000/- ದಂತೆ, 2019-20 ರಲ್ಲಿ ರೂ.2,000/- ದಂತೆ ದಂಡಶುಲ್ಕ ವಿಧಿಸಲಾಗುವುದೆಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಆದರೂ ವಿಶ್ವವಿದ್ಯಾಲಯವು ತಡವಾಗಿ ಸಂಯೋಜನಾ ಶುಲ್ಕ ಪಾವತಿಸಿದ ಕಾಲೇಜುಗಳಿಂದ ತಡ ಪಾವತಿ ಶುಲ್ಕ ರೂ | 11.6) |

2,17,000/- ವಸೂಲಿಸದಿರುವುದು ಕಂಡು ಬಂದಿದ್ದು. ಈ ಸಂಬಂಧ ಆಡಿಟ್ ವಿಚಾರಣಾ ಸಂಖ್ಯೆ: 77/20-21, ದಿನಾಂಕ :18.08.2021 ರಲ್ಲಿ ವಿವರಣೆ ಕೋರಿದ್ದರೂ. ಸಮರ್ಪಕವಾದ ಮಾಹಿತಿ ನೀಡಿರುವುದಿಲ್ಲ.ಆದುದರಿಂದ, ರೂ.2,17,000/- ಗಳನ್ನು ವಸೂಲಾತಿಯಲ್ಲಿಡಲಾಗಿದೆ. ವಿವರಗಳನ್ನು **ಅನುಬಂಧ-04** ರಲ್ಲಿಕಾಣಿಸಲಾಗಿದೆ.

**11.7 ವಿಶ್ವವಿದ್ಯಾಲಯದ ಕಾಲೇಜುಗಳಿಂದ ಸಂಯೋಜನೆ ಶುಲ್ಕ ವಸೂಲಿಸದಿರುವುದು.**

2018-19ನೇ ಮತ್ತು 2019-20ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ಕೆಲವು ಕಾಲೇಜುಗಳಿಂದ ರೂ.20.19.358/- ಸಂಯೋಜನೆ ಶುಲ್ಕವನ್ನು ಕಡಿಮೆ ವಸೂಲಾತಿ ಮಾಡಿರುವುದು ಕಂಡು ಬಂದಿರುತ್ತದೆ.ಈ ಸಂಬಂಧ ಆಡಿಟ್ ವಿಚಾರಣಾ ಸಂಖ್ಯೆ 77/20-21, ದಿನಾಂಕ:18.08.2021ರಲ್ಲಿ ವಿವರ ಕೋರಿದ್ದರೂ. ಸಮಂಜಸವಾದ ವಿವರಣೆ ನೀಡಿರುವುದಿಲ್ಲ. ಆದುದರಿಂದ, ರೂ.20,18,558/-ಗಳನ್ನು ವಸೂಲಾತಿಯಲ್ಲಿಡಲಾಗಿದೆ. ವಿವರಗಳನ್ನು **ಅನುಬಂಧ-05** ರಲ್ಲಿಕಾಣಿಸಲಾಗಿದೆ.

11.7) ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರದ 2016-17 ರಿಂದ 2019-20ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನೆಯನ್ನು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ, ಲೆಕ್ಕಪರಿಶೋಧಕರು ಕೈಗೊಂಡ ಸಮಯದಲ್ಲಿ DCB ನಿರ್ವಹಿಸಿಲ್ಲದ್ದರಿಂದ ನಿಖರವಾದ ಮಾಹಿತಿಯನ್ನು ಸಂಬಂಧಿಸಿದ ವಿಭಾಗದವರು ನೀಡಿರುವುದಿಲ್ಲ. ಆದ್ದರಿಂದ ಆಡಿಟ್ ವರದಿಯಲ್ಲಿ 20 ವಿಶ್ವವಿದ್ಯಾಲಯದ ಕಾಲೇಜುಗಳಿಂದ ಸಂಯೋಜನ ಶುಲ್ಕವನ್ನು ಕಡಿಮೆ ವಸೂಲಿ ಮಾಡಿರುವುದಾಗಿ ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ.

| **ವಿವರಗಳು ಈ ಕೆಳಕಂಡಂತಿದೆ "A"** | | | |
|---|---|---|---|
| ಕಾಲೇಜುಗಳ ಒಟ್ಟು ಸಂಖ್ಯೆ | ವಸೂಲಿ ಮಾಡಬೇಕಾಗಿರುವ ಸಂಯೋಜನ ಶುಲ್ಕದ ಮೊತ್ತ | ವಸೂಲಿ ಮಾಡಿದ ಮೊತ್ತ | ಬಾಕಿ ಮೊತ್ತ |
| **20** | **ರೂ.79,35,507/-** | **ರೂ.59,16,949 /-** | **ರೂ.20,18,558 /-** |

ಪ್ರಸ್ತುತ ಸಾಲುಗಳ DCB ಯನ್ನು ತಯಾರಿಸಿದ್ದು, ಈಗ ಸರಿಯಾದ ಮಾಹಿತಿಯು ಲಭ್ಯವಿದ್ದು, ಅದರಂತೆ 20 ಕಾಲೇಜುಗಳಿಂದ ಸಂಯೋಜನ ಶುಲ್ಕವನ್ನು ವಸೂಲಿ ಮಾಡಲಾಗಿದೆ ಹಾಗು ಬ್ಯಾಂಕಿಗೆ ಜಮೆಯಾಗಿರುತ್ತದೆ. ಸದರಿ 20 ಕಾಲೇಜುಗಳಿಂದ ಜಮೆಯಾಗಿರುವ ಸಂಯೋಜನ ಶುಲ್ಕದ ವಿವರಗಳ ತಃಖ್ತೆ ಹಾಗು ಬ್ಯಾಂಕಿಗೆ ಹೊಂದಾಣಿಕೆಯಾಗಿರುವ ಬ್ಯಾಂಕಿನ Pass Sheet ಗಳನ್ನು ಸಹ ಇದರೊಂದಿಗೆ ಲಗತ್ತಿಸಿ, ತಮ್ಮ ಮಾಹಿತಿಗಾಗಿ ಸಲ್ಲಿಸಿದೆ.

| ವಿವರಗಳು ಈ ಕೆಳಕಂಡಂತಿದೆ "B" | | | |
|---|---|---|---|
| ಕಾಲೇಜುಗಳ ಒಟ್ಟು ಸಂಖ್ಯೆ | ವಸೂಲಿ ಮಾಡಬೇಕಾಗಿರುವ ಸಂಯೋಜನ ಶುಲ್ಕದ ಮೊತ್ತ | ವಸೂಲಿ ಮಾಡಿ ಬ್ಯಾಂಕಿಗೆ ಜಮಾ ಮಾಡಿರುವ ಮೊತ್ತ | ಬಾಕಿಯಿರುವ ಮೊತ್ತ |
| **20** | **ರೂ.1,16,17,197/-** | **ರೂ.1,17,55,521/-** | ಯಾವುದೇ ಮೊತ್ತ ಬಾಕಿ ಇರುವುದಿಲ್ಲ |

ಮೇಲೆ ತೋರಿಸಿರುವ ಅಂಕಿಅಂಶಗಳು DCB ಪ್ರಕಾರ ಸರಿಯಾಗಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.

ಮೇಲ್ಕಂಡ ಎಲ್ಲಾ ಆಂಶಗಳನ್ನು ತಮ್ಮ ಅವಗಾಹನೆಗೆ ಸಲ್ಲಿಸುತ್ತಾ, ದಯವಿಟ್ಟು ಸದರಿ ಆಡಿಟ್ ಕಂಡಿಕೆಯನ್ನು ಆಡಿಟ್ ವರದಿಯಿಂದ ಕೈಬಿಡುವಂತೆ ಕೋರಲಾಗಿದೆ.

**11.8 2017-18 ಮತ್ತು 2019-20 ನೇ ಸಾಲಿನವರೆಗೆ ಪರೀಕ್ಷಾ ಶುಲ್ಕದ ಸ್ವೀಕೃತಿಗಳನ್ನು ಬ್ಯಾಂಕ್ ಖಾತೆಯೊಂದಿಗೆ ಲೆಕ್ಕ ಸಮನ್ವಯಗೊಳಿಸದಿರುವುದು.**

ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ 2016-17 ರಿಂದ 2019-20ನೇ ಸಾಲಿನವರೆಗಿನ ಲೆಕ್ಕಪರಿಶೋಧನೆಯಲ್ಲಿ 2018-19 ಮತ್ತು 2019-20 ನೇ ಸಾಲಿನ ಯು.ಜಿ/ಪಿ.ಜಿ/ಬಿಎಡ್/ಡಿಪ್ಲೋಮೊ ಕೋರ್ಸುಗಳ ಪರೀಕ್ಷಾ ಶುಲ್ಕ, ಅಂಕ ಪಟ್ಟಿ ಶುಲ್ಕ, ನಕಲಿ ಅಂಕ ಪಟ್ಟಿ ಶುಲ್ಕ, ಘಟಿಕೋತ್ಸವ ಶುಲ್ಕ, ಬೇಡಿಕೆ ಸ್ವೀಕೃತಿ ಬಾಕಿ ವಿವರ, ಕಡತ, ವಹಿಗಳು, ಮತ್ತು ಮರುಮೌಲ್ಯಮಾಪನ ಶುಲ್ಕ ಇವುಗಳಿಗೆ ಸಂಬಂಧಿಸಿದ ಅಧಿಸೂಚನೆಗಳು ಮತ್ತು ಬ್ಯಾಂಕ್‌ಖಾತೆ ಯೊಂದಿಗೆ ಲೆಕ್ಕಸಮನ್ವಯಗೊಳಿಸಿದ ದೃಢೀಕೃತ ಪ್ರತಿಯನ್ನು ವಿತ್ತಾಧಿಕಾರಿಗಳ ಸಹಿಯೊಂದಿಗೆ ಲೆಕ್ಕಪರಿಶೋಧನೆಗೆ ಒದಗಿಸಲು ವಿಚಾರಣಾ ಪತ್ರ ಸಂಖ್ಯೆ.33,ದಿನಾಂಕ:31.03.2021 ರಲ್ಲಿ ಕೋರಲಾಗಿತ್ತು, ವಿಶ್ವವಿದ್ಯಾಲಯ ನೀಡಿರುವ ಉತ್ತರದಲ್ಲಿ ಸಂಗ್ರಹವಾದ ಪರೀಕ್ಷಾ ಶುಲ್ಕ ಮತ್ತು ದಂಡಶುಲ್ಕಗಳ ವಿವರಗಳನ್ನು ಅಪೂರ್ಣವಾಗಿದ್ದು, ಉತ್ತರ ಸಮಂಜಸವಾಗಿರುವುದಿಲ್ಲ.

11.8) ಬೆಂಗಳೂರು ಉತ್ತರ ವಿಶ್ವವಿದ್ಯಾಲಯವು 2016-17 ರಿಂದ ಹೊಸದಾಗಿ ಪ್ರಾರಂಭವಾಗಿದ್ದ ಕಾರಣ ಹಾಗೂ ಈ ಸಂಸ್ಥೆಯಲ್ಲಿ ಖಾಯಂ ನೌಕರರು ಮತ್ತು ಲೆಕ್ಕಪತ್ರ ಶಾಖೆಯಲ್ಲಿ ಅನುಭವಿ ಸಿಬ್ಬಂದಿ ಇಲ್ಲದ್ದರಿಂದ ಮತ್ತು ಖಾಯಂ ಹಣಕಾಸು ಅಧಿಕಾರಿ ನೇಮಕವಾಗಿಲ್ಲದ ಕಾರಣ 2020 ರವರೆಗೂ ಸೂಕ್ತ ಲೆಕ್ಕಪತ್ರಗಳನ್ನು ನಿರ್ವಹಿಸಲು ಸಾಧ್ಯವಾಗಿರಲಿಲ್ಲ. 2020 ರ ಅಂತ್ಯಕ್ಕೆ ಹೆಚ್ಚುವರಿ ಪ್ರಭಾರದಲ್ಲಿ ಹಣಕಾಸು ಅಧಿಕಾರಿ ಕರ್ತವ್ಯದ ಜವಾಬ್ದಾರಿ ವಹಿಸಿಕೊಂಡ ನಂತರ ವಿಶ್ವವಿದ್ಯಾನಿಲಯದ ಹಣಕಾಸು ವಹಿವಾಟುಗಳನ್ನು ಲಭ್ಯವಿದ್ದ ದಾಖಲೆಗಳ ಆಧಾರದ ಮೇರೆಗೆ ಲೆಕ್ಕಪತ್ರದ ದತ್ತಾಂಶಗಳನ್ನು Tally ಮೂಲಕ ದಾಖಲಿಸಿ, ತದನಂತರ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸಲಾಯಿತು.

ರಾಜ್ಯ ಲೆಕ್ಕಪತ್ರ ಇಲಾಖೆಯ ಸದರಿ ಕಂಡಿಕೆಯ ಆಕ್ಷೇಪಣೆಗಳನ್ನು ಅವಗಾಹಿಸಲಾಗಿದೆ ಮತ್ತು ಈ ಕೆಳಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ಸಲ್ಲಿಸಿದೆ.

ಮುಂದುವರೆದು, ಕರ್ನಾಟಕ ಆರ್ಥಿಕ ಸಂಹಿತೆ ಕಲಂ 3 ಮತ್ತು 199 ನಿಯಮಗಳ ಅನ್ವಯ ವಾರ್ಷಿಕ ಲೆಕ್ಕಪತ್ರಗಳನ್ನು ಮತ್ತು ಕಾಲಕ್ಕೆ ಸರಿಯಾಗಿ ಲೆಕ್ಕಪರಿಶೋಧನೆಗೆ ಸಲ್ಲಿಸುವುದು ಇಲಾಖಾ/ವಿಭಾಗದ ಮುಖ್ಯಸ್ಥರ ಕರ್ತವ್ಯ ಹಾಗೂ ಹೊಣೆಗಾರಿಕೆಯಾಗಿರುತ್ತದೆ.ಆದರೆ ಪರೀಕ್ಷಾ ವಿಭಾಗದಿಂದ, ಲೆಕ್ಕಪರಿಶೋಧನೆಗೆ ಸಂಬಂಧಪಟ್ಟ ವಿವರಗಳನ್ನು ಒದಗಿಸುವಂತೆ ಪುನರಾವರ್ತಿತವಾಗಿ ವಿಚಾರಣಾ ಪತ್ರಗಳನ್ನು ನೀಡಿದರೂ ಸಹ ಯಾವುದೇ ಮಾಹಿತಿಗಳನ್ನು ಒದಗಿಸಿರುವುದಿಲ್ಲ.

ಮುಂದುವರೆದು, ಒದಗಿಸಿರುವ ಮಾಹಿತಿಯಲ್ಲಿ 2018-19 ಮತ್ತು 2019-20 ನೇ ಸಾಲಿನಲ್ಲಿ ಸಂಗ್ರಹವಾದ ಪರೀಕ್ಷಾ ಶುಲ್ಕ, ಮರುಮೌಲ್ಯಮಾಪನ ಶುಲ್ಕ ಹಾಗೂ ದಂಡಶುಲ್ಕಗಳ ಒಟ್ಟು ಮೊತ್ತ ರೂ.18,04,13,065/-ಗಳಾಗಿದ್ದು, ದಿನಾಂಕ:31.03.2019ರ ಅಂತ್ಯಕ್ಕೆ ವಾರ್ಷಿಕ ಲೆಕ್ಕಪತ್ರಗಳನ್ವಯ ಪರೀಕ್ಷಾ ಶುಲ್ಕದ ಸ್ವೀಕೃತಿ ಮೊತ್ತ ರೂ.16,46,66,704/-ಗಳಾಗಿರುತ್ತದೆ. ವಿಶ್ವವಿದ್ಯಾಲಯವು ಒದಗಿಸಿರುವ ಮಾಹಿತಿ, ವಾರ್ಷಿಕ ಲೆಕ್ಕಪತ್ರಗಳಲ್ಲಿರುವ ಪರೀಕ್ಷಾ ಶುಲ್ಕದ ಮೊತ್ತಕ್ಕೂ ವ್ಯತ್ಯಾಸ ಕಂಡುಬಂದಿದ್ದು, ಒಂದಕ್ಕೊಂದು ತಾಳೆಯಾಗುವುದಿಲ್ಲ. ಆದ್ದರಿಂದ 2018-2019 ಮತ್ತು 2019-20ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳಲ್ಲಿರುವ ಪರೀಕ್ಷಾ ಶುಲ್ಕದ ಸ್ವೀಕೃತಿಯನ್ನು ಲೆಕ್ಕ ಸಮನ್ವಯಮಾಡಲು ಸೂಚಿಸಿದೆ.

2018-19ನೇ ಸಾಲಿನಲ್ಲಿ ವಾರ್ಷಿಕ ಲೆಕ್ಕಪತ್ರಗಳಿಗೂ ಮತ್ತು ಲೆಕ್ಕ ಪರಿಶೋಧನೆಗೆ ನೀಡಿರುವ ಮೊತ್ತದ ವ್ಯತ್ಯಾಸವು ರೂ.17,34,663/-ಗಳು ಹೆಚ್ಚುವರಿ ಆಗಿರುತ್ತದೆ. ಆದ್ದರಿಂದ 2019-20ರಲ್ಲಿ ಕಡಿಮೆ ವ್ಯತ್ಯಾಸದ ಮೊತ್ತ ರೂ9733194 ಮತ್ತು 2019-20ನೇ ಮರು ಮೌಲ್ಯಮಾಪನದ ಕಡಿಮೆ ವ್ಯತ್ಯಾಸದ ಮೊತ್ತ ರೂ.7747830/- ಒಟ್ಟು 174,81,024/-ಗಳನ್ನು ವಸೂಲಾತಿಗೆ ಸೂಚಿಸಿದೆ.

ವಿವರವನ್ನು **ಅನುಬಂಧ-06**ರಲ್ಲಿ ಕಾಣಿಸಲಾಗಿದೆ.

ವಿಶ್ವವಿದ್ಯಾನಿಲಯದಲ್ಲಿ ಈ ಮೊದಲು DCB Register ನಿರ್ವಹಿಸಿರಲಿಲ್ಲ ಹಾಗಾಗಿ ನಿರ್ದಿಷ್ಟವಾಗಿ ಪರೀಕ್ಷಾ ಶುಲ್ಕ, ದಂಡ ಶುಲ್ಕ ಮತ್ತು ಮರುಮೌಲ್ಯಮಾಪನ ಶುಲ್ಕದ ವಾಸ್ತವ ಸ್ವೀಕೃತಿ ಕಂಡುಹಿಡಿಯುವುದು ಕಷ್ಟಕರವಾಗಿತ್ತು. ಪ್ರಸ್ತುತ 2018-19 ಮತ್ತು 2019-20 ನೇ ಸಾಲಿನ ಪರೀಕ್ಷಾ ಶುಲ್ಕದ ಸ್ವೀಕೃತಿಗೆ ಸಂಬಂಧಿಸಿದಂತೆ, DCB Register ನ್ನು ಸಿದ್ಧಪಡಿಸಲಾಗಿದೆ. ಮತ್ತು DCB Register ಸ್ವೀಕೃತಿ ಮತ್ತು ವಾರ್ಷಿಕ ಲೆಕ್ಕಪತ್ರಗಳಲ್ಲಿನ ಸ್ವೀಕೃತಿಗಳನ್ನು ತಾಳೆ ಮಾಡಲಾಗಿದೆ. ಮತ್ತು ಬ್ಯಾಂಕ್ ಖಾತೆಗೆ ಪರೀಕ್ಷಾ ಶುಲ್ಕ ಜಮೆಯಾಗಿರುವುದನ್ನು ಖಾತ್ರಿಪಡಿಸಿ, ತಾಳೆ ಮಾಡಲಾಗಿದೆ.

2018-19 ಮತ್ತು 2019-20 ನೇ ಸಾಲಿನ ಪರೀಕ್ಷಾ ಶುಲ್ಕ ಮತ್ತು ಮರುಮೌಲ್ಯಮಾಪನ ಶುಲ್ಕದ ವಿವರಳು ಈ ಕೆಳಕಂಡಂತಿದೆ.

**ಪರೀಕ್ಷಾ ಶುಲ್ಕದ ವಿವರಗಳು (Exam Fees)**

| ಕ್ರ. ಸಂ | ವರ್ಷ | ಆಡಿಟ್ ವರದಿ ಪ್ರಕಾರ (ರೂ.ಗಳಲ್ಲಿ) | DCB & ಬ್ಯಾಂಕ್ ಖಾತೆಯ ಪ್ರಕಾರ (ರೂ.ಗಳಲ್ಲಿ) | ವ್ಯತ್ಯಾಸದ ಮೊತ್ತ (ರೂ.ಗಳಲ್ಲಿ) |
|---|---|---|---|---|
| 1 | 2018-19 | 4,25,81,912 | 2,92,24,288 | (-) 1,33,57,624 |
| 2 | 2019-20 | 11,55,93,822 | 12,66,45,497 | (+) 1,10,51,675 |
| ಒಟ್ಟು | | **15,81,75,734** | **15,58,69,785** | **(-) 23,05,949** |

**ಮರು ಮೌಲ್ಯಮಾಪನ ಶುಲ್ಕದ ವಿವರಗಳು (Revaluation Fees)**

| ಕ್ರ. ಸಂ | ವರ್ಷ | ಆಡಿಟ್ ವರದಿ ಪ್ರಕಾರ (ರೂ.ಗಳಲ್ಲಿ) | DCB & ಬ್ಯಾಂಕ್ ಖಾತೆಯ ಪ್ರಕಾರ (ರೂ.ಗಳಲ್ಲಿ) | ವ್ಯತ್ಯಾಸದ ಮೊತ್ತ (ರೂ.ಗಳಲ್ಲಿ) |
|---|---|---|---|---|
| 1 | 2018-19 | 30,38,430 | 6,43,990 | (-) 23,94,440 |
| 2 | 2019-20 | 34,52,540 | 42,39,862 | (+) 7,87,322 |
| ಒಟ್ಟು | | **64,90,970** | **48,83,852** | **(-) 16,07,118** |

2018-19 ಮತ್ತು 2019-20ನೇ ಸಾಲಿನಲ್ಲಿ ಪರೀಕ್ಷಾ ಶುಲ್ಕದ ಮೊತ್ತ **ರೂ.15,58,69,785/-** ಹಾಗೂ ಮರುಮೌಲ್ಯಮಾಪನ ಶುಲ್ಕದ ಮೊತ್ತ **ರೂ.48,83,852/-** ಗಳಾಗಿದ್ದು, ಒಟ್ಟಾರೆ ಮೊತ್ತ **ರೂ.16,07,53,637/-** ಸ್ವೀಕೃತವಾಗಿದ್ದು, ಬ್ಯಾಂಕ್ ಖಾತೆಗೆ ಜಮೆಯಾಗಿರುವುದು ಲೆಕ್ಕಪತ್ರ ಸಮನ್ವಯದಲ್ಲಿ ದೃಢಪಟ್ಟಿರುತ್ತದೆ.

ಪರೀಕ್ಷಾ ಶುಲ್ಕ ಪಾವತಿಯಾಗದೇ ಯಾವುದೇ ಒಬ್ಬ ವಿದ್ಯಾರ್ಥಿಯು ಸಹ ಪರೀಕ್ಷೆ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ ಮತ್ತು ಅಂತಹ ವಿದ್ಯಾರ್ಥಿಗೆ ಪರೀಕ್ಷಾ ಪ್ರವೇಶ ಪತ್ರ ನೀಡುವುದಿಲ್ಲ ಎಂಬ ಅಂಶವನ್ನು ತಮ್ಮ ಅವಗಾಹನೆಗೆ ತರುತ್ತಾ, 2018-19 ಮತ್ತು 2019-

| | |
|---|---|
| | 20 ನೇ ಸಾಲಿನಲ್ಲಿ ಸ್ವೀಕೃತವಾಗಬೇಕಾಗಿದ್ದ ಮೊತ್ತ ಮತ್ತು ಸ್ವೀಕೃತವಾಗಿರುವ ಮೊತ್ತ **ರೂ.16,07,53,637/-**ಗಳಾಗಿರುತ್ತದೆ. ಯಾವುದೇ ಪರೀಕ್ಷಾ ಶುಲ್ಕವನ್ನು ವಸೂಲಾತಿ ಮಾಡಬೇಕಾಗಿರುವುದಿಲ್ಲ. ಕೇವಲ ಈ ಹಿಂದೆ ಸೂಕ್ತ ರೀತಿಯಲ್ಲಿ DCB ನಿರ್ವಹಣೆ ಮಾಡದೇ ಇರುವ ಕಾರಣ ಆಕ್ಷೇಪಣೆಯಲ್ಲಿ ವ್ಯತ್ಯಾಸ ಮೊತ್ತವು ಕಂಡುಬಂದಿದ್ದು, ವಾಸ್ತವವಾಗಿ ಯಾವುದೇ ವಸೂಲಾತಿ ಮಾಡಬೇಕಾದ ಮೊತ್ತ ಇರುವುದಿಲ್ಲ<br><br>ಆದ್ದರಿಂದ ವಸೂಲಾತಿ ಮೊತ್ತ ರೂ. **1,74,81,024/-**ಗಳನ್ನು ಆಡಿಟ್ ವರದಿಯಿಂದ ಕೈ ಬಿಡಲು ಕೋರಲಾಗಿದೆ. |
| **11.9.ಬಿ.ಎಡ್ ಸಂಯೋಜಿತ ಕಾಲೇಜುಗಳ ಪ್ರವೇಶಾತಿ ಅನುಮೋದನೆ ಶುಲ್ಕ ವಿಳಂಬವಾಗಿ ಪಾವತಿಸಿರುವ ಕಾಲೇಜುಗಳಿಂದ ದಂಡಶುಲ್ಕ ವಸೂಲಿಸದಿರುವುದು.**<br><br>ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಸಂಯೋಜಿತ ಬಿ.ಎಡ್ ಕಾಲೇಜುಗಳ ಶುಲ್ಕಗಳ ಸ್ವೀಕೃತಿಗೆ ಸಂಬಂಧಿಸಿದ ಅಧಿಸೂಚನೆ ಸಂಖ್ಯೆ:¨BNU/REVISED DATE-APPROVAL OF BEDAD/296/2018-19 ದಿ:30.01.2019ರಲ್ಲಿ ಬಿ.ಎಡ್. **ಸಂಯೋಜಿತ ಕಾಲೇಜುಗಳ ಪ್ರವೇಶಾತಿ ಅನುಮೋದನೆ ಶುಲ್ಕ** ಸ್ವೀಕೃತಿಯನ್ನು ಕೊನೆಯ ದಿ:06.02.2019ನ್ನು ನಿಗದಿಪಡಿಸಲಾಗಿದೆ ಹಾಗೂ ದಿನಾಂಕ:08.02.2019ರವರೆಗೆ ಪ್ರತಿ ಕಾಲೇಜಿನಿಂದ ರೂ.2,000/- ಮತ್ತು ದಿನಾಂಕ 11-02-2019 ರವರೆಗೆ ದಂಡ ಶುಲ್ಕ 5,000/- ರಂತೆ ದಂಡ ವಸೂಲಿಸಲು ಅಧಿಸೂಚಿಸಿದೆ. **ಅನುಬಂಧ-09** ರಲ್ಲಿ ಲಗತ್ತಿಸಿರುವ ಕಾಲೇಜುಗಳು ದಿನಾಂಕ:04.02.2019ರ ನಂತರದಲ್ಲಿ ಪ್ರವೇಶ ಶುಲ್ಕ ವಸೂಲಿಸಿದ್ದು, ದಂಡಶುಲ್ಕ ಪಡೆಯದಿರುವುದು ಕಂಡುಬಂದಿದ್ದು, ಈ ಬಗ್ಗೆ ಸ್ಪಷ್ಟೀಕರಣ ನೀಡಲು ವಿಚಾರಣಾ ಪತ್ರ ಸಂಖ್ಯೆ:78/20-21 ದಿನಾಂಕ:18.08.2021 ರಲ್ಲಿ ವಿವರ ಕೋರಿದ್ದರೂ. ಯಾವುದೇ ಅನುಸರಣೆ ಒದಗಿಸಿರುವುದಿಲ್ಲ.<br><br>ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇಧ 4(ಎ) ರೀತ್ಯಾ ಎಲ್ಲಾ ಹಣಕಾಸಿನ ವಹಿವಾಟುಗಳನ್ನು ಯಾವುದನ್ನು ಬಿಡದೆ ಲೆಕ್ಕಕ್ಕೆ ತೆಗೆದುಕೊಳ್ಳಬೇಕು ಹಾಗೂ ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇಧ 35ರ ರೀತ್ಯಾ ಜುಲ್ಮಾನೆಗಳನ್ನು ವಸೂಲಿ ಮಾಡಬೇಕಾಗಿರುತ್ತದೆ.<br><br>ಆದ್ದರಿಂದ ಸಂಬಂಧಪಟ್ಟ ಕಾಲೇಜುಗಳಿಂದ ದಂಡಶುಲ್ಕ ಮೊತ್ತ ರೂ.2,62,000/-ಗಳನ್ನು ವಸೂಲಿಸಿ ವಿಶ್ವವಿದ್ಯಾಲಯ ನಿಧಿಗೆ ಜಮೆ ಮಾಡಲು ಸೂಚಿಸಿದೆ. ವಿವರವನ್ನು **ಅನುಬಂಧ-7**ರಲ್ಲಿ ಕಾಣಿಸಲಾಗಿದೆ. | 11.9) |

| | |
|---|---|
| **11.10.** **ಬಿ.ಎಡ್ ಕಾಲೇಜುಗಳ ಸಂಯೋಜನಾ ಶುಲ್ಕಕ್ಕೆ ಸಂಬಂಧಿಸಿದಂತೆ, ತಡಪಾವತಿ ಶುಲ್ಕ ವಸೂಲಿಸಿರುವುದು.**<br><br>2017–18,2019–18, 2019–20 ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ಸಂಯೋಜನಾ ಕಾಲೇಜುಗಳನ್ನು ಮತ್ತು ಬಿ.ಇಡಿ ಕಾಲೇಜುಗಳಿಗೆ ಅಧಿಸೂಚನೆ ಸಂಖ್ಯೆ.no.BNU/Affiliation/2018-19ದಿನಾಂಕ:21.10.2017 ಮತ್ತು ಅಧಿಸೂಚನೆ ಸಂಖ್ಯೆ.ಬೆಂ.ಉ.ವಿ/ಎ.ಸಿ.ಎ. ಸಂ.ನ.2019–20, ದಿನಾಂಕ: 20.09.2019 ರಂದು ಪ್ರಕಟಣೆ ಹೊರಡಿಸಿದ್ದು. 2017–18ನೇ ಸಾಲಿನಲ್ಲಿ ದಿನಾಂಕ;25.11.2017 ಕೊನೆಯ ದಿನಾಂಕವಾಗಿ, 2019–20ನೇ ಸಾಲಿನಲ್ಲಿ ದಿನಾಂಕ 25.10.2019ನ್ನು ಕೊನೆಯ ದಿನಾಂಕವಾಗಿ ನಿಗದಿಪಡಿಸಲಾಗಿದೆ. ನಂತರ ಬಂದ ಅರ್ಜಿಗಳಿಗೆ 2017–18 ರಲ್ಲಿ ರೂ.1000/– ದಂತೆ, 2019–20 ರಲ್ಲಿ ರೂ.2000/– ದಂತೆ ದಂಡಶುಲ್ಕ ವಿಧಿಸಲಾಗುವಿದೆಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಆದರೂ ವಿಶ್ವವಿದ್ಯಾಲಯವು ತಡವಾಗಿ ಸಂಯೋಜನಾ ಶುಲ್ಕ ಪಾವತಿಸಿದ ಕಾಲೇಜುಗಳಿಂದ ತಡ ಪಾವತಿ ಶುಲ್ಕ ರೂ29,000/– ಗಳನ್ನು ವಸೂಲಿಸದಿರುವುದು ಕಂಡು ಬಂದಿದ್ದು. ಈ ಸಂಬಂಧ ಆಡಿಟ್ ವಿಚಾರಣಾ ಸಂಖ್ಯೆ: 77, ದಿನಾಂಕ 18.08.2021 ರಲ್ಲಿ ವಿವರಣೆ ಕೋರಿದ್ದರೂ. ಸಮರ್ಪಕವಾದ ಮಾಹಿತಿ ವಿವರಗಳನ್ನು **ಅನುಬಂಧ–08** ರಲ್ಲಿಕಾಣಿಸಲಾಗಿದೆ. | 11.10) |
| **11.11. ವಿಶ್ವವಿದ್ಯಾಲಯದ ಬಿ.ಎಡ್.,ಕಾಲೇಜುಗಳಿಂದ ಪ್ರವೇಶಾತಿಶುಲ್ಕ ವಸೂಲಿಸದಿರುವುದು**<br><br>2018–19 ನೇ ಮತ್ತು 2019–20ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ಕೆಲವು ಕಾಲೇಜುಗಳಿಂದ ರೂ. 1,59,392/–ಪ್ರವೇಶಾತಿಶುಲ್ಕವನ್ನು ಕಡಿಮೆ ವಸೂಲಾತಿ ಮಾಡಿರುವುದು ಕಂಡು ಬಂದಿರುತ್ತದೆ. ಈ ಸಂಬಂಧ ಆಡಿಟ್ ವಿಚಾರಣಾ ಸಂಖ್ಯೆ,77/20–21, ದಿನಾಂಕ 18.08.2021 ರಲ್ಲಿ ವಿವರ ಕೋರಿದ್ದರೂ. ಸಮಂಜಸವಾದ ವಿವರಣೆ ನೀಡಿರುವುದಿಲ್ಲ. ಆದುದರಿಂದ ರೂ.76,133/– ಗಳನ್ನು ವಸೂಲಾತಿಯಲ್ಲಿಡಲಾಗಿದೆ. ವಿವರಗಳನ್ನು **ಅನುಬಂಧ–9**ರಲ್ಲಿ ಕಾಣಿಸಲಾಗಿದೆ. | 11.11) 2018-19 ಮತ್ತು 2019-20 ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ಕೆಲವು ಕಾಲೇಜುಗಳಿಂದ ಪ್ರವೇಶಾತಿ ಶುಲ್ಕ ರೂ,76,133 /- ಕಡಿಮೆ ವಸೂಲಿ ಮಾಡಿರುವುದಾಗಿ ಆಡಿಟ್ ಕಂಡಿಕೆಯಲ್ಲಿ ಆಕ್ಷೇಪಣೆ ವ್ಯಕ್ತಪಡಿಸಿದ್ದು, ಅದರಂತೆ ಸಂಬಂಧಪಟ್ಟ ಕಾಲೇಜುಗಳಿಂದ ಸದರಿ ಮೊತ್ತವನ್ನು ವಸೂಲಿ ಮಾಡಿ, ಬ್ಯಾಂಕಿಗೆ ಜಮೆ ಮಾಡಲಾಗಿದೆ.<br>ವಸೂಲಿ ಮಾಡಿದ ವಿವರಗಳ ತಃಖ್ತೆಯನ್ನು ಚಲನ್‌ಗಳೊಂದಿಗೆ ಲಗತ್ತಿಸಿ, ತಮ್ಮ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.<br><br>ಆದುದರಿಂದ ಸದರಿ ಕಂಡಿಕೆಯನ್ನು ಆಡಿಟ್ ವರದಿಯಿಂದ ಕೈ ಬಿಡಲು ಕೋರಿದೆ. |

| | |
|---|---|
| **11.12. ವಿಶ್ವವಿದ್ಯಾಲಯದ ಬಿ .ಎಡ್ ಕಾಲೇಜುಗಳಿಂದ ಕ್ರೀಡಾ ಶುಲ್ಕ ವಸೂಲಾತಿಗೆ ಸಂಬಂಧಿಸಿದಂತೆ.**<br>2018–19 ಮತ್ತು 2019–20 ನೇ ಸಾಲಿನಲ್ಲಿ ವಿಶ್ವವಿದ್ಯಾಲಯವು no. Aca/ 162/BED/CALENDER OF EVENTS/2018–19ದಿನಾಂಕ 13.12.2018 ಮತ್ತು bnu/BED/CALENDER OF EVENTS/01/2019–20, ದಿನಾಂಕ 18.10..2019ರಲ್ಲಿ, ಬಿ.ಎಡ್., ವಿದ್ಯಾರ್ಥಿಗಳ ಪ್ರವೇಶಾತಿಗೆ ಅಧಿಸೂಚನೆ ಹೊರಡಿಸಿದ್ದು. ಸದರಿ ಅಧಿಸೂಚನೆ ಪ್ರಕಾರ 1ನೇ ವರ್ಷ ಮತ್ತು2ನೇ ವರ್ಷದ ವಿದ್ಯಾರ್ಥಿಗಳಿಂದ ರೂ.121/– ಮತ್ತು ರೂ.133/– ರಂತೆ ಕ್ರೀಡಾ ಶುಲ್ಕ ವಸೂಲಿಸಬೇಕಾಗಿದ್ದು, ವಿಶ್ವವಿದ್ಯಾಲಯವು ವಸೂಲಾತಿ ಮಾಡಿರುವುದಿಲ್ಲ. ಈ ಸಂಬಂಧ ಅಡಿಟ್ ವಿಚಾರಣಾ ಸಂಖ್ಯೆ 77,ದಿನಾಂಕ18.08.2021 ರಲ್ಲಿ ವಿವರ ಕೋರಿದ್ದರೂ. ಯಾವುದೇ ಅನುಸರಣಾ ವರದಿಯನ್ನು ನೀಡಿರುವುದಿಲ್ಲ. ಆದುದರಿಂದ ರೂ 11,091/– ಮೊತ್ತವನ್ನು ವಸೂಲಾತಿಗೆ ಸೂಚಿಸಿದೆ. ವಿವರಗಳು ಈ ಕೆಳಕಂಡಂತಿವೆ.<br><br>**SPORTS** — **2018-19 AND 2019-20**<br>SCT college of education — (40 ವಿದ್ಯಾರ್ಥಿಗಳು * ರೂ121) 4840/-<br>Gold Field College Of Education — (47 ವಿದ್ಯಾರ್ಥಿಗಳು * ರೂ133) 6251/-<br>**Total** — **11091/-** | 11.12) |
| **11.13. 2018–19 ಮತ್ತು 2020–21 ನೇ ಸಾಲಿನವರೆಗೆ ಪ್ರವೇಶಾತಿ ಶುಲ್ಕದ ಸ್ವೀಕೃತಿಗಳನ್ನು ಬ್ಯಾಂಕ್ ಖಾತೆಯೊಂದಿಗೆ ಲೆಕ್ಕ ಸಮನ್ವಯಗೊಳಿಸದಿರುವುದು ಹಾಗೂ ಡಿ.ಸಿ.ಬಿ ನಿರ್ವಹಿಸದಿರುವುದು.**<br>ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ 2018–19 ಮತ್ತು 2020–21ನೇ ಸಾಲಿನವರೆಗಿನ ಕಾಲೇಜುಗಳ ವಿದ್ಯಾರ್ಥಿಗಳ ಸಂಖ್ಯೆ,ಪ್ರವೇಶಾತಿ ಶುಲ್ಕದ ಅಧಿಸೂಚನೆಗಳು, ಬೇಡಿಕೆ ಸ್ವೀಕೃತಿ ಬಾಕಿ ವಿವರ, ಕಡತ, ವಹಿ ಹಾಗೂ ಬ್ಯಾಂಕ್‌ಖಾತೆಯೊಂದಿಗೆ ಲೆಕ್ಕಸಮನ್ವಯಗೊಳಿಸಿದ ಧೃಡೀಕೃತ ಪ್ರತಿಯನ್ನು ವಿತ್ತಾಧಿಕಾರಿಗಳ ಸಹಿಯೊಂದಿಗೆ ಲೆಕ್ಕಪರಿಶೋಧನೆಗೆ ಒದಗಿಸಲು ವಿಚಾರಣಾ ಪತ್ರ ಸಂಖ್ಯೆ:79/20–21, ದಿನಾಂಕ:18.08.2021 ರಲ್ಲಿ ವಿವರಣೆ ಕೋರಲಾಗಿತ್ತು,ಆದರೆ ವಿಶ್ವವಿದ್ಯಾಲಯವು ಯಾವುದೇ ಅನುಸರಣೆ ಒದಗಿಸಿರುವುದಿಲ್ಲ, ಕರ್ನಾಟಕ ಆರ್ಥಿಕ ಸಂಹಿತೆ 1958 ಅನುಚ್ಛೇಧ 34ರ ರೀತ್ಯಾ ನಿಯಂತ್ರಣಾಧಿಕಾರಿಯು ವಸೂಲು ಮಾಡಿದ ಮತ್ತು ಸಂದಾಯ ಮಾಡಿದ ಮೊಬಲಗುಗಳ | 11.13) ಬೆಂಗಳೂರು ಉತ್ತರ ವಿಶ್ವವಿದ್ಯಾಲಯವು 2016-17 ರಿಂದ ಹೊಸದಾಗಿ ಪ್ರಾರಂಭವಾಗಿದ್ದ ಕಾರಣ ಹಾಗೂ ಈ ಸಂಸ್ಥೆಯಲ್ಲಿ ಖಾಯಂ ನೌಕರರು ಮತ್ತು ಲೆಕ್ಕಪತ್ರ ಶಾಖೆಯಲ್ಲಿ ಅನುಭವಿ ಸಿಬ್ಬಂದಿ ಇಲ್ಲದ್ದರಿಂದ ಮತ್ತು ಖಾಯಂ ಹಣಕಾಸು ಅಧಿಕಾರಿ ನೇಮಕವಾಗಿಲ್ಲದ ಕಾರಣ 2020 ರವರೆಗೂ ಸೂಕ್ತ ಲೆಕ್ಕಪತ್ರಗಳನ್ನು ನಿರ್ವಹಿಸಲು ಸಾಧ್ಯವಾಗಿರಲಿಲ್ಲ. 2020 ರ ಅಂತ್ಯಕ್ಕೆ ಹೆಚ್ಚುವರಿ ಪ್ರಭಾರದಲ್ಲಿ ಹಣಕಾಸು ಅಧಿಕಾರಿ ಕರ್ತವ್ಯದ ಜವಾಬ್ದಾರಿ ವಹಿಸಿಕೊಂಡ ನಂತರ ವಿಶ್ವವಿದ್ಯಾನಿಲಯದ ಹಣಕಾಸು ವಹಿವಾಟುಗಳನ್ನು ಲಭ್ಯವಿದ್ದ ದಾಖಲೆಗಳ ಆಧಾರದ ಮೇರೆಗೆ ಲೆಕ್ಕಪತ್ರದ ದತ್ತಾಂಶಗಳನ್ನು Tally ಮೂಲಕ ದಾಖಲಿಸಿ, ತದನಂತರ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ದಪಡಿಸಲಾಯಿತು. |

ಬಗ್ಗೆ ಬೇಡಿಕೆ, ವಸೂಲಿ, ಶಿಲ್ಕು ಲೆಕ್ಕಪತ್ರವನ್ನು ಮತ್ತು ತಃಖ್ತೆಗಳನ್ನು ಸಿದ್ಧಪಡಿಸಿ ಪ್ರಮಾಣೀಕರಿಸಬೇಕಾಗಿರುತ್ತದೆ ಹಾಗೂ ಅನುಚ್ಛೇದ 34(2) ರೀತ್ಯಾ ವಾಸ್ತವಿಕ ಜಮೆಗಳೊಂದಿಗೆ ಹೋಲಿಸಿ, ಸ್ವೀಕೃತಿಗಳ ಸಮನ್ವಯ ಪತ್ರವನ್ನು ತಯಾರಿಸಬೇಕಾಗುತ್ತದೆ.

ವಾರ್ಷಿಕ ಲೆಕ್ಕಪತ್ರಗಳಲ್ಲಿನ 2018–19 ಮತ್ತು 2019–20ನೇ ಸಾಲಿನಲ್ಲಿ ನಮೂದಿಸಿರುವ ಮೊತ್ತಕ್ಕೂ ಮತ್ತು ಬೇಡಿಕೆ ಪಟ್ಟಿಯಲ್ಲಿ ಒದಗಿಸಿರುವ ಮಹಿತಿಗೂ ಒಂದಕ್ಕೊಂದು ತಾಳೆಯಾಗಿರುವುದಿಲ್ಲ ಹಾಗೂ ಬೇಡಿಕೆ ಸ್ವೀಕೃತಿ ಬಾಕಿ ವಿವರಗಳು ಬ್ಯಾಂಕ್ ಖಾತೆಯೊಂದಿಗೆ ಲೆಕ್ಕಸಮನ್ವಯಗೊಳಿಸಿದ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ.ಲೆಕ್ಕಪರಿಶೀಲನೆಗೆ ಒದಗಿಸಿರುವ ಮಾಹಿತಿ ಪ್ರಕಾರ ರೂ.21,17,33,244/–ಗಳು ಸಂಯೋಜನಾ ಶುಲ್ಕ ಸ್ವೀಕೃತವಾಗಿದ್ದು, ವಾರ್ಷಿಕ ಲೆಕ್ಕಪತ್ರಗಳ ಪ್ರಕಾರ ರೂ.21,51,14,862/–ಗಳಷ್ಟು ಸಂಯೋಜನಾ ಶುಲ್ಕ ಸ್ವೀಕೃತವಾಗಿರುತ್ತದೆ. ಆದ್ದರಿಂದ ಪ್ರವೇಶಾತಿಶುಲ್ಕದ ಡಿ.ಸಿ.ಬಿ ಹಾಗೂ ಲೆಕ್ಕಸಮನ್ವಯಗೊಳಿಸಿದ ತಃಖ್ತೆಯನ್ನು ಮುಂದಿನ ಲೆಕ್ಕಪರಿಶೋಧನೆಗೆ ಒದಗಿಸಲು ಸೂಚಿಸಿದೆ. ವ್ಯತ್ಯಾಸದ ಮೊತ್ತ ರೂ.1,03,31,346/–ಗಳನ್ನು ವಸೂಲಾತಿಗೆ ಸೂಚಿಸಿದೆ. ವಿವರಗಳು ಈ ಕೆಳಕಂಡಂತಿವೆ.

2018–19ನೇ ಸಾಲಿನಲ್ಲಿ ವಾರ್ಷಿಕ ಲೆಕ್ಕಪತ್ರಗಳಿಗೂ ಮತ್ತು ಲೆಕ್ಕ ಪರಿಶೋಧನೆಗೆ ನೀಡಿರುವ ಮೊತ್ತದ ವ್ಯತ್ಯಾಸವು ರೂ.1,37,12,964/–ಗಳು ಹೆಚ್ಚುವರಿ ಆಗಿರುತ್ತದೆ. ಆದ್ದರಿಂದ 2019–20ರಲ್ಲಿ ಕಡಿಮೆ ವ್ಯತ್ಯಾಸದ ಮೊತ್ತ ರೂ.1,03,31,346/– ಗಳನ್ನು ವಸೂಲಾತಿಗೆ ಸೂಚಿಸಿದೆ.

| Year | As Per Information Given | As Per accounts Given | Difference |
|---|---|---|---|
| 2018/19 | 86778326 | 100491290 | -13712964 |
| 2019/20 | 124954918 | 114623572 | 10331346 |
| Total | 211733244 | 215114862 | |
| Actual difference | **10331346** | | |

ಆಡಿಟ್ ವರದಿಯ ಕಂಡಿಕೆ 11.13 ರಲ್ಲಿ 2018-19 ಹಾಗೂ 2019-20 ನೇ ಸಾಲಿನಲ್ಲಿ ಪ್ರವೇಶಾತಿ (Admission Fees) ಶುಲ್ಕದ ವಿವರಗಳು ಈ ಕೆಳಕಂಡಂತಿದೆ.

| Year | As per Information Given | As per Accounts Given |
|---|---|---|
| 2018-19 | Rs.8,67,78,326 | Rs.10,04,91,260 |
| 2019-20 | Rs.12,49,54,918 | Rs.11,46,23,572 |
| **Total** | **Rs.21,17,33,244** | **Rs.21,51,14,862** |

ಮೇಲ್ಕಂಡ ಅಂಕಿ ಅಂಶಗಳ ಆಧಾರ ಮೇರೆಗೆ 2019-20 ನೇ ಸಾಲಿನಲ್ಲಿ ರೂ.1,03,31,346/- (12,49,54,918 (-) 11,46,23,572=1,03,31,346) ವ್ಯತ್ಯಾಸ ಕಂಡುಬಂದಿದೆ ಎಂದು ಈ ಮೊತ್ತವನ್ನು ವಸೂಲಾತಿಗೆ ಸೂಚಿಸಲಾಗಿದೆ.

ಆದರೆ 2018-19 ಮತ್ತು 2019-20 ನೇ ಸಾಲುಗಳ ಒಟ್ಟಾರೆ ಮೊತ್ತವನ್ನು ತೆಗೆದುಕೊಂಡಿದ್ದಲ್ಲಿ ಕೇವಲ ರೂ.33,81,618 ಆಗಿರುತ್ತದೆ (21,51,14,862 (-) 21,17,33,244=33,81,618).

ಮೇಲೆ ವಿವರಿಸಿರುವ ಘೋಷ್ವಾರೆಯಲ್ಲಿ ಆಡಿಟ್ ಮಾಡುವ ಸಂಧರ್ಭದಲ್ಲಿ ಪ್ರವೇಶಾತಿ ಶುಲ್ಕ 2018-19 ಮತ್ತು 2019-20 ನೇ ಸಾಲಿಗೆ ಮೇಲ್ಕಂಡಂತೆ ಆಡಿಟ್ ಸಿಬ್ಬಂದಿಗೆ ಮಾಹಿತಿಯನ್ನು ನೀಡಿರುತ್ತಾರೆ.

ಆಡಿಟ್ ಸಿಬ್ಬಂದಿಗೆ ತುರ್ತಾಗಿ ಮಾಹಿತಿಯನ್ನು ನೀಡಬೇಕಾಗಿದ್ದ ಅನಿವಾರ್ಯವಾಯಿತು. ಆಗ ಬ್ಯಾಂಕ್ ಖಾತೆಯೊಂದಿಗೆ ತಾಳೆ ಮಾಡಿರಲಿಲ್ಲವಾದ್ದರಿಂದ ಮಾಹಿತಿಯು ತಪ್ಪಾಗಿರುತ್ತದೆ.

ಈಗ ನಗದು ಪುಸ್ತಕ ಹಾಗೂ ಬ್ಯಾಂಕ್ ಖಾತೆಯೊಂದಿಗೆ ತಾಳೆ ಮಾಡಿ (Reconciliation) DCB ನಿರ್ವಹಿಸಿದೆ. ಅದರಂತೆ 2018-19 ಮತ್ತು 2019-20 ನೇ ಸಾಲಿನಲ್ಲಿ ಪ್ರವೇಶಾತಿ ಶುಲ್ಕ ರೂ.23,86,50,811/- ಗಳಾಗಿದ್ದು, ಇದು ಸರಿಯಾದ ಮಾಹಿತಿಯಾಗಿರುತ್ತದೆ. ಈ ಅಂಶವನ್ನು ಪರಿಗಣಿಸಬಹುದಾಗಿದೆ.

**2018-19 ಮತ್ತು 2019-20 ನೇ ಸಾಲಿನ ಪ್ರವೇಶಾತಿ ಶುಲ್ಕದ ವಸೂಲಾತಿ ವಿವರಗಳು ಈ ಕೆಳಕಂಡಂತಿದೆ.**

| | Name of the Course | | | | | |
|---|---|---|---|---|---|---|
| **Year** | **UG** | **PG** | **B.ed** | **B.ped** | **PG Counciling** | **Total** |
| 2018-19 | ₹69030933 | ₹12697731 | ₹5756575 | ₹818296 | ₹17720205 | ₹106023740 |
| 2019-20 | ₹89996496 | ₹16179212 | ₹6234006 | ₹961925 | ₹19255432 | ₹132627071 |
| **G.Total** | **₹159027429** | **₹28876943** | **₹11990581** | **₹1780221** | **₹36975637** | **₹238650811** |

ಮೇಲ್ಕಂಡಂತೆ UG, PG, B.Ed, B.PEd ಮತ್ತು PG Counciling 2018-19 ಹಾಗು 2019-20 ನೇ ಸಾಲಿಗೆ ಒಟ್ಟಾರೆ ರೂ.23,86,50,811/-ಗಳನ್ನು ವಸೂಲಿ ಮಾಡಲಾಗಿದ್ದು, DCB ಹಾಗು ಬ್ಯಾಂಕ್ ಖಾತೆಗೆ ತಾಳೆ (Reconciliation) ಮಾಡಲಾಗಿದೆ.

ಆಡಿಟ್ ವರದಿಯಲ್ಲಿ ಸೂಚಿಸಿರುವ ಮೊತ್ತಕ್ಕಿಂತ ಹೆಚ್ಚಾಗಿ ವಸೂಲಿ ಮಾಡಲಾಗಿದೆ.

ಕೆಲವು ಸಂಧರ್ಭಗಳಲ್ಲಿ ಹಳೆಯ ಸಾಲುಗಳ ಬಾಕಿಯನ್ನು ಮುಂಬರುವ ಸಾಲುಗಳಲ್ಲಿ ಜಮೆ ಆಗಿರುತ್ತದೆ. ಆದುದರಿಂದ ವ್ಯತ್ಯಾಸ ಕಂಡುಬಂದಿರಬಹುದು.

ಆದುದರಿಂದ ರೂ.1,03,31,346/-ಗಳನ್ನು ವಸೂಲಿ ಮಾಡುವ ಅವಶ್ಯಕತೆ ಇರುವುದಿಲ್ಲ. ಇದಕ್ಕೆ ಸಂಬಂಧಪಟ್ಟ DCB ಯನ್ನು ಇದರೊಂದಿಗೆ ಲಗತ್ತಿಸಿದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ತಮ್ಮ ಅವಗಾಹನೆಗೆ ಹಾಗು ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ. ಆದುದರಿಂದ ತಾವು ದಯವಿಟ್ಟು ಸದರಿ ಕಂಡಿಕೆಯನ್ನು ಆಡಿಟ್ ವರದಿಯಿಂದ ಕೈ ಬಿಡಬೇಕಾಗಿ ತಮ್ಮಲ್ಲಿ ಕೋರಿದೆ.

**11.14. ಯು.ಜಿ ವಿದೇಶಿ ವಿದ್ಯಾರ್ಥಿಗಳಿಂದ ಅರ್ಹತಾ ಶುಲ್ಕವನ್ನು ವಸೂಲಿಸದಿರುವುದು.**

2018-19 ಮತ್ತು 2019-20ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ಅಧಿಸೂಚನೆ ಸಂಖ್ಯೆ.BNU/ Acad/UG.Ad/46/2019-20 ದಿನಾಂಕ: 16.05.2019 ರ ಪ್ರವೇಶ ವಿದೇಶಿ ವಿದ್ಯಾರ್ಥಿಗಳಿಂದ 2018-19 ನೇ ಸಾಲಿನಲ್ಲಿ ರೂ. 8790/- ರಂತೆ ಮತ್ತು 2019-20ನೇ ಸಾಲಿನಲ್ಲಿ ರೂ.9670/- ರಂತೆ ಅರ್ಹತಾ ಶುಲ್ಕ ವಸೂಲಿಸಬೇಕಾಗಿದ್ದು.ವಿಶ್ವವಿದ್ಯಾಲಯವು ಕೆಲವೊಂದು ವಿದ್ಯಾರ್ಥಿಗಳಿಂದ ಅರ್ಹತಾ ಶುಲ್ಕವನ್ನುವಸೂಲಿಸದಿರುವುದು ಕಂಡು ಬಂದಿರುತ್ತದೆ.ಈ ಸಂಬಂಧ ಲೆಕ್ಕ ಪರಿಶೋಧನಾ ಸಂಖ್ಯೆ 77,/20-21, ದಿನಾಂಕ 18.08.2021 ರಲ್ಲಿ ವಿವರ ಕೋರಿದ್ದರೂ. ಯಾವುದೇ ವಿವರಣೆ ನೀಡಿರುವುದಿಲ್ಲ. ಆದ್ದರಿಂದ, ರೂ. 2,51,860/- ಗಳನ್ನು ವಸೂಲಾತಿಯಲ್ಲಿಡಲಾಗಿದೆ.ವಿವರವನ್ನು **ಅನುಬಂಧ-10** ರಲ್ಲಿ ಕಾಣಿಸಲಾಗಿದೆ.

11.14)

**11.15. ಯು.ಜಿ., ಪಿ.ಜಿ ವಿದ್ಯಾರ್ಥಿಗಳಿಂದ ಕ್ರೀಡಾ ಶುಲ್ಕ ವಸೂಲಾತಿ ಮಾಡದೇ ಇರುವುದು**

ವಿಶ್ವವಿದ್ಯಾಲಯವು 2018-19ನೇ ಮತ್ತು 2019-20 ನೇ ಸಾಲಿನಲ್ಲಿ ಅಧಿಸೂಚನೆ ಸಂಖ್ಯೆ no.BNU/ Acad/ UG.ad/Fee/415/2019-20 ದಿನಾಂಕ.16.05.2019 ರ ಪ್ರಕಾರ 2ನೇ ವರ್ಷದ ಯು.ಜಿ ವಿದ್ಯಾರ್ಥಿಗಳಿಗೆ ರೂ. 667/- ರಂತೆ, ಕ್ರೀಡಾ ಶುಲ್ಕವನ್ನು ಮತ್ತು ಅಧಿಸೂಚನೆ ಸಂಖ್ಯೆ: no. Aca/P.G/ Ad.Approval 2019-20 ದಿನಾಂಕ:16.11.2019ರ ಪ್ರಕಾರ ಪಿ.ಜಿ ವಿದ್ಯಾರ್ಥಿಗಳಿಗೆ ರೂ. 1850/- ರಂತೆ, ಕ್ರೀಡಾ ಶುಲ್ಕವನ್ನು ವಸೂಲಿಸಬೇಕಾಗಿರುತ್ತದೆ.ಈ ಸಂಬಂಧ ಆಡಿಟ್ ವಿಚಾರಣಾ ಸಂಖ್ಯೆ-77, ದಿನಾಂಕ 18.08.2021 ದಲ್ಲಿ ವಿವರಣೆ ಕೋರಿದ್ದರೂ.ಸಮಂಜಸವಾದ ಮಾಹಿತಿ ನೀಡಿರುವುದಿಲ್ಲ. ಆದುದರಿಂದ, ರೂ. 5,77,312/- ಗಳನ್ನು ವಸೂಲಾತಿಯಲ್ಲಿಡಲಾಗಿದೆ. ವಿವರಗಳು ಈ ಕೆಳಕಂಡಂತಿವೆ.

| Sl no | District | Fees | No of students | Total fees | College name |
|---|---|---|---|---|---|
| 1 | Kolara | 1850 | 150 | 277500 | GFGC college kolara |
| 2 | Bangalore rural | 667 | 186 | 124062 | Kyathi Degree College |
| 3 | Bangalore rural | 1850 | 95 | 175750 | Regional College |
| **TOTAL** | | | | **577312** | |

11.15)

| | |
|---|---|
| **11.16. ಪಿ.ಜಿ ಪ್ರವೇಶಾತಿಗೆ ಸಂಬಂಧಿಸಿದಂತೆ, ದಂಡ ಶುಲ್ಕ ವಸೂಲಿಸದಿರುವುದು.**<br><br>2018–19 ಮತ್ತು 2019–20ನೇ ಸಾಲಿನಲ್ಲಿ ವಿಶ್ವವಿದ್ಯಾಲಯ ಅಧಿಸೂಚನೆ ಸಂಖ್ಯೆ ನಂ.BNU/PG/Adm-approval/ 2018–19 ದಿನಾಂಕ: 21.12.2018 ಮತ್ತು ಅಧಿಸೂಚನೆ ಸಂಖ್ಯೆ: ನಂ. Aca/P.G/AD.APPROVAL /2019–20 ದಿನಾಂಕ: 16.01.2019 ರ ಪ್ರಕಾರವಾಗಿ 2018–19 ರಲ್ಲಿ 31.12.2018ನ್ನು ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕವಾಗಿ, 2019–20 ರಲ್ಲಿ ದಿನಾಂಕ 16.12.2019 ನ್ನು ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕವಾಗಿ ನಿಗದಿಪಡಿಸಲಾಗಿದ್ದು. ನಂತರ ಬಂದ ಅರ್ಜಿಗಳಿಗೆ 2018–19 ರಲ್ಲಿ ದಿನಕ್ಕೆ ರೂ.1000/– ರಂತೆ 2019–20ರಲ್ಲಿ ದಿನಕ್ಕೆ ರೂ.2000/– ರಂತೆ ದಂಡ ಶುಲ್ಕವನ್ನು ವಿಧಿಸಲಾಗಿದೆ.ಆದರೆ, ವಿಶ್ವವಿದ್ಯಾಲಯವು ದಂಡ ಶುಲ್ಕವನ್ನು ವಸೂಲಿಸದಿರುವುದು. ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದಿರುತ್ತದೆ.ಈ ಸಂಬಂಧ ಆಡಿಟ್ ವಿಚಾರಣಾ ಸಂಖ್ಯೆ–77, ದಿನಾಂಕ 18.08.2021 ರಲ್ಲಿ ವಿವರ ಕೋರಿದ್ದರೂ, ಯಾವುದೇ ಉತ್ತರವನ್ನು ನೀಡಿರುವುದಿಲ್ಲ ಆದುದರಿಂದ ರೂ.2,48,000/–ಗಳನ್ನು ವಸೂಲಾತಿಯಲ್ಲಿಡಲಾಗಿದೆ.ವಿವರವನ್ನು **ಅನುಬಂಧ –11** ರಲ್ಲಿ ಕಾಣಿಸಲಾಗಿದೆ. | 11.16) |
| **11.17. .ಪಿ.ಜಿ ಕಾಲೇಜುಗಳಿಂದ ಕ್ರೀಡಾ ಶುಲ್ಕಕ್ಕೆ ಸಂಬಂಧಿಸಿದಂತೆ.**<br><br>2019–20ನೇ ಸಾಲಿನಲ್ಲಿ ವಿಶ್ವವಿದ್ಯಾಲಯವು ಅಧಿಸೂಚನೆ ಸಂಖ್ಯೆNo.Aca/P.G/Ad.Approval/ 2019–20 ದಿನಾಂಕ 16.11.2019 ರಲ್ಲಿ ಪಿ.ಜಿ ವಿದ್ಯಾರ್ಥಿಗಳ 2 ನೇ ವರ್ಷದ ಪ್ರವೇಶಾತಿಗೆ ಅಧಿಸೂಚನೆ ಹೊರಡಿಸಿದ್ದು. ಸದರಿ ಅಧಿಸೂಚನೆ ಪ್ರಕಾರ ಎಂ.ಬಿ.ಎ ಮತ್ತು ಎಂ.ಸಿ.ಎ , ಎಂ.ಟಿ.ಟಿ.ಎಂ., ಪಿ.ಜಿ. ಡಿಪ್ಲೊಮೊ ಕೋರ್ಸುಗಳನ್ನು ಹೊರಡುಪಡಿಸಿ ಬೇರೆ ಕೋರ್ಸುಗಳಿಗೆ ರೂ.2,035/– ರಂತೆಕ್ರೀಡಾ ಶುಲ್ಕ ವಸೂಲಿಸಬೇಕಿರುತ್ತದೆ.ಆದರೆ, ವಿಶ್ವವಿದ್ಯಾಲಯವು ರೂ.1,850/– ಮತ್ತು ರೂ.1,600/– ರಂತೆ, ಶುಲ್ಕ ವಸೂಲಿಸಿದ್ದು.ಈ ಸಂಬಂಧ,ಆಡಿಟ್ ವಿಚಾರಣಾ ಸಂಖ್ಯೆ.77, ದಿನಾಂಕ: 18.08.2021 ರಲ್ಲಿ ವಿವರ ಕೋರಿದ್ದರೂ,ಯಾವುದೇ ಅನುಸರಣಾ ವರದಿಯನ್ನು ನೀಡಿರುವುದಿಲ್ಲ. ಆದುದರಿಂದ,ರೂ. 4,53,450/– ಮೊತ್ತವನ್ನು ವಸೂಲಾತಿಗೆ ಸೂಚಿಸಿದೆ. ವಿವರವನ್ನು **ಅನುಬಂಧ–12** ರಲ್ಲಿ ಕಾಣಿಸಲಾಗಿದೆ. | 11.17) |

| | |
|---|---|
| **11.19. ಯುನಿವರ್ಸಿಟಿ ಕೋಟಾದಡಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಪ್ರವೇಶಾತಿ ಶುಲ್ಕ ಪಾವತಿ ಮಾಡಿರುವುದರ ಬಗ್ಗೆ ಮಾಹಿತಿ ಇಲ್ಲದಿರುವುದು**<br><br>2018–19 ಮತ್ತು 2019–20ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ಅಧಿಸೂಚನೆ ಸಂಖ್ಯೆ:No.BNU/PG/Adm/Approval/2018–19, ದಿನಾಂಕ: 21.12.2018ರ ಪ್ರಕಾರ ಪ್ರತಿ ವಿದ್ಯಾರ್ಥಿಗೆ ರೂ. 3,870/– ನಂತೆ ಕರ್ನಾಟಕದ ವಿದ್ಯಾರ್ಥಿಗಳಿಗೆ ಮತ್ತು ವಿಶ್ವವಿದ್ಯಾಲಯದ ಅಧಿಸೂಚನೆ ಸಂಖ್ಯೆ No. Aca/P.G/Ad.Approval/2019–20, ದಿನಾಂಕ: 16.01.2019 ರ ಪ್ರಕಾರ ಪ್ರತಿ ಕರ್ನಾಟಕ ರಾಜ್ಯದ ವಿದ್ಯರ್ಥಿ ರೂ. 4,565/– ನಂತೆ ಶುಲ್ಕ ಪಾವತಿ ವಸೂಲಿ ಮಾಡಬೇಕಾಗಿರುತ್ತದೆ. ಆದರೆ, ವಿಶ್ವವಿದ್ಯಾಲಯವು ಯುನಿವರ್ಸಿಟಿ ಕೋಟಾದಡಿ ಆಯ್ಕೆಯಾದ ಖಾಸಗಿ ಕೋಟಾಗಳಿಂದ ಕೇವಲ ಅರ್ಜಿ ಶುಲ್ಕ ರೂ.330/– ನ್ನು ಮಾತ್ರ ವಸೂಲಿ ಮಾಡಿರುವುದಕ್ಕೆ ದಾಖಲಾತಿ ಒದಗಿಸಿದ್ದು, ಉಳಿದ ಮೊತ್ತಕ್ಕೆ ಯಾವುದೇ ದಾಖಲೆ ಒದಗಿಸಿರುವುದಿಲ್ಲ. ಈ ಸಂಬಂಧ ಲೆಕ್ಕ ವಿಚಾರಣಾ ಸಂಖ್ಯೆ.78/20–21, ದಿನಾಂಕ: 18.08.2021 ರಲ್ಲಿ ವಿವರ ಕೋರಿದ್ದರೂ ಯಾವುದೇ ವಿವರಣೆ ನೀಡಿರುವುದಿಲ್ಲ. ಆದುದರಿಂದ ರೂ. 15,92,300/– ಗಳನ್ನು ವಸೂಲಾತಿಗೆ ಸೂಚಿಸಿದೆ. ವಿವರವನ್ನು **ಅನುಬಂಧ–14** ರಲ್ಲಿ ಕಾಣಿಸಲಾಗಿದೆ. | 11.19) |
| **11.21. ವಿಶ್ವವಿದ್ಯಾಲಯದ ಯು.ಜಿ ಮತ್ತು ಪಿ.ಜಿ ಕಾಲೇಜುಗಳಿಂದ ಪ್ರವೇಶಾತಿ ಅನುಮೋದನೆ ಶುಲ್ಕ ವಸೂಲಿಸದಿರುವುದು**<br><br>2018–19 ನೇ ಮತ್ತು 2019–20ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ಕೆಲವು ಕಾಲೇಜುಗಳಿಂದ ಪ್ರವೇಶಾತಿ ಶುಲ್ಕವನ್ನು ಕಡಿಮೆ ವಸೂಲಾತಿ ಮಾಡಿರುವುದು ಕಂಡು ಬಂದಿರುತ್ತದೆ.ಈ ಸಂಬಂಧ ಆಡಿಟ್ ವಿಚಾರಣಾ ಸಂಖ್ಯೆ.77/20–21, ದಿನಾಂಕ18.08.2021 ರಲ್ಲಿ ವಿವರ ಕೋರಿದ್ದರೂ. ಸಮಂಜಸವಾದ ವಿವರಣೆ ನೀಡಿರುವುದಿಲ್ಲ. ಆದುದರಿಂದ, ರೂ.20,74,691/–ಗಳನ್ನು ವಸೂಲಾತಿಯಲ್ಲಿಡಲಾಗಿದೆ. ವಿವರವನ್ನು **ಅನುಬಂಧ–16**ರಲ್ಲಿ ಕಾಣಿಸಲಾಗಿದೆ. | 11.21) |

| | |
|---|---|
| **11.22. ಪಿ.ಜಿ ವಿದೇಶಿ ವಿದ್ಯಾರ್ಥಿಗಳ ಹೆಚ್ಚುವರಿ ಅರ್ಹತಾ ಶುಲ್ಕ ವಸೂಲಿಸದಿರುವುದು.**<br><br>2018–19ನೇ ಸಾಲಿನ ಪಿಜಿ ವಿದೇಶಿ ವಿದ್ಯಾರ್ಥಿಗಳ ಹೆಚ್ಚುವರಿ ಅರ್ಹತಾ ಶುಲ್ಕಗಳಅಧಿಸೂಚನೆಯಂತೆ ಪಿ.ಜಿ ವಿದೇಶಿ/ಎನ್.ಆರ್.ಐ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಅರ್ಹತಾ ಶುಲ್ಕಗಳನ್ನು $2000ಮತ್ತು 2019–20ರಲ್ಲಿ ಪ್ರತಿ ವಿದ್ಯಾರ್ಥಿಯಿಂದ ಹೆಚ್ಚುವರಿ ಅರ್ಹತಾ ಶುಲ್ಕಗಳನ್ನು $2000 ಗಳನ್ನುನಿಯಮಾನುಸಾರ ವಸೂಲಿ ಮಾಡುವಂತೆ ಅಧಿಸೂಚಿಸಲಾಗಿದ್ದು, ಒಟ್ಟು ವಸೂಲಿಸಿದ ರಶೀದಿ, ವಿವರಗಳನ್ನು ಹಾಗೂ ಸಂಬಂಧಪಟ್ಟ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲು ವಿಚಾರಣಾ ಪತ್ರ ಸಂಖ್ಯೆ:77/20–21 ದಿನಾಂಕ:18.08.2021ರಲ್ಲಿ ಕೋರಲಾಗಿತ್ತು, ವಿಶ್ವವಿದ್ಯಾಲಯವುಯಾವುದೇ ಅನುಸರಣೆ ಒದಗಿಸಿರುವುದಿಲ್ಲ.<br><br>ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಅಧಿನಿಯಮ 2000 ಪ್ರಕರಣ 46(1)(ಡಿ) ರೀತ್ಯಾ ಫೀಸುಗಳು ವಿಶ್ವವಿದ್ಯಾಲಯ ನಿಧಿಯ ಭಾಗವಾಗಿರುತ್ತದೆ. ಕರ್ನಾಟಕ ಆರ್ಥಿಕ ಸಂಹಿತೆ 11ರ ರೀತ್ಯಾ ಬರಬೇಕಾದ ಹಣವು ಕಾಲಕಾಲಕ್ಕೆ ಸರಿಯಾಗಿ ಸಂದಾಯವಾಗಬೇಕಾಗಿರುವುದು ಸಂಬಂಧಪಟ್ಟ ಇಲಾಖೆಯ/ವಿಶ್ವವಿದ್ಯಾಲಯದ ಜವಾಬ್ದಾರಿಯಾಗಿರುತ್ತದೆ.<br><br>ನಿಗಧಿಪಡಿಸಿದ ಹೆಚ್ಚುವರಿ ಅರ್ಹತಾ ಶುಲ್ಕ ವಸೂಲಿಸದಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿದ್ದು, ಇದು ವಿಶ್ವವಿದ್ಯಾಲಯ ನಿಧಿಗೆ ಆಗಿರುವ ನಷ್ಟವಾಗಿರುತ್ತದೆ. ಹೆಚ್ಚುವರಿ ಅರ್ಹತಾ ಶುಲ್ಕವನ್ನು ಸಂಬಂಧಪಟ್ಟ ಕಾಲೇಜುಗಳಿಂದ ಮೊತ್ತ ರೂ.11,32,120/– ಗಳನ್ನು ವಸೂಲಿಸಿ, ವಿಶ್ವವಿದ್ಯಾಲಯದ ನಿಧಿಗೆ ಜಮೆಮಾಡಲು ಸೂಚಿಸಿದೆ. ವಿವರವನ್ನು **ಅನುಬಂಧ–17**ರಲ್ಲಿ ಕಾಣಿಸಲಾಗಿದೆ. | 11.22) |

| | |
|---|---|
| **12.1. ಕೆಮಿಕಲ್ಸ್ ಖರೀದಿ ಟೆಂಡರ್‌ಗೆ ಸಂಬಂಧಿಸಿದ ನ್ಯೂನತೆಗಳು**<br><br>2019-20ನೇ ಸಾಲಿನಲ್ಲಿ ವಿಶ್ವವಿದ್ಯಾಲಯಕ್ಕೆ ಅಗತ್ಯವಿರುವ ಕೆಮಿಕಲ್ಸ್/ಲ್ಯಾಬ್ ಉಪಕರಣಗಳನ್ನು ಖರೀದಿಸಿದ್ದು, ಸದರಿ ಟೆಂಡರ್‌ಗೆ ಸಂಬಂಧಿಸಿದಂತೆ ಈ ಕೆಳಕಂಡ ನ್ಯೂನತೆಗಳನ್ನು ನಮೂದಿಸಲಾಗಿದೆ.<br><br>➢ ಸದರಿ ಟೆಂಡರ್ ಎರಡನೇ ಕರೆಯಾಗಿದ್ದು, ಎರಡನೇ ಕರೆಗೆ ಸಂಬಂಧಿಸಿದ ಸೂಕ್ತ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ.<br>➢ ಸದರಿ ಟೆಂಡರ್ ಕಡತದಲ್ಲಿ, ತಾಂತ್ರಿಕ ಸಮಿತಿಯ ಮೌಲ್ಯಮಾಪನ ವರದಿ, ತುಲನಾತ್ಮಕ ಪಟ್ಟಿಗೆ ಸಂಬಂಧಿಸಿದ ಅಧಿಕಾರಿಗಳು ದೃಢೀಕರಿಸಿರುವುದಿಲ್ಲ.<br>➢ ಸರಬರಾಜು ಆದೇಶವು ದಿನಾಂಕ: 08.03.2019ಕ್ಕೆ ನೀಡಿದ್ದು, ಬಿಲ್‌ನ ದಿನಾಂಕ:06.06.2019 ಕಂಡುಬಂದಿರುತ್ತದೆ ಮತ್ತು ಕೆಮಿಕಲ್ಸ್ ಗಳನ್ನು ದಿನಾಂಕ:16.10.2019 ಕ್ಕೆ ತಡವಾಗಿ ದಾಸ್ತಾನು ತೆಗೆದು ಕೊಂಡಿರುತ್ತಾರೆ.<br>➢ ಸರಬರಾಜು ಆದೇಶದ ಪ್ರಕಾರ 15 ದಿನಗಳಲ್ಲಿಕೆಮಿಕಲ್ಸ್ ಸರಬರಾಜು ಮಾಡಬೇಕೆಂದು ತಿಳಿಸಿದ್ದರೂ ತಡವಾಗಿ ಸರಬರಾಜು ಮಾಡಲಾಗಿದೆ. ಈ ಸಂಬಂಧದಂಡ ಶುಲ್ಕವನ್ನು ವಸೂಲಾತಿ ಮಾಡಿರುವುದಿಲ್ಲ.<br>➢ ಸದರಿ ಪಾವತಿಗೆ ಶೇ 2% ಜಿ ಎಸ್ ಟಿ ಕಟಾವಣೆ ಮಾಡಿರುವುದಿಲ್ಲ.<br>➢ ಈ ಸಂಬಂಧ, ಲೆಕ್ಕತಪಾಸಣಾ ಸಂಖ್ಯೆ:50/20-21 ದಿನಾಂಕ:01.07.2021ರಲ್ಲಿ ವಿವರಣೆ ಕೋರಿದ್ದರೂ, ಸಮರ್ಪಕವಾದ ವಿವರಣೆ ನೀಡಿರುವುದಿಲ್ಲ. ಆದುದರಿಂದ ರೂ.3,81,762/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ ಮತ್ತು ಮೂಲ ಬೆಲೆಯ ಮೇಲೆ ,ಜಿ.ಎಸ್.ಟಿ. ಮೊತ್ತ ರೂ.6,582/-ಗಳನ್ನು ವಸೂಲಾತಿಯಲ್ಲಿಡಲಾಗಿದೆ. | 12.1) |

| | |
|---|---|
| **12.6. ವಿಶ್ವವಿದ್ಯಾಲಯಕ್ಕೆ ಪೀಠೋಪಕರಣಾ ಖರೀದಿಗೆ ಸಂಬಂಧಿಸಿದಂತೆ. ಜಿ.ಎಸ್.ಟಿ. ಕಟಾವಣೆ ಮಾಡದಿರುವುದು**<br><br>2018–19 ನೇ ಸಾಲಿನಲ್ಲಿ ವಿಶ್ವವಿದ್ಯಾಲಯಕ್ಕೆ ಕೆ.ಎಸ್.ಐ.ಎಸ್ ಅಂಡ್ ಮಾರ್ಕೆಟಿಂಗ್ ಕೋ ಆಪರೇಟೆವ್ ಲಿಮಿಟೆಡ್ ರವರಿಂದ ಧನಾದೇಶ ಸಂಖ್ಯೆ. 945874, ದಿನಾಂಕ: 07.04.2019 ರಲ್ಲಿ ರೂ.1,14,21,033/– ಗಳನ್ನು ಮತ್ತು ಧನಾದೇಶ ಸಂಖ್ಯೆ 945869 ದಿನಾಂಕ: 07.02.2019 ರಲ್ಲಿ ರೂ. 73,61,847/– ಗಳನ್ನು ಪೀಠೋಪಕರಣಾ ಖರೀದಿಗೆ ಪಾವತಿ ಮಾಡಲಾಗಿದೆ. ಈ ಸಂಬಂಧ ಲೆಕ್ಕಪರಿಶೋಧನೆಯಲ್ಲಿ ಕೆಳಕಂಡ ನ್ಯೂನತೆಗಳನ್ನು ಗಮನಿಸಲಾಗಿದೆ.<br><br>• ಸದರಿ ಟೆಂಡರ್ ಅಲ್ಪಾವಧಿ ಟೆಂಡರ್ ಆಗಿರುತ್ತದೆ. ಕೇವಲ 15 ದಿನಗಳ ಕಾಲಾವಕಾಶವನ್ನು ನೀಡಲಾಗಿದೆ.<br>• ಪೀಠೋಪಕರಣದ ಟೆಂಡರ್ ಅಧಿಸೂಚನೆಯಲ್ಲಿ ಅಂದಾಜು ಮೌಲ್ಯವನ್ನು ನಮೂದಿಸಿರುವುದಿಲ್ಲ ಆದುದರಿಂದ ಟೆಂಡರ್‌ನಲ್ಲಿ 4 ಬಿಡ್ದುದಾರರಾಗಿ ಆಯ್ಕೆಯಾದ ಸಂಸ್ಥೆಯು, ನಮೂದಿಸಿರುವ ದರವು. ಪೀಠೋಪಕರಣಾದ ಮಾರುಕಟ್ಟೆ ಮೌಲ್ಯಕ್ಕಿಂತ ಕಡಿಮೆ ಇದೆಯೆ? ಅಥವಾ ಸಮನಾಂತರವಾಗಿದೆಯೇ? ಎಂಬುದನ್ನು ಲೆಕ್ಕಪರಿಶೋಧನೆಯಲ್ಲಿ ಸ್ಪಷ್ಟೀಕರಿಸಲು ನೀಡಾಗಿರುವುದಿಲ್ಲ.<br>• ಸದರಿ ಪಾವತಿಗೆ ಸಂಬಂಧಸಿದಂತೆ, ಮೂಲ ಬೆಲೆಯ ಮೇಲೆ ರೂ. 3,23,843/– ಗಳ ಜಿ.ಎಸ್.ಟಿ ಕಟಾವಣೆ ಮಾಡಿರುವುದಿಲ್ಲ.<br>• ಪೀಠೋಪಕರಣ ಖರೀದಿಗೆ ಸರಬರಾಜು ಆದೇಶ ದಿನಾಂಕ: 01.03.2019 ರಂದು ನೀಡಿದ್ದು ಸರಬರಾಜು ಮಾಡುವ ಸಂಸ್ಥೆಯೊಂದಿಗೆ ದಿನಾಂಕ:03.04.2019 ರಂದು ಒಪ್ಪಂದ ಮಾಡಿಕೊಳ್ಳಲಾಗಿದೆ. ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಳ್ಳದೇ ಸರಬರಾಜು ಆದೇಶ ನೀಡಿರುವುದು ಲೆಕ್ಕಪರಿಶೊಧನೆಯಲ್ಲಿ ಕಂಡು ಬಂದಿದೆ.<br>• ಪೀಠೋಪಕರಣಗಳ ಗುಣಮಟ್ಟದ ವರದಿಯಲ್ಲಿ ಯಾವ ಮಾದರಿಯ ಮರವನ್ನು ಬಳಸಿದ್ದಾರೆ ಎಂಬುದನ್ನು ಸ್ಪಷ್ಟೀಕರಣ ನೀಡಿರುವುದಿಲ್ಲ.<br>• ವಿಶ್ವವಿದ್ಯಾಲಯವು ಮುಂದಿನ ಖರೀದಿಯಲ್ಲಿ ಈ ಕೆಳಕಂಡ ಎಲ್ಲಾ ನ್ಯೂನತೆಗಳನ್ನು | 12.6) |

ಸರಿಪಡಿಸಿಕೊಂಡು ಇಂತಹ ನ್ಯೂನತೆಗಳು ಮರುಕಳಿಸದಂತೆ ಕ್ರಮವಹಿಸಲು ಸೂಚಿಸಿದೆ.

ಮೇಲ್ಕಂಡ ನ್ಯೂನತೆಗಳನ್ನು ಮುಂದಿನ ಖರೀದಿ ಪ್ರಕ್ರಿಯೆಯಲ್ಲಿ ಅಳವಡಿಸಿಕೊಳ್ಳಲು ಸೂಚಿಸಿದೆ.ಮೂಲ ಬೆಲೆಯ ಮೇಲೆ ಕಟಾಯಿಸದಿರುವ ಜಿ.ಎಸ್.ಟಿ ಮೊತ್ತ ಒಟ್ಟು ರೂ.3,23,843/– ಗಳನ್ನು ವಸೂಲಾತಿಯಲ್ಲಿಡಲಾಗಿದೆ.

**12.7. .ಪರೀಕ್ಷಾ ಉತ್ತರ ಪತ್ರಿಕೆಗಳ (Answer Booklet) ಮುದ್ರಣಕ್ಕೆ ಅಲ್ಪಾವಧಿ ಟೆಂಡರ್‌ಗೆ ಸಂಬಂಧಿಸಿದ ನ್ಯೂನತೆಗಳು**

2018–19ನೇ ಸಾಲಿನಲ್ಲಿ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಪರೀಕ್ಷಾ ಉತ್ತರ ಪತ್ರಿಕೆಗಳ ಮುದ್ರಣಕ್ಕೆ ಸಂಬಂಧಿಸಿದ ಕಡತಗಳನ್ನು ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಲಾಗಿ ಹೈಟೆಕ್ ಪ್ರಿಂಟ್ ಸಿಸ್ಟಮ್ ಲಿಮಿಟೆಡ್.,ನವರಿಗೆ ಒಟ್ಟು ಮೊತ್ತ ರೂ.72,18,750/–ಗಳನ್ನು ಪಾವತಿಸಿರುವುದು ಕಂಡುಬಂದಿದೆ.ಪಾವತಿ ವಿವರ ಈ ಕೆಳಕಂಡಂತಿದೆ:–

| ಕ್ರ.ಸಂ. | ಧನಾದೇಶ ಸಂಖ್ಯೆ/ದಿನಾಂಕ | ಮೊತ್ತ | ಮೂಲ ಬೆಲೆಯ ಮೇಲೆ ಜಿ.ಎಸ್.ಟಿ ಮೊತ್ತ |
|---|---|---|---|
| 1 | 754661/19.02.2019 | 28,87,500/– | 52,500/– |
| 2 | 945851/25.06.2019 | 28,87,500/– | 52,500/– |
| 3 | 046324/04.01.2020 | 14,43,750/– | 26,250/– |
| | **ಒಟ್ಟು ಮೊತ್ತ ರೂ.** | **72,18,750/–** | **1,31,250/–** |

**ನ್ಯೂನತೆಗಳು:–**

1) ಕರ್ನಾಟಕ ಸಂಗ್ರಹಣೆಗಳ ದೂರದರ್ಶಕ ನಿಯಮ 2000, 17(ಎ) ರಲ್ಲಿ ತಿಳಿಸಿರುವಂತೆ ರೂ.2 ಕೋಟಿಗಳ ಮೌಲ್ಯದವರೆಗಿನ ಟೆಂಡರ್‌ಗಳಿಗೆ 30 ದಿನಗಳ ಸಮಯಾವಕಾಶವನ್ನು ನೀಡಬೇಕಾಗಿದ್ದು, ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಕೇವಲ 10 ದಿನಗಳ ಅಲ್ಪಾವಧಿ ಸಮಯವನ್ನು ನೀಡಲಾಗಿದೆ.

12.7) ಪರೀಕ್ಷಾ ವೇಳೆಗಳು ಬದಲಾವಣೆಯಾದ ಕಾರಣ, ಈ ಕಾರ್ಯವು ತುಂಬಾ ಅತ್ಯಾವಶ್ಯಕವಾಗಿದ್ದರಿಂದ ಹಾಗು ಮುದ್ರಣ ಕಾರ್ಯವು ಅತಿ ತುರ್ತಾಗಿ ನಿರ್ವಹಿಸುವ ಪ್ರಮೇಯ ಉದ್ಭವಿಸಿದ್ದರಿಂದ ಮತ್ತು ವಿಶ್ವವಿದ್ಯಾಲಯದ ಹಿತದೃಷ್ಟಿಯಿಂದ ಹಾಗು ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಅವರ ಮುಂದಿನ ಭವಿಷ್ಯಕ್ಕಾಗಿ ಸಕಾಲಕ್ಕೆ ಈ ಕಾರ್ಯ ಮಾಡಬೇಕಾಗಿರುವುದರಿಂದ, ಅಲ್ಪಾವಧಿ ಟೆಂಡರ್‌ನ್ನು ಅನಿವಾರ್ಯದ ದಿಶೆಯಿಂದ ಕರೆಯಲಾಯಿತು. ಇದರಿಂದ ಕೆಲವು ನ್ಯೂನತೆಗಳು ಆಗಿರಬಹುದು.

ಆಡಿಟ್ ಕಂಡಿಕೆಯಲ್ಲಿ ತಿಳಿಸಿರುವ ಮಾರ್ಗದರ್ಶನದಂತೆ ಇನ್ನು ಮುಂದೆ ಇಂತಹ ತಪ್ಪುಗಳು ಬಾರದಂತೆ ಕಟ್ಟುನಿಟ್ಟಾಗಿ ಪಾಲಿಸಲಾಗುವುದು (Noted for Future guidance).

ಎರಡನೇಯದಾಗಿ ಮೂಲ ಬೆಲೆಯ ಮೇಲೆ ಶೇ.2% GST ಮೊತ್ತವನ್ನು ವಸೂಲಿ ಮಾಡಲು ಕ್ರಮವಹಿಸಲಾಗುವುದು.

ಮೇಲ್ಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ಸಲ್ಲಿಸುತ್ತಾ, ಸದರಿ ಆಡಿಟ್ ಕಂಡಿಕೆಯನ್ನು ಆಡಿಟ್ ವರದಿಯಿಂದ ಕೈ ಬಿಡುವಂತೆ ಕೋರಲಾಗಿದೆ.

2) ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಮತ್ತು ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಕಾಲೇಜುಗಳಿಗೆ ಸಂಯೋಜನೆಯನ್ನು 2017-18ರಲ್ಲಿಯೇ ನೀಡಲಾಗಿದ್ದು, 2018-19ನೇ ಸಾಲಿನ ಎಲ್ಲಾ ಕೋರ್ಸ್‌ಗಳ ಪರೀಕ್ಷ ಕಾರ್ಯಗಳಿಗೆ ಉತ್ತರ ಪತ್ರಿಕೆಗಳನ್ನು ನೀಡುವುದು ಪೂರ್ವ ನಿಯೋಜಿತವಾಗಿರುತ್ತದೆ. ಆದರೆ, ಸದರಿ ಪ್ರಕರಣದಲ್ಲಿ ಪರೀಕ್ಷಾ ಮುದ್ರಣ ವೆಚ್ಚಗಳನ್ನು ತರಾತುರಿ/ತಡವಾಗಿ ಟೆಂಡರ್ ಪ್ರಕ್ರಿಯೆಗಳನ್ನು ಕೈಗೊಂಡು ವೆಚ್ಚಗಳನ್ನು ಭರಿಸಿದೆ.
3) ಸದರಿ ಟೆಂಡರ್ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ತುಲನಾತ್ಮಕ ಪಟ್ಟಿ ತಾಂತ್ರಿಕ ಸಮಿತಿಯ ಟೆಂಡರ್‌ದಾರರ ತಾಂತ್ರಿಕ ಅರ್ಹತೆ ಪರಿಶೀಲಿಸಿದ ವಿವರಗಳುಲೆಕ್ಕಪರಿಶೋಧನಾ ಕಡತದಲ್ಲಿ ಲಭ್ಯವಿರುವುದಿಲ್ಲ.
4) ಟೆಂಡರ್ ಅರ್ಹತಾ ಅವಧಿ ದಿನಾಂಕ:12.11.2019ಕ್ಕೆ ಮುಗಿದಿದ್ದರೂ, ಮರು ಟೆಂಡರನ್ನು ಆಹ್ವಾನಿಸದೇ ಸದರಿ ಟೆಂಡರನ್ನು ಮುಂದುವರೆಸಿ, ಚೆಕ್ ಸಂಖ್ಯೆ:046324, ದಿನಾಂಕ:04.01.2010 ರಲ್ಲಿ ರೂ.14,43,750/-ಗಳನ್ನು ಪಾವತಿಸಲಾಗಿದೆ. (ಹೆಚ್ಚುವರಿ 15000/- ಉತ್ತರ ಪತ್ರಿಕೆಗಳನ್ನು ಮುದ್ರಿಸಲು).

ವಿಶ್ವವಿದ್ಯಾಲಯವು ಮುಂದಿನ ಖರೀದಿಯಲ್ಲಿ ಈ ಎಲ್ಲಾ ನ್ಯೂನತೆಗಳನ್ನು ಸರಿಪಡಿಸಿಕೊಂಡು, ಇಂತಹ ನ್ಯೂನತೆಗಳು ಮರುಕಳಿಸದಂತೆ ಕ್ರಮವಹಿಸಲು ಸೂಚಿಸಿದೆ.

ಈ ಸಂಬಂಧ ಲೆಕ್ಕಪತ್ರ ವಿಚಾರಣಾ ಪತ್ರ ಸಂಖ್ಯೆ:61/20-21 ದಿನಾಂಕ:19.07.2021ರಲ್ಲಿ ವಿವರ ಕೋರಿದ್ದರೂ, ಸ್ಪಷ್ಟೀಕರಣವಿರುವುದಿಲ್ಲ. ಆದ್ದರಿಂದ ಮೂಲ ಬೆಲೆಯ ಮೇಲೆ ಶೇ 2% ರಷ್ಟು ಜಿ.ಎಸ್.ಟಿ ಮೊತ್ತ ರೂ.1,31,250/- ಗಳನ್ನು ವಸೂಲಾತಿಗೆ ಸೂಚಿಸಿದೆ.

| | |
|---|---|
| **12.13. ಆದಾಯ ತೆರಿಗೆ TDSಕಟಾವಣೆ ಮಾಡದೇ ಪಾವತಿ ಮಾಡಿರುವುದು**<br><br>2018-19 ಮತ್ತು 2019-20ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ಪ್ರಿಂಟಿಂಗ್ ಮತ್ತು ಬಾಡಿಗೆ ಪಾವತಿಗಳಿಗೆ ಆದಾಯ ತೆರಿಗೆ ಕಾಯ್ದೆ 1961 ಸೆಕ್ಷನ್ 194 ರ ಪ್ರಕಾರ ಶೇ.2 ರಷ್ಟು, 194 ರ ಪ್ರಕಾರ ಶೇ.10 ರಷ್ಟು ಕಟಾವಣೆ ಮಾಡಿರುವುದಿಲ್ಲ. ಈ ಸಂಬಂಧ ಲೆಕ್ಕ ವಿಚಾರಣಾ ಪತ್ರ ಸಂಖ್ಯೆ.13b/20-21,45/20-21, ದಿನಾಂಕ:21.03.2021 ಮತ್ತು 28.06.2021ರಲ್ಲಿ ವಿವರ ಕೋರಿದ್ದರೂ, ಸಮರ್ಪಕವಾದ ವಿವರಣೆಗಳಿರುವುದಿಲ್ಲ. ಆದ್ದರಿಂದ ರೂ.6,230/-ಗಳನ್ನು ವಸೂಲಾತಿಯಲ್ಲಿಡಲಾಗಿದೆ. ವಿವರಗಳನ್ನು **ಅನುಬಂಧ-20**ರಲ್ಲಿ ವಿವರಿಸಲಾಗಿದೆ. | 12.13) ಕಂಡಿಕೆಯಲ್ಲಿ ವಿವರಿಸಿರುವಂತೆ, ಈ ಹಿಂದೆ ಮಾಹಿತಿ ಕೊರತೆಯಿಂದ ಮತ್ತು ಖಾಯಂ ಹಣಕಾಸು ಅಧಿಕಾರಿ ಇಲ್ಲವಾದ ಕಾರಣ ಆದಾಯ ತೆರಿಗೆ ಕಟಾಯಿಸಿಲ್ಲ. ಪ್ರಸುತ್ತ ಸದರಿ ಪ್ರಕರಣಗಳಲ್ಲಿ ವಸೂಲಿ ಮಾಡಿದ್ದರು ಸಹ IT ತೆರಿಗೆ ಖಾತೆಗೆ ಪಾವತಿಸಲು ವರ್ಷಾನುಗಟ್ಟಲೆ ವಿಳಂಬವಾದ ಕಾರಣ ಆದಾಯ ತೆರಿಗೆ ಇಲಾಖೆಗೆ ಸಾವಿರಾರು ರೂಪಾಯಿಗಳು ದಂಡ ಪಾವತಿಸುವ ಅನಿವಾರ್ಯವಾಗುತ್ತದೆ.<br><br>ಪ್ರಸುತ್ತ ಇಂತಹ ಪ್ರಕರಣಗಳು ಉದ್ಭವವಾಗದಂತೆ ಇನ್ನು ಮುಂದೆ ನಿಯಾಮಾನುಸಾರ ತೆರಿಗೆ ಕಟಾವಣೆ ಮಾಡಿ, ಸಕಾಲದಲ್ಲಿ ಆದಾಯ ತೆರಿಗೆ ಖಾತೆಗೆ ಪಾವತಿಸಲಾಗುತ್ತಿದೆ.<br><br>ಆದುದರಿಂದ ಸದರಿ ಕಂಡಿಕೆಯನ್ನು ಆಡಿಟ್ ವರದಿಂದ ಕೈಬಿಡುವಂತೆ ಕೋರಿಲಾಗಿದೆ. |
| **12.16. ಲಾಗ್ ಪುಸ್ತಕಕ್ಕೆ ಸಂಬಂದಿಸಿದಂತೆ.**<br><br>2018-19 ಮತ್ತು 2019-20ನೇ ಸಾಲಿನ ಲಾಗ್ ಪುಸ್ತಕಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ನ್ಯೂನ್ಯತೆಗಳು ಕಂಡು ಬಂದಿರುತ್ತದೆ.<br><br>1. ಲಾಗ್ ಪುಸ್ತಕದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಧೃಢೀಕರಣವಿರುವುದಿಲ್ಲ.<br>2. ವಾಹನ ಸಂಖ್ಯೆ KA01G6444 ನ್ನು ವೈಯುಕ್ತಿಕ ಉದ್ದೇಶಗಳಿಗಾಗಿ ಬಳಕೆಯಾಗಿದ್ದು. ಕರ್ನಾಟಕ ಆದೇಶ ಸಂಖ್ಯೆ:ಸಿಆಸುಇ19 ಶಿವಾನೀ2016 ದಿನಾಂಕ.14.10.2016ರ ಪ್ರಕಾರ ರೂ15,236/-ಗಳನ್ನು ವಿಶ್ವವಿದ್ಯಾಲಯಕ್ಕೆ ಪಾವತಿ ಮಾಡಿರುವುದಿಲ್ಲ.<br>3. ವಾಹನ ಸಂಖ್ಯೆ KA01 6386 ನ್ನು ಮತ್ತು KA01G6444 ಗಳನ್ನು ಒಬ್ಬರೇ ಅಧಿಕಾರಿ ಒಂದೇ ಸಮಯದಲ್ಲಿ ದಿನಾಂಕ: 04.10.2019 ರಿಂದ 04.01.2020 ರವರೆಗೆ ಬಳಸಿರುತ್ತಾರೆ. ಸದರಿ ಅವಧಿಯಲ್ಲಿ ಕುಲಸಚಿವರು ಮತ್ತು ಕುಲಸಚಿವರು (ಮೌಲ್ಯಮಾಪನ) ಎರಡೂ ಹುದ್ದೆಗಳಲ್ಲಿ ಒಬ್ಬರೇ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದು. ಒಂದೇ ದಿನಾಂಕ ಮತ್ತು ಸಮಯದಲ್ಲಿ ಎರಡೂ | 12.16) |

| | |
|---|---|
| ವಾಹನಗಳ ಬಳಕೆಯಾಗಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದಿರುತ್ತದೆ.ಈ ಸಮಯದಲ್ಲಿ ವಾಹನ ಗಳಿಗೆ ಭರ್ತಿ ಮಾಡಿಸಿರುವ ಇಂಧನದ ಬೆಲೆ ರೂ 53,709/- ಆಗಿರುತ್ತದೆ.<br><br>ಈ ಸಂಬಂಧ ಆಡಿಟ್ ವಸೂಲಾತಿ ಪತ್ರ ಸಂಖ್ಯೆ 82/20-21 ದಿನಾಂಕ: 24.08.2021 ರಲ್ಲಿ ವಿವರ ಕೋರಿದ್ದರೂ. ಮಾಹಿತಿ ನೀಡಿರುವುದಿಲ್ಲ. ಆದುದರಿಂದ ರೂ. 68,945/- (15,236+53,709) ಗಳನ್ನು ವಸೂಲಾತಿಯಲ್ಲಿಡಲಾಗಿದೆ. ವಿವರಗಳನ್ನು **ಅನುಬಂಧ-22** ರಲ್ಲಿ ಲಗತ್ತಿಸಿದೆ.<br><br>**14.1 ಪರೀಕ್ಷಾ ಮೌಲ್ಯಮಾಪನ ಕೇಂದ್ರಗಳಿಗೆ ಉಪಕರಣ ಅಳವಡಿಸಲು ಕಿಯೋನಿಕ್ಸ್ ಸಂಸ್ಥೆಗೆ ಪಾವತಿಸಿರುವ ಕುರಿತು**<br><br>2019-20ನೇ ಸಾಲಿನಲ್ಲಿ ಪರೀಕ್ಷಾಕೇಂದ್ರಕ್ಕೆಉಪಕರಣ ಅಳವಡಿಕೆಗೆ ಧನಾದೇಶ ಸಂಖ್ಯೆ. 254494, ದಿನಾಂಕ: 06.04.2019 ರಲ್ಲಿ ರೂ. 9,84,118/- ಗಳನ್ನು ಕಿಯೋನಿಕ್ಸ್ ಸಂಸ್ಥೆಗೆ ಪಾವತಿಸಲಾಗಿದೆ<br><br>1. ಸದರಿ ಉಪಕರಣ ಅಳವಡಿಕೆಗೆ ಕಿಯೋನಿಕ್ಸ್ ಸಂಸ್ಥೆಗೆ ವಿಶ್ವವಿದ್ಯಾಲಯವು ಪತ್ರ ಬರೆದು ದರಪಟ್ಟಿಯನ್ನು ಪಡೆದಿರುವ ವಿವರ ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ.<br>2. ಪಾವತಿ ಬಿಲ್ಲಿಗೂ ಮತ್ತು ಅಳವಡಿಸಿರುವ ಉಪಕರಣದ ಅನುಸ್ಥಾಪನ ವರದಿಗೂ ಈ ಕೆಳಕಂಡ ವ್ಯತ್ಯಾಸ ಕಂಡುಬಂದಿರುತ್ತದೆ. | 14.1) |

| ಕ್ರ. ಸಂ. | ಉಪಕರಣದ ವಿವರ | ಬಿಲ್ಲಿನ ಪ್ರಮಾಣ | ವರದಿ ಪ್ರಮಾಣ | ದರ | ಪಾವತಿಸಬೇಕಾದ ಮೊತ್ತ | ಪಾವತಿಸಿರುವ ಮೊತ್ತ | ವ್ಯತ್ಯಾಸ |
|---|---|---|---|---|---|---|---|
| 1 | ಪಿ.ವಿ.ಸಿ 1 ಕೇಸಿಂಗ್ ಕಂಡ್ಯೂಟ್ | 150 | 105 | 60.00 | 6300 | 9000 | 2700.00 |
| 2 | ಕ್ಯಾನನ್ ಇಮೇಜ್ | 1 | ಇರುವುದಿಲ್ಲ | 7000.00 (2 | 0 | 14000 | 14000.00 |

| | | | | | | | |
|---|---|---|---|---|---|---|---|
| | ಫಾರ್ಮೂಲ ಎ.ಡಿ.ಪಿ. ಡ್ಯೂಪ್ಲೇಕ್ಸ್ ಎವಿ ಸ್ಕಾನರ್ | | | ತಿಂಗಳಿಗೆ) | | | |
| 3 | ಕಂಪ್ಯೂಟರ್ ವಿಲ್ ಚೇರ್ | 3 | ಇರುವು ದಿಲ್ಲ | 2175.00 (3 ತಿಂಗಳಿಗೆ) | 0 | 2175 | 2175.00 |
| | ಒಟ್ಟು | | | **9235.00** | **6300** | **25175** | **18875.00** |

ಈ ಸಂಬಂಧ ಆಡಿಟ್ ವಿಚಾರಣಾ ಸಂಖ್ಯೆ: 55/20-21 ರಲ್ಲಿ ಮಾಹಿತಿ ಕೋರಿದ್ದರೂ ಯಾವುದೇ ಮಾಹಿತಿ ನೀಡಿರುವುದಿಲ್ಲ. ಆದ್ದರಿಂದ, ಹೆಚ್ಚುವರಿ ಪಾವತಿಸಿರುವ ರೂ. 18,875/- ಗಳನ್ನು ವಸೂಲಾತಿಗೆ ಸೂಚಿಸಿಲಾಗಿದೆ.

## 20. ಅಧಿಕಾರಿ ಮತ್ತು ಬೋಧಕ ವರ್ಗದವರ ವೇತನ ಮತ್ತು ಭತ್ಯೆಗಳು

### 20.1. ಅತಿಥಿ ಉಪನ್ಯಾಸಕರಿಗೆ ನೇಮಕಾತಿಗೆ ಸಂಬಂಧಿಸಿದಂತೆ ನ್ಯೂನತೆಗಳು

ವಿಶ್ವವಿದ್ಯಾಲಯವು 2018-19 ಮತ್ತು 2019-20ನೇ ಸಾಲಿನಲ್ಲಿ ವಿವಿಧ ವಿಭಾಗಗಳಿಗೆ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಂಡಿದ್ದು, ಈ ಕೆಳಕಂಡ ನ್ಯೂನತೆಗಳನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.

20.1)

1) ಯು.ಜಿ.ಸಿ. ನಿಯಮ No.F.10-1/2009(PS) ಫೆಬ್ರವರಿ-2010 ಮತ್ತು No.F.25-1/2018(PS/ MISC) ದಿನಾಂಕ:28.01.2019 ರ ಪ್ರಕಾರ ಅತಿಥಿ ಉಪನ್ಯಾಸಕರನ್ನು ಕೇವಲ ಮಂಜೂರಾದ ಹುದ್ದೆಗಳಿಗೆ ಎದುರಾಗಿ ನೇಮಕ ಮಾಡಿಕೊಳ್ಳಬೇಕಾಗುತ್ತದೆ. ಆದರೆ ವಿಶ್ವವಿದ್ಯಾಲಯಕ್ಕೆ ಯಾವುದೇ ಉಪನ್ಯಾಸಕರ ಹುದ್ದೆ ಮಂಜೂರಾದ ಬಗ್ಗೆ ವಿವರಗಳಿರುವುದಿಲ್ಲ. ಅತಿಥಿ ಉಪನ್ಯಾಸಕರನ್ನು ಖಾಯಂ ಹುದ್ದೆಗಳಿಗೆದುರಾಗಿ ನೇಮಕ ಮಾಡಿಕೊಂಡಿರುವುದಿಲ್ಲ. ನೇಮಕ ಮಾಡಿಕೊಂಡ ಹುದ್ದೆಗಳಿಗೆ ಸರ್ಕಾರದ ಆರ್ಥಿಕ ಇಲಾಖೆಯಿಂದ ಮಂಜೂರಾತಿ ಪಡೆದಿರುವುದಿಲ್ಲ.
2) ಅತಿಥಿ ಉಪನ್ಯಾಸಕರ ನೇಮಕಾತಿಗೆ ಸಂಬಂಧಿಸಿದಂತೆ, ಯಾವುದೇ ರೋಸ್ಟರ್

| | |
|---|---|
| ನಿಯಮವನ್ನು ಪಾಲಿಸಿರುವುದಿಲ್ಲ. (ಯು.ಜಿ.ಸಿ ನಿಯಮಾವಳಿ F.No.59/6/2012(CU/ದಿನಾಂಕ:03.06.2016 ರ ಪ್ರಕಾರ)<br>3) ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳುವ ಸಮಿತಿಯಲ್ಲಿ UGC guidelines No.F.25/1/2018 (PS/MISC) ರ ಪ್ರಕಾರ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಅಲ್ಪ ಸಂಖ್ಯಾತರ/ ವಿಕಲಚೇತನರನ್ನು ಪ್ರತಿನಿಧಿಸುವ ಒಬ್ಬ ಶಿಕ್ಷಣ ತಜ್ಞರನ್ನು ವಿಶ್ವವಿದ್ಯಾಲಯದ ಕುಲಪತಿಗಳು ನೇಮಕ ಮಾಡಬೇಕಾಗಿರುತ್ತದೆ. ಆದರೆ ವಿಶ್ವವಿದ್ಯಾಲಯವು ಈ ನಿಯಮದ ಪಾಲನೆ ಮಾಡಿರುವುದಿಲ್ಲ.<br>4) ಅತಿಥಿ ಉಪನ್ಯಾಸಕರ ಸಂದರ್ಶನಕ್ಕೆ ಸಂಬಂಧಿಸಿದಂತೆ, ವಿದ್ಯಾರ್ಹತೆಗೆ PHD/NET/ಸೇವಾ ಅನುಭವ/Publication ಗೆ ಸಂಬಂಧಿಸಿದಂತೆ ಯು.ಜಿ.ಸಿ.ಯು ನಿಗದಿಪಡಿಸಿರುವ ಅಂಕಗಳ ಮಾನದಂಡವನ್ನು ವಿಶ್ವವಿದ್ಯಾಲಯವು ಪಾಲಿಸಿರುವುದಿಲ್ಲ. ಮುಂದುವರೆದು ವಿದ್ಯಾರ್ಹತೆಗೆ ಸೇವಾನುಭವ/PHD/NET/ಸೇವಾನುಭವಕ್ಕೆ ಸಂಬಂಧಿಸಿದಂತೆ ನೀಡಿರುವ ಅಂಕಗಳ ಸಂಬಂಧ ಅನುಸರಿಸಲಾದ ಮಾನದಂಡದ ಲೆಕ್ಕಪರಿಶೋಧನೆಗೆ ಲಭ್ಯವಿರುವುದಿಲ್ಲ.<br><br>**ಅ). 2018–19ನೇ ಸಾಲಿನ ಅತಿಥಿ ಉಪನ್ಯಾಸಕರ ನೇಮಕಾತಿಗೆ ಸಂಬಂಧಿಸಿದ ನ್ಯೂನತೆಗಳ ವಿವರಗಳು ಈ ಕೆಳಕಂಡಂತಿದೆ.**<br><br>1. 2018–19ನೇ ಸಾಲಿನ ನೇಮಕಾತಿಗೆ ಸಂಬಂಧ ನೇಮಕಾತಿ ಅಧಿಸೂಚನೆ ಲೆಕ್ಕಪರಿಶೋಧನೆಗೆ ಲಭ್ಯವಿರುವುದಿಲ್ಲ.<br>2. Roaster policy/Reservation Policy ಪಾಲನೆ ಸಂಬಂಧಪಟ್ಟಂತೆ ವಿವರಗಳಿರುವುದಿಲ್ಲ.<br>3. Work load (ಕಾರ್ಯಭಾರ) ಅತಿಥಿ ಉಪನ್ಯಾಸಕರ ಕಾರ್ಯಭಾರದ ಬಗ್ಗೆ ವಿವರಗಳಿರುವುದಿಲ್ಲ.<br>4. ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಲ್ಲಿ ಸಂದರ್ಶನಕ್ಕೆ ಹಾಜರಾದ ಅಭ್ಯರ್ಥಿಗಳು, ಸಂದರ್ಶನದ ಸಮಿತಿಯ ವಿವರ, ಸಂದರ್ಶನದಲ್ಲಿ ನೀಡಲಾದ ಅಂಕಗಳ ವಿವರ, ಅಭ್ಯರ್ಥಿಗಳ ವಿದ್ಯಾರ್ಹತೆ, M.Phil, PHD, NET, SLET Research experience, Publications, ಸೇವಾನುಭವಕ್ಕೆ ಸಂಬಂಧಿಸಿದ ವಿವರವನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ. ಈ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ನೀಡಿದ ದಿನಾಂಕದಂದೆ | |

ಅಭ್ಯರ್ಥಿಗಳು ಬೆಳಗ್ಗೆ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ಆದರೆ ನೇಮಕಾತಿ ಆದೇಶ ನೀಡಿದ ದಿನವೇ ಅಭ್ಯರ್ಥಿಗಳು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವುದು ಹೇಗೆ ಸಾಧ್ಯ ಎಂಬುದರ ವಿವರ ಲೆಕ್ಕಪರಿಶೋಧನೆಗೆ ಲಭ್ಯವಿರುವುದಿಲ್ಲ.

**ಆ). 2019–20ನೇ ಸಾಲಿನ ಅತಿಥಿ ಉಪನ್ಯಾಸಕರ ನೇಮಕಾತಿಗೆ ಸಂಬಂಧಿಸಿದಂತೆ:–**

2019–20ನೇ ಸಾಲಿನಲ್ಲಿ ವಿಶ್ವವಿದ್ಯಾಲಯವು ಅತಿಥಿ ಉಪನ್ಯಾಸಕರ ನೇಮಕಾತಿಗೆ ಸಂಬಂಧಿಸಿದಂತೆ, No. BNU/G-Faculty/per courses/432/2019–20 ರ ಮುಖಾಂತರ ದಿನಾಂಕ:23.05.2019 ರಂದು ಅಧಿಸೂಚನೆ ಹೊರಡಿಸಿರುತ್ತದೆ. ಮುಂದುವರೆದು, ಅರ್ಜಿ ಸಲ್ಲಿಸಲು ದಿನಾಂಕ:25.06.2019 ಕಡೇ ದಿನವಾಗಿದ್ದು, ವಿವಿಧ ದಿನಾಂಕಗಳಂದು ಸಂದರ್ಶನವನ್ನು ಏರ್ಪಡಿಸಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿರುತ್ತದೆ. ಈ ಸಂಬಂಧ ಲೆಕ್ಕಪರಿಶೋಧನೆಯಲ್ಲಿ ಕೆಳಕಂಡ ನ್ಯೂನತೆಗಳನ್ನು ಗಮನಿಸಲಾಗಿದೆ:–

- Work load (ಕಾರ್ಯಭಾರ) ಕ್ಕೆ ಸಂಬಂಧಿಸಿದಂತೆ, ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರಿಂದ ದೃಢೀಕೃತಗೊಂಡ ತಃಖ್ತೆ ಇರುವುದಿಲ್ಲ.
- ಸಂದರ್ಶನ ಸಮಿತಿಯ ಎಲ್ಲಾ ಸದಸ್ಯರೂ ಸಂದರ್ಶನಕ್ಕೆ ನೀಡಲಾದ ಅಂಕಗಳ ತಃಖ್ತೆಗೆ ಸಹಿ ಮಾಡಿ ದೃಢೀಕರಿಸಿರುವುದಿಲ್ಲ.
- ಸಮಾಜ ಕಾರ್ಯ ವಿಷಯಕ್ಕೆ ಸಂಬಂಧಿಸಿದಂತೆ, ಅಭ್ಯರ್ಥಿಗಳಿಗೆ ನೀಡಲಾದ ಅಂಕಪಟ್ಟಿಯ ತಃಖ್ತೆಯನ್ನು ದ್ವಿಪ್ರತಿಯಲ್ಲಿ ನಿರ್ವಹಿಸಿದ್ದು, ಬೇರೆ ಬೇರೆ ಅಂಕಗಳನ್ನು ನೀಡಲಾಗಿದ್ದು, ಲೆಕ್ಕಪರಿಶೋಧನೆಯಲ್ಲಿ ದೃಢೀಕರಿಸಲಾಗಿರುವುದಿಲ್ಲ.
- ಮೆರಿಟ್ ಲಿಸ್ಟ್‌ನಲ್ಲಿದ್ದ ಅಭ್ಯರ್ಥಿಗಳು ಲಿಖಿತ ರೂಪದಲ್ಲಿ ಕರ್ತವ್ಯಕ್ಕೆ ಹಾಜರಾಗದಿರುವ ಬಗ್ಗೆ ಪತ್ರ ನೀಡಿದಾಗಲಷ್ಟೇ Waiting listನಲ್ಲಿದ್ದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ನೀಡಬೇಕಾಗಿರುತ್ತದೆ. ಆದರೆ, ಈ ಸಂಬಂಧ ಯಾವುದೇ ದಾಖಲಾತಿ ನಿರ್ವಹಿಸಿರುವುದಿಲ್ಲ.
- ಚಿಕ್ಕಬಳ್ಳಾಪುರ ಬಿ.ಎಡ್ ಕಾಲೇಜಿಗೆ ನೇಮಕಗೊಂಡ ಅತಿಥಿ ಉಪನ್ಯಾಸಕರು ಸಂದರ್ಶನ ಕೈಗೊಂಡ ಯಾವುದೇ ವಿವರ ಲಭ್ಯವಿರುವುದಿಲ್ಲ. ಮುಂದುವರೆದು, ಸದರಿ ಉಪನ್ಯಾಸಕರಿಗೆ ದಿನಾಂಕ:23.12.2019ಕ್ಕೆ ಬಿ.ಎಡ್ ಕಾಲೇಜು, ಚಿಕ್ಕಬಳ್ಳಾಪುರ ಇವರ ಕೋರಿಕೆಯ ಆಧಾರದ ಮೇಲೆ ಅಂದೇ ಸದರಿ ಉಪನ್ಯಾಸಕರಿಗೆ ನೇಮಕಾತಿ ಆದೇಶವನ್ನು ನೀಡಲಾಗಿದೆ.
- ಇಂಗ್ಲೀಷ್ ವಿಭಾಗದಲ್ಲಿ IIIA ಮೀಸಲಾತಿ ಅಡಿಯಲ್ಲಿ 38 ಅಂಕಗಳನ್ನು ಪಡೆದ

| | |
|---|---|
| ಅಭ್ಯರ್ಥಿಯನ್ನು ಕೈಬಿಟ್ಟು ಅದೇ ಮೀಸಲಾತಿಯಡಿಯಲ್ಲಿ 30 ಅಂಕಗಳನ್ನು ಪಡೆದಿರುವ ಅಭ್ಯರ್ಥಿಗೆ ನೇಮಕಾತಿ ಆದೇಶ ನೀಡಿರುವ ಬಗ್ಗೆ ಸ್ಪಷ್ಟನೆ ಇರುವುದಿಲ್ಲ.<br>➢ ಕನ್ನಡ ವಿಭಾಗದಲ್ಲಿ ಅಭ್ಯರ್ಥಿಗಳಿಗೆ ನೀಡಿರುವ ಅಂಶಗಳಲ್ಲಿ ಸೇವಾನುಭವ, ವಿದ್ಯಾರ್ಹತೆ, M.Phil ಈ ಸಂಬಂಧ ಕೆಲವೊಂದು ಅಭ್ಯರ್ಥಿಗಳಿಗೆ ನೀಡಿರುವ ಅಂಕಗಳ ಬಗ್ಗೆ ಸ್ಪಷ್ಟನೆ ಇರುವುದಿಲ್ಲ.<br>➢ ಕೆಲವೊಂದು ವಿಭಾಗಗಳ ಅತಿಥಿ ಉಪನ್ಯಾಸಕರು ಆದೇಶ ನೀಡಿದ ದಿನಾಂಕದಂದೇ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವುದು ಕಂಡುಬಂದಿರುತ್ತದೆ.<br>➢ ಗಣಿತ ವಿಭಾಗದಲ್ಲಿ ದಿನಾಂಕ:07.10.2019 ರಂದು ವಿಶ್ವವಿದ್ಯಾಲಯವು ಇಬ್ಬರು ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಿದ್ದು, ಸದರಿ ಉಪನ್ಯಾಸಕರನ್ನು ಆಯ್ಕೆ ಮಾಡಿದ ಮಾನದಂಡ ಲೆಕ್ಕಪರಿಶೋಧನೆಗೆ ಲಭ್ಯವಿರುವುದಿಲ್ಲ.<br>➢ ಕಂಪ್ಯೂಟರ್ ವಿಜ್ಞಾನ ವಿಭಾಗದಲ್ಲಿ, ಗ್ರಂಥಾಲಯ, ಗಣಿತ ವಿಭಾಗದಲ್ಲಿ ಅಭ್ಯರ್ಥಿಗಳು ನೇಮಕಾತಿ ಆದೇಶ ನೀಡುವ ಮೊದಲೇ ಅಂದರೆ ನೇಮಕಾತಿ ಆದೇಶ ದಿನಾಂಕ:20.09.2019ಕ್ಕೆ ಮತ್ತು ದಿನಾಂಕ:07.10.2019 ಕ್ಕೆ ನೀಡಿದ್ದು, ಅಭ್ಯರ್ಥಿಗಳು ದಿನಾಂಕ:23.08.2019 ಮತ್ತು ದಿನಾಂಕ:03.10.2019 ಮತ್ತು ದಿನಾಂಕ:04.10.2019ಕ್ಕೆ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ.<br>➢ ಅತಿಥಿ ಉಪನ್ಯಾಸಕರ ನೇಮಕಾತಿಯಲ್ಲಿ ಮೀಸಲಾತಿ ನಿಯಮದ ಪಾಲನೆಯಾಗಿರುವುದಿಲ್ಲ.<br>➢ ಇಂಗ್ಲೀಷ್, ಕಾರ್ಮರ್ಸ್ ವಿಭಾಗದ ಅತಿಥಿ ಉಪನ್ಯಾಸಕರು ಯು.ಜಿ.ಸಿ ನಿಯಮದ ಅನ್ವಯ ನೆಟ್, ಸ್ಲೇಟ್, ಪಿ.ಹೆಚ್.ಡಿ ಮುಗಿಸದಿದ್ದರೂ ನೇಮಕಗೊಂಡಿರುತ್ತಾರೆ.<br><br>ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಅಧಿನಿಯಮ 2000ರ ಪ್ರಕರಣ 56(1)ರನ್ವಯ ಒಂದು ವರ್ಷದ ಅವಧಿಗೆ ಮೀರದಂತೆ ಮಂಜೂರಾದ ಹುದ್ದೆಗಳೆದುರಾಗಿ ತಾತ್ಕಾಲಿಕ ಹಾಗೂ ಪರಿನಿಯಮಗಳಿಗೆ ಅನುಸಾರವಾಗಿ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳುವ ಷರತ್ತನ್ನು ಪ್ರಕರಣ 56(2)ರಲ್ಲಿ ವಿಧಿಸಿದ್ದರೂ, ತಾತ್ಕಾಲಿಕ ಅತಿಥಿ ಉಪನ್ಯಾಸಕರ ನೇಮಕಾತಿ ಮಾಡಿರುವ ಸಂಬಂಧ ಬೆಂಗಳೂರು ಉತ್ತರ ವಿಶ್ವವಿದ್ಯಾಲಯವು ಯಾವುದೇ ಪರಿನಿಯಮಗಳನ್ನು ರಚಿಸಿಕೊಂಡಿರುವುದಿಲ್ಲ ಹಾಗೂ ಖಾಯಂ ಹುದ್ದೆಗಳಿಗೆದುರಾಗಿ ನೇಮಕಾತಿ ಮಾಡಿಕೊಂಡಿರುವುದಿಲ್ಲ ಹಾಗೂ ಮಂಜೂರಾದ ಹುದ್ದೆಗಳಿಗೆ ಸರ್ಕಾರದ ಆರ್ಥಿಕ ಇಲಾಖೆಯಿಂದ ಮಂಜೂರಾತಿ ಪಡೆದಿರುವುದಿಲ್ಲ. ಇದು ನಿಯಮ ಬಾಹಿರವಾಗಿದ್ದು, ಸದರಿ | |

| | |
|---|---|
| ಸಾಲಿನಲ್ಲಿ ಸಂಭಾವನೆಗೆ ಪಾವತಿಸಿರುವ ಮೊತ್ತ ರೂ. 1,52,27,669.00 ಗಳಾಗಿರುತ್ತದೆ. ಆದ್ದರಿಂದ ಸಂಭಾವನೆಗೆ ಪಾವತಿಸಿರುವ ಮೊತ್ತ ರೂ.1,52,27,669.00 ಗಳನ್ನು ಆಕ್ಷೇಪಣೆಯಲ್ಲಿರಿಸಿದೆ. ಮುಂದುವರೆದು, ಆದಾಯ ತೆರಿಗೆ ಕಾಯ್ದೆ 1961 ನಿಯಮ 194(ಜೆ)ರ ಪ್ರಕಾರ ಆದಾಯ ತೆರಿಗೆ ಕಟಾವಣೆ ಮಾಡಿ ಸಂಬಂಧಿಸಿದ ಇಲಾಖೆಗೆ ಜಮಾ ಮಾಡಿರುವ ವಿವರಗಳನ್ನು ಒದಗಿಸಿರುವುದಿಲ್ಲ. ಆದ್ದರಿಂದ, ರೂ. 15,22,767.00 ಗಳನ್ನು ವಸೂಲಿಸಿ ಸಂಬಂಧಪಟ್ಟ ಇಲಾಖೆಗೆ ಜಮಾ ಮಾಡಲು ಸೂಚಿಸಿದೆ.ವಿವರಗಳನ್ನು **ಅನುಬಂಧ– 23** ರಲ್ಲಿ ಲಗತ್ತಿಸಿದೆ.<br><br>**21.2 ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999ರ ಮತ್ತು ನಿಯಮ 2000 ರನ್ನು ಉಲ್ಲಂಘಿಸಿ ಟೆಂಡರ್ ಪಡೆಯದೇ ಸೆಕ್ಯೂರಿಟೀಸ್/ಸ್ವಚ್ಛತಾ ಕಾರ್ಯ ಸಿಬ್ಬಂದಿಗಳನ್ನು ಪಡೆದಿರುವುದು**<br><br>2018–19 ಮತ್ತು 2019–20ನೇ ಸಾಲಿನಲ್ಲಿ ವಿಶ್ವವಿದ್ಯಾಲಯದಲ್ಲಿ (ಸೆಕ್ಯೂರಿಟೀಸ್) ಭದ್ರತಾ ಮತ್ತು ಸ್ವಚ್ಛತಾ ಕಾರ್ಯಕ್ಕಾಗಿ ವಿವಿಧ ಏಜೆನ್ಸಿಗಳಿಂದ ಸಿಬ್ಬಂದಿಗಳನ್ನು ನೇಮಕ ಮಾಡಿದ್ದು, ಈ ಕೆಳಕಂಡ ನ್ಯೂನತೆಗಳು ಕಂಡುಬಂದಿದೆ.<br><br>1) ಸದರಿ ಪಾವತಿಯು 1 ಲಕ್ಷ ಮೀರಿದ್ದರೂ ಟೆಂಡರ್ ಮೂಲಕ ಸೇವೆ ಪಡೆದಿರುವುದಿಲ್ಲ.<br>2) ಕನಿಷ್ಠ ವೇತನ ಕಾಯ್ದೆ ಪ್ರಕಾರ ಪ್ರತಿ ಸಿಬ್ಬಂದಿಗಳ ವೇತನದಿಂದ ಇ.ಎಸ್.ಐ ಮತ್ತು ಪಿ.ಎಫ್ ಕಟಾವಣೆ ಮಾಡಿ, ಸಂಬಂಧಪಟ್ಟ ಇಲಾಖೆಗೆ ಜಮೆ ಮಾಡಿರುವ ವಿವರಗಳಿರುವುದಿಲ್ಲ.<br>3) ಆದಾಯ ತೆರಿಗೆ ಕಾಯ್ದೆ 1961 ನಿಯಮ 144(ಸಿ) ರ ಪ್ರಕಾರ ಶೇ.2 ರಷ್ಟು ಆದಾಯ ತೆರಿಗೆ ಕಟಾವಣೆ ಮಾಡಿರುವುದಿಲ್ಲ. ಈ ಸಂಬಂಧ ಲೆಕ್ಕಪರಿಶೋಧನಾ ವಿಚಾರಣಾ ಸಂಖ್ಯೆ: 53/20–21,ದಿನಾಂಕ:06.07.2021ರಲ್ಲಿ ವಿವರ ಕೋರಿದ್ದರೂ, ಸಮಂಜಸವಾದ ವಿವರಣೆಗಳಿರುವುದಿಲ್ಲ. ಆದುದರಿಂದ ರೂ.28,02,734/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಆದಾಯ ತೆರಿಗೆ ಕಟಾವಣೆ ಮೊತ್ತ ರೂ.10,561/– ಗಳನ್ನು ವಸೂಲಾತಿಯಲ್ಲಿಡಲಾಗಿದೆ.ವಿವರಗಳನ್ನು **ಅನುಬಂಧ–26**ರಲ್ಲಿ ನೀಡಲಾಗಿದೆ. | <br><br><br><br><br><br><br><br>21.2) |

| | |
|---|---|
| **22.2 B.O.E ಗೆ ಸಂಬಂಧಿಸಿದ ಭತ್ಯೆಯನ್ನು ಪಾವತಿಸಿರುವುದು**<br><br>ವಿಶ್ವವಿದ್ಯಾಲಯದಲ್ಲಿ 2018-19 ಮತ್ತು 2019-20ನೇ ಸಾಲಿನಲ್ಲಿ ಬಿ.ಒ.ಇ ಸಂಬಂಧಿಸಿದಂತೆ, ಟಿಎ/ಡಿಎ ಭತ್ಯೆಯನ್ನು ಪಾವತಿಸಲಾಗಿದ್ದು, ಈ ಕೆಳಕಂಡ ನ್ಯೂನತೆಗಳನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.<br><br>1. ಸದರಿ ಪಾವತಿಗೆ ಯಾವುದೇ ಪರಿನಿಯಮ ರಚಿಸಿಕೊಳ್ಳದಿರುವುದು.<br>2. ಪಾವತಿ ಬಿಲ್ಲುಗಳಲ್ಲಿ ಹಾಜರಾತಿ ತಃಖ್ತೆಗೆ ಮುಖ್ಯಸ್ಥರ ದೃಢೀಕರಣವಿಲ್ಲದಿರುವುದು.<br>3. ಸದರಿ ಪಾವತಿಯನ್ನು ಬೆಂಗಳೂರು ವಿಶ್ವವಿದ್ಯಾಲಯ ಪಾವತಿ ಮಾಡುತ್ತಿರುವ ದರಗಳಲ್ಲಿ ಪಾವತಿ ಮಾಡುತ್ತಿದ್ದು, ಬೆಂಗಳೂರು ವಿಶ್ವವಿದ್ಯಾಲಯದ ಆದೇಶದಲ್ಲಿ ಬೆಂಗಳೂರು ನಗರದ ಸದಸ್ಯರಿಗೆ ರೂ. 300/- ಮತ್ತು ಬೆಂಗಳೂರು ಹೊರವಲಯದವರಿಗೆ ರೂ. 400/- ಎಂದು ಆದೇಶಿಸಲಾಗಿದೆ. ಆದರೆ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಪಾವತಿಯನ್ನು ಪರಿಶೀಲಿಸಿದಾಗ ಬೆಂಗಳೂರು ನಗರದ ಸದಸ್ಯರಿಗೆ ರೂ. 500/- ಮತ್ತು ಬೆಂಗಳೂರು ಹೊರವಲಯದವರಿಗೆ ರೂ. 600/- ಪಾವತಿಸಲಾಗಿದೆ.<br>4. ಕೋಲಾರ ಕೇಂದ್ರದಲ್ಲಿ ನಡೆಯುವ ಬಿ.ಒ.ಇ ಸಭೆಗಳಿಗೆ ರೂ. 400/- ಪಾವತಿ ಮಾಡಿದ್ದು, ಯಾವುದೇ ಕಛೇರಿ ಆದೇಶವಿರವುದಿಲ್ಲ.<br>5. ಟಿ.ಎ ಬಿಲ್ಲು ಪಾವತಿಗೆ ಸಂಬಂಧಿಸಿದಂತೆ, ಕೆ.ಸಿ.ಎಸ್.ಆರ್ ನಿಯಮವಳಿ ಪಾಲಿಸುವುದು.<br>6. ಸದರಿ ಪಾವತಿ ಬಿಲ್ಲುಗಳಲ್ಲಿ ಬಿ.ಒ.ಇ ಸಭೆ ನಡೆಯುವ ದಿನಾಂಕ ಮತ್ತು ಸದಸ್ಯರಿಗೆ ಸಂಬಂಧಿಸಿದಂತೆ ಕುಲಸಚಿವರ ಆದೇಶ ಪ್ರತಿ ಇರುವುದಿಲ್ಲ.<br><br>ಈ ಸಂಬಂಧ ಲೆಕ್ಕಪರಿಶೋಧನೆ ಸಂಖ್ಯೆ. 62/2020-21, ದಿನಾಂಕ: 20.07.2021 ರಂದು ವಿವರಣೆ ಕೋರಲಾಗಿ ಸಮರ್ಪಕ ವಿವರಣೆ ನೀಡಿರುವುದಿಲ್ಲ. ಆದುದರಿಂದ, ರೂ. 13,46,747/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ರೂ. 31,040/- ಗಳನ್ನು ಸಂಬಂಧಪಟ್ಟವರಿಂದ ವಸೂಲಾತಿಯಲ್ಲಿಡಲಾಗಿದೆ.ವಿವರಗಳನ್ನು **ಅನುಬಂಧ- 27**ರಲ್ಲಿ ಲಗತ್ತಿಸಿದೆ. | 22.2) |

| | |
|---|---|
| **22.4 ಪರೀಕ್ಷಾ ಕಾರ್ಯಕ್ಕೆ ಸಂಬಂಧಿಸಿದಂತೆ "Squad Members" ಗೆ ಪಾವತಿಸಿರುವ ಬಗ್ಗೆ** | 22.4) |

**22.4 ಪರೀಕ್ಷಾ ಕಾರ್ಯಕ್ಕೆ ಸಂಬಂಧಿಸಿದಂತೆ "Squad Members" ಗೆ ಪಾವತಿಸಿರುವ ಬಗ್ಗೆ**

2018-19 ಮತ್ತು 2019-20ನೇ ಸಾಲಿನಲ್ಲಿ ಪರೀಕ್ಷಾ ಕಾರ್ಯಕ್ಕೆ ಸಂಬಂಧಿಸಿದಂತೆ, Squad Memberಗಳಿಗೆ ಭತ್ಯೆಯನ್ನು ಪಾವತಿ ಮಾಡಲಾಗಿದ್ದು, ಈ ಕೆಳಕಂಡ ನ್ಯೂನ್ಯತೆಗಳು ಕಂಡುಬಂದಿದೆ.

1) 2018-19ನೇ ಸಾಲಿನಲ್ಲಿ ಧನಾದೇಶ ಸಂಖ್ಯೆ: 254360/14.03.2019 ರಲ್ಲಿ ರೂ.1,26,440/-ಗಳನ್ನು ಪಾವತಿಸಿದ್ದು, ಈ ಸಂಬಂಧ ಯಾವುದೇ ಆದೇಶ ಪ್ರತಿಗಳನ್ನು, ಸಂಬಂಧಿಸಿದ ವೋಚರ್‌ಗಳನ್ನುಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ.
2) ಧನಾದೇಶ ಸಂಖ್ಯೆ: 106342/ 19.07.2019 ರಲ್ಲಿ ರೂ.15,000/-ಗಳನ್ನು ಪಾವತಿಸಿದ್ದು, ಸೂಕ್ತವಾದ ಆದೇಶ ಪ್ರತಿಗಳನ್ನು, ಸಂಬಂಧಿಸಿದ ವೋಚರ್‌ಗಳನ್ನುಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ.
3) Squad Membersಗಳಿಗೆ ಕೇವಲ ಡಿ.ಎ ಪಾವತಿಗೆ ಮಾತ್ರ ಅವಕಾಶವಿದ್ದು, ಪ್ರಯಾಣ ಭತ್ಯೆ ಪಾವತಿಗೆ ಅವಕಾಶವಿರುವುದಿಲ್ಲ. ಪ್ರಯಾಣ ಭತ್ಯೆ ಪಾವತಿಗೆ ಸಂಬಂದಿಸಿದ ವಿವರಗಳು ಈ ಕೆಳಕಂಡಂತಿದೆ.

| ಕ್ರ.ಸಂ. | ಧನಾದೇಶ ಸಂಖ್ಯೆ/ದಿನಾಂಕ | ಪಾವತಿ ಮೊತ್ತ |
|---|---|---|
| 1 | 254509/06.06.2019 | 10635/- |
| 2 | 1257451/13.12.2019 | 3050/- |
| 3 | 945883/28.08.2019 | 5190/- |
| 4 | 254478/27.05.2019 | 5150/- |
| | ಒಟ್ಟು | 24,025/- |

ಈ ಸಂಬಂಧ ಲೆಕ್ಕಪರಿಶೋಧನಾ ವಿಚಾರಣಾ ಸಂಖ್ಯೆ: 66/2020-21, ದಿನಾಂಕ:22.07.2021 ರಲ್ಲಿ ವಿವರ ಕೋರಿದ್ದರೂ, ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ. ಆದ್ದರಿಂದ ಸೂಕ್ತ ಆದೇಶ ಪ್ರತಿ ಒದಗಿಸದ ಮೊತ್ತ ರೂ.1,41,440/-ಗಳನ್ನು (126440+15000)ಆಕ್ಷೇಪಣೆಯಲ್ಲಿಡಲಾಗಿದೆ ಮತ್ತು ಟಿ.ಎ. ಮೊತ್ತ ರೂ.24,025/-ಗಳನ್ನು ವಸೂಲಾತಿಯಲ್ಲಿಡಲಾಗಿದೆ.

22.4)

1. ಧನಾದೇಶದ ಸಂಖ್ಯೆ:254360/14.03.2019 ರಲ್ಲಿ ರೂ.1,26,440/-ಗಳನ್ನು ಪಾವತಿಸಲಾಗಿದೆ. ಸದರಿ ಧನಾದೇಶದ ಜೆರಾಕ್ಸ್ ಪ್ರತಿ ಲಗತ್ತಿಸಿದೆ.

   ಕುಲಸಚಿವರು (ಮೌಲ್ಯಮಾಪನ) ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರದಿಂದ ಪ್ರತಿಯೊಬ್ಬ Professor ಗಳಿಗೆ Fly-in-Squad ಗಳಾಗಿ ನೇಮಿಸಲಾಗಿದೆ. ಸದರಿ ಆದೇಶದ ಪ್ರತಿಗಳನ್ನು ಹಾಗು ಸದರಿ ಕಾರ್ಯ ನಿರ್ವಹಿಸಿದಕ್ಕೆ ಹಾಜರಾತಿಯ ಪ್ರತಿಯನ್ನು ಸಹ ಲಗತ್ತಿಸಿದೆ.

   34 Professor ಗಳು ಈ ಕಾರ್ಯನಿರ್ವಹಿಸಿದ್ದಕ್ಕಾಗಿ ಪ್ರತ್ಯೇಕವಾಗಿ 34 ವೋಚರ್‌ಗಳಲ್ಲಿ ಪಾವತಿಸಲಾಗಿದೆ. ಕ್ರಮ ಸಂಖ್ಯೆ 1 ರಿಂದ 34 ರವರಿಗಿನ ವೋಚರ್‌ಗಳನ್ನು ಹಾಗು ಇದಕ್ಕೆ ಸಂಬಂಧಿಸಿದ ತಃಖ್ತೆಯನ್ನು ಇದರೊಂದಿಗೆ ಲಗತ್ತಿಸಿ, ತಮ್ಮ ಮಾಹಿತಿಗಾಗಿ ಸಲ್ಲಿಸಿದೆ.

2. ಧನಾದೇಶ ಸಂಖ್ಯೆ:106342/19.07.2019 ರಲ್ಲಿ ರೂ.15,000/-ಗಳನ್ನು ಪಾವತಿಸಿದ್ದು, ಇದಕ್ಕೆ ಸಂಬಂಧಪಟ್ಟ ಆದೇಶ ಪತ್ರದ ಸಂಖ್ಯೆ UO.No.BNU:PAY:VEH:BED.SQUAD/139 Kolar dated:24.04.2019 ಇದರೊಂದಿಗೆ ಲಗತ್ತಿಸಿದೆ.

3. Fly-in-Squad Members ಗಳಿಗೆ ವಾಹನದ ಸೌಕರ್ಯ ಒದಗಿಸಿದ್ದು, ಇವರುಗಳಿಗೆ ಕೇವಲ ಡಿ.ಎ.ಗೆ ಮಾತ್ರ ಅವಕಾಶವಿರುತ್ತದೆ. ಆದರೆ Sitting Squad ಗೆ ವಾಹನದ ಸೌಕರ್ಯ ಒದಗಿಸಿಲ್ಲ ಆದ್ದರಿಂದ ಅವರುಗಳು ತಮ್ಮ ವಾಸಸ್ಥಳದಿಂದ ಪರೀಕ್ಷೆ ನಡೆಯುವ ಸ್ಥಳಕ್ಕೆ ಹೋಗಿ ಬರಲು ಪ್ರಯಾಣ ಮಾಡಿದ್ದಕ್ಕೆ ಕೆ.ಸಿ.ಎಸ್ ನಿಯಮ 490 (C) ರ ಪ್ರಕಾರ ಅವಕಾಶವಿರುತ್ತದೆ. ಅದರಂತೆ ಒಟ್ಟು ರೂ.24,025/-ಗಳನ್ನು 4 ಧನಾದೇಶಗಳಲ್ಲಿ ಪಾವತಿಸಲಾಗಿದೆ.

   ಆದುದರಿಂದ ಈಗಾಗಲೇ ಟಿ.ಎ.ಗಾಗಿ ಪಾವತಿಸಿರುವ ಮೊತ್ತ ವಸೂಲಿ ಮಾಡುವ ಪ್ರಮೇಯ ಉದ್ಭವಿಸುದಿಲ್ಲಾ.

ಮೇಲ್ಕಂಡ ಎಲ್ಲಾ ಅಂಶಗಳನ್ನು, ಹಾಗು ಸಂಬಂಧಪಟ್ಟ ದಾಖಲಾತಿಗಳೊಂದಿಗೆ ತಮ್ಮ ಅವಗಾಹನೆಗೆ ಸಲ್ಲಿಸಿದೆ.

ದಯವಿಟ್ಟು ಆಕ್ಷೇಪಣೆಯಲ್ಲಿಟ್ಟಿರುವ ಒಟ್ಟು ಮೊತ್ತ ರೂ.1,41,440/- (1,26,440+15,000) ಗಳನ್ನು ಹಾಗು ವಸೂಲಾತಿಗೆ ಸೂಚಿಸಿರುವ ಮೊತ್ತ ರೂ.24,025/-ಗಳನ್ನು ಆಡಿಟ್ ವರದಿಯಿಂದ ಕೈ ಬಿಡುವಂತೆ ತಮ್ಮಲ್ಲಿ ಕೋರಿದೆ.

| | |
|---|---|
| **22.5 ಪರೀಕ್ಷಾ ಮತ್ತು ಸಂಯೋಜನಾ ಕಾರ್ಯಕ್ಕೆ ಸಂಬಂಧಿಸಿದ ಟ್ರಾವೆಲ್ಸ್ ಬಿಲ್ಲುಗಳಲ್ಲಿನ ನ್ಯೂನತೆಗಳು**<br><br>2018–19 ಮತ್ತು 2019–20ನೇ ಸಾಲಿನ ಟ್ರಾವೆಲ್ಸ್ ಬಿಲ್ಲುಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ನ್ಯೂನತೆಗಳು ಕಂಡುಬಂದಿದ್ದು, ಈ ಸಂಬಂಧ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:65/2020–21, ದಿನಾಂಕ:22.07.2021ರಲ್ಲಿ ವಿವರ ಕೋರಲಾಗಿ ಸಮರ್ಪಕವಾದ ವಿವರಣೆಗಳಿರುವುದಿಲ್ಲ. ಆದುದರಿಂದ ಟ್ರಾವೆಲ್ಸ್ ಬಿಲ್ಲುಗಳನ್ನು ಪಾವತಿಸಿರುವ ಒಟ್ಟು ಮೊತ್ತ ರೂ.15,07,642/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ ಮತ್ತು ಆದಾಯ ತೆರಿಗೆ ಮೊತ್ತ ರೂ.30,152/– ಗಳನ್ನು ವಸೂಲಾತಿಯಲ್ಲಿಡಲಾಗಿದೆ.<br><br>1) ಕೆಲವೊಂದು ಟ್ರಾವೆಲ್ಸ್ ಬಿಲ್ಲುಗಳಲ್ಲಿ ಟ್ರಿಪ್ ಶೀಟ್ ಇರುವುದಿಲ್ಲ.<br>2) ಪಾವತಿಗೆ ಸಂಬಂಧಿಸಿದಂತೆ, ಯಾವುದೇ ದರಪಟ್ಟಿ ಟೆಂಡರ್ ಪ್ರಕ್ರಿಯೆ ಕೈಗೊಂಡಿರುವುದಿಲ್ಲ.<br>3) ಸದರಿ ಪಾವತಿಗೆ ಆದಾಯ ತೆರಿಗೆ ಕಾಯ್ದೆ 1961 ನಿಯಮ 1945ರ ಪ್ರಕಾರ ಶೇ.2 ರಷ್ಟು ಆದಾಯ ತೆರಿಗೆ ಕಟಾಯಿಸಿರುವುದಿಲ್ಲ. ವಿವರಗಳನ್ನು ಅನುಬಂಧ 28 ರಲ್ಲಿ ಲಗತ್ತಿಸಿದೆ.<br>ವಿವರಗಳನ್ನು **ಅನುಬಂಧ– 28** ರಲ್ಲಿ ಲಗತ್ತಿಸಿದೆ. | 22.5) |

| 23.3 ಡಿಸಿ ಬಿಲ್ಲುಗಳಿಗೆ ಸಂಬಂಧಿಸಿದ ನ್ಯೂನತೆಗಳು | |
| --- | --- |
| 2017-18 ರಿಂದ 2019-20ನೇ ಸಾಲಿನ ವಿಶ್ವವಿದ್ಯಾಲಯದ ಡಿಸಿ ಬಿಲ್ಲುಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ನ್ಯೂನತೆಗಳು ಕಂಡುಬಂದಿರುತ್ತದೆ.<br><br>1) ಬಿಲ್ಲುಗಳಿಗೆ ದರಪಟ್ಟಿ ಇರುವುದಿಲ್ಲ. Manual of Contingenciesರ ಪ್ರಕಾರ ರೂ.5,000/- ಗಳನ್ನು ಮೀರಿದ ಖರೀದಿಗೆ ದರಪಟ್ಟಿ ಆಹ್ವಾನಿಸಿ ಖರೀದಿ ಪ್ರಕ್ರಿಯೆ ಕೈಗೊಳ್ಳಬೇಕಾಗಿರುತ್ತದೆ.<br>2) ದರಪಟ್ಟಿಗಳಲ್ಲಿ ಜಿ.ಎಸ್.ಟಿ. ಸಂಖ್ಯೆ/ಟಿನ್ ಸಂಖ್ಯೆ/ದಿನಾಂಕ ಇರುವುದಿಲ್ಲ.<br>3) ತುಲನಾತ್ಮಕ ಪಟ್ಟಿಗೆ ಸಂಬಂಧಪಟ್ಟ ಅಧಿಕಾರಿಗಳಿಂದ ದೃಢೀಕರಣವಿರುವುದಿಲ್ಲ.<br>4) ಆದಾಯ ತೆರಿಗೆ ಕಾಯ್ದೆ 1964 ಸೆಕ್ಷನ್ (194 ಸಿ) ರ ಪ್ರಕಾರ ಶೇ.2 ರಷ್ಟು ಆದಾಯ ತೆರಿಗೆ ಕಟಾಯಿಸಿರುವುದಿಲ್ಲ.<br>5) ಕೆಲವೊಂದು ಬಿಲ್ಲುಗಳು, ದರಪಟ್ಟಿಗಳು ಕೈಬರಹದಲ್ಲಿರುತ್ತದೆ.<br><br>ಈ ಸಂಬಂಧ ಆಡಿಟ್ ವಿವರಣಾ ಪತ್ರ ಸಂಖ್ಯೆ:13/20-21, 13a/20-21,14a/20-21, ದಿನಾಂಕ:21.03.2021/22.03.2021/26.03.2021 ರಲ್ಲಿ ವಿವರ ಕೋರಿದ್ದರೂ, ಸಮಂಜಸವಾದ ವಿವರಣೆಗಳಿರುವುದಿಲ್ಲ. ಆದುದರಿಂದ, ರೂ.8,74,835/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ ಮತ್ತು ರೂ.3,811/-ಗಳನ್ನು ವಸೂಲಾತಿಯಲ್ಲಿಡಲಾಗಿದೆ. ವಿವರಗಳನ್ನು **ಅನುಬಂಧ- 30** ರಲ್ಲಿ ಲಗತ್ತಿಸಿದೆ. | 23.3) |

**ವಿತ್ತಾಧಿಕಾರಿಗಳು,**
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ,
ಟಮಕ, ಕೋಲಾರ-563103